"ಉನ್ನತ ಶಿಕ್ಷಣದಲ್ಲಿ ಸಾಲ ಸೌಲಭ್ಯಗಳು - ಉಡುಪಿ ತಾಲೂಕಿನ ಫಲಾನುಭವಿಗಳ ಒಂದು ಅಧ್ಯಯನ"

ಕನ್ನಡ ವಿಶ್ವವಿದ್ಯಾಲಯಕ್ಕೆಎಂ.ಫಿಲ್. ಪದವಿಗಾಗಿ ಅರ್ಪಿಸಿದ ನಿಬಂಧ

(ಅಭಿವೃದ್ಧಿಅಧ್ಯಯನ)

Kannada University Logo

ಸಂಶೋಧಕರು

ಮಹೇಶ್ ಪಿ.ಜಿ.

ನೋಂದಣಿ ಸಂಖ್ಯೆ: 151111030062

ಮಾರ್ಗದರ್ಶಕರು

ಡಾ. ವೈ.ರವೀಂದ್ರನಾಥರಾವ್

ಪ್ರಾಂಶುಪಾಲರು ಮತ್ತು ಸಮಾಜ ಶಾಸ್ತ್ರ ವಿಭಾಗದ ಮುಖ್ಯಸ್ಥರು

ಸೈಂಟ್ ಮೇರೀಸ್ ಸಿರಿಯನ್ ಕಾಲೇಜು, ಬ್ರಹ್ಮಾವರ, ಉಡುಪಿ ಜಿಲ್ಲೆ

ಕರ್ನಾಟಕಥಿಯೋಲಾಜಿಕಲ್ ಸಂಶೋಧನಾಕೇಂದ್ರ

ಬಲ್ಮಠ, ಮಂಗಳೂರು –೫೭೫ ೦೦೧

ಜುಲೈ, 2016

"ಉನ್ನತ ಶಿಕ್ಷಣದಲ್ಲಿ ಸಾಲ ಸೌಲಭ್ಯಗಳು – ಉಡುಪಿ ತಾಲೂಕಿನ ಫಲಾನುಭವಿಗಳ ಒಂದು ಅಧ್ಯಯನ"

ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಅರ್ಪಿಸಿದ ನಿಬಂಧ
(ಅಭಿವೃದ್ಧಿ ಅಧ್ಯಯನ)

Kannada University Logo

ಸಂಶೋಧಕರು

ಮಹೇಶ್ ಪಿ.ಜಿ.
ನೋಂದಣಿ ಸಂಖ್ಯೆ: 151111030062

ಮಾರ್ಗದರ್ಶಕರು

ಡಾ। ವೈ. ರವೀಂದ್ರನಾಥ ರಾವ್
ಪ್ರಾಂಶುಪಾಲರು ಮತ್ತು ಸಮಾಜ ಶಾಸ್ತ್ರ ವಿಭಾಗದ ಮುಖ್ಯಸ್ಥರು
ಸೈಂಟ್ ಮೇರೀಸ್ ಸಿರಿಯನ್ ಕಾಲೇಜು, ಬ್ರಹ್ಮಾವರ, ಉಡುಪಿ ಜಿಲ್ಲೆ

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು –೫೭೫ ೦೦೧

ಜುಲೈ, 2016

ಯೋಗ್ಯತಾ ಪತ್ರ

ಮಹೇಶ್ ಪಿ.ಜಿ. ಅವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ **"ಉನ್ನತ ಶಿಕ್ಷಣದಲ್ಲಿ ಸಾಲ ಸೌಲಭ್ಯಗಳು – ಉಡುಪಿ ತಾಲೂಕಿನ ಫಲಾನುಭವಿಗಳ ಒಂದು ಅಧ್ಯಯನ"** ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು **ಎಂ.ಫಿಲ್**. ಪದವಿ ಪ್ರಾಪ್ತಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕೆಂದು ಸಿದ್ಧಪಡಿಸಿದ್ದಾರೆ. ಈ ಸಂಪ್ರಬಂಧವು ಸಂಶೋಧಕರ ಸ್ವಂತ ಪರಿಶ್ರಮ, ವಿಶ್ಲೇಷಣೆ, ಅಭಿಪ್ರಾಯ ಸಂಗ್ರಹ ಮತ್ತು ಸಂಶೋಧನೆಯ ಫಲ ಸ್ವರೂಪವಾಗಿದೆ. ಇವರು ಸಂಪ್ರಬಂಧದ ವಿಷಯವನ್ನು ಅಥವಾ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ ಅಥವಾ ಇನ್ನಿತರ ಉದ್ದೇಶಗಳಿಗಾಗಿಯಾಗಲಿ ಬಳಸಿಕೊಂಡಿಲ್ಲ.

ಡಾ. ವೈ. ರವೀಂದ್ರನಾಥ್ ರಾವ್
ಸಂಶೋಧನಾ ಮಾರ್ಗದರ್ಶಕರು
ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ

Dr. Y. Ravindranath Rao
M.A., PGDGS, Ph.D.
PRINCIPAL
St. Mary's Syrian College
BRAHMAVAR - 576 213 (Udupi Dist.)

ದಿನಾಂಕ: 20.07.2016
ಸ್ಥಳ : ಮಂಗಳೂರು

ಪ್ರಮಾಣ ಪತ್ರ

ಕನ್ನಡ ವಿಶ್ವ ವಿದ್ಯಾಲಯ, ಹಂಪಿಗೆ **ಎಂ. ಫಿಲ್.** ಪದವಿಗಾಗಿ ಸಾದರ ಪಡಿಸಿದ **"ಉನ್ನತ ಶಿಕ್ಷಣದಲ್ಲಿ ಸಾಲ ಸೌಲಭ್ಯಗಳು – ಉಡುಪಿ ತಾಲೂಕಿನ ಫಲಾನುಭವಿಗಳ ಒಂದು ಅಧ್ಯಯನ"** ಈ ಸಂಪ್ರಬಂಧವು ನನ್ನ ಸ್ವತಂತ್ರ ಕೃತಿಯಾಗಿದ್ದು ವಿಶ್ಲೇಷಣೆ ಮತ್ತು ಅಧ್ಯಯನದ ಫಲೋದಯವಾಗಿದೆ. ಮಂಗಳೂರಿನ ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರದಲ್ಲಿ **ಡಾ। ವೈ. ರವೀಂದ್ರನಾಥ್ ರಾವ್** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಈ ಸಂಪ್ರಬಂಧವನ್ನು ಬೇರಾವುದೇ ಪದವಿ, ಡಿಪ್ಲೋಮಾ ಅಥವಾ ತತ್ಸಮಾನ ಉಪಾಧಿಗಳ ಪ್ರಾಪ್ತಿಗಾಗಿ ಅಥವಾ ಆರ್ಥಿಕ ಲಾಭಕ್ಕಾಗಿ ಇಡಿಯಾಗಿ ಅಥವಾ ಬಿಡಿಯಾಗಿ ಬಳಸಿಕೊಂಡಿಲ್ಲವೆಂದು ನಾನು ಈ ಮೂಲಕ ದೃಢಪಡಿಸುತ್ತೇನೆ.

Mahesh

ಮಹೇಶ್ ಪಿ.ಜಿ.
ಸಂಶೋಧಕರು
ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು

ದಿನಾಂಕ: 20.07.2016
ಸ್ಥಳ : ಮಂಗಳೂರು

ಪರಿವಿಡಿ

ಕೋಷ್ಟಕದ ಪಟ್ಟಿ

ನಕ್ಷೆಗಳ ಪಟ್ಟಿ

ಅಧ್ಯಾಯ –೧

ಪೀಠಿಕೆ

ಅಧ್ಯಾಯ ೧

ಪೀಠಿಕೆ

ಹಿಂದಿನ ಕಾಲದಲ್ಲಿ ಜನರು ತಮ್ಮ ಹಣ ಹಾಗೂ ಇತರೆ ಬೆಲೆಬಾಳುವ ಸ್ವತ್ತುಗಳನ್ನು ದೇವಾಲಯಗಳಲ್ಲಿ ಇರಿಸುತ್ತಿದ್ದರು.ದೇವಾಲಯವು ಪುಣ್ಯದ ಸ್ಥಳ ಮತ್ತು ಅಲ್ಲಿ ಇರಿಸಿದ ಸ್ವತ್ತುಗಳು ನಿರಾತಂಕವಾಗಿ ಇರುತ್ತಿದ್ದವು ಎಂಬ ಕಾರಣದಿಂದ ಜನರು ದೇವಾಲಯಗಳಲ್ಲಿ ಹಣವನ್ನು ಭದ್ರವಾಗಿ ಇಡುತ್ತಿದ್ದರು.ದೇವಾಲಯಗಳ ಈ ಕಾರ್ಯವೇ ಬ್ಯಾಂಕು ಹುಟ್ಟಿಕೊಳ್ಳಲು ಕಾರಣವಾಗಿದೆ ಎಂದರೆ ತಪ್ಪಾಗಲಾರದು.ಬ್ಯಾಂಕ್ ತನ್ನ ಬಳಿ ದೇಶದ ಹಣ ಮತ್ತು ಬೆಲೆಬಾಳುವ ವಸ್ತುಗಳನ್ನು ಇರಿಸಿಕೊಂಡು ಅದರಿಂದ ಬಂದ ಲಾಭಾಂಶದಿಂದ ದೇಶದ ಅಭಿವೃದ್ಧಿಗೆ ಸಹಕಾರವನ್ನು ನೀಡುತ್ತಿದೆ.ಅಲ್ಲದೇ ಬ್ಯಾಂಕು ತನ್ನ ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಣೆ ಮಾಡುತ್ತಲಿದೆ.

ಭಾರತದ ಬ್ಯಾಂಕ್‌ಗಳು ತುಂಬಾ ಪುರಾತನವೂ ಭದ್ರವಾಗಿಯೂ ಮತ್ತು ಅತೀ ವೇಗದಲ್ಲಿ ಬೆಳೆಯುತ್ತಲಿರುವ ಹಣಕಾಸಿನ ಮಧ್ಯವರ್ತಿಯಾಗಿದೆ.ಬ್ಯಾಂಕ್‌ಗಳು ಸಾರ್ವಜನಿಕರಲ್ಲಿ ಉಳಿತಾಯ ಮನೋಭಾವನೆ ಬೆಳೆಸುವುದಲ್ಲದೇ ಜನರಿಗೆ ಅಗತ್ಯವಿದ್ದಾಗ ಹಣವನ್ನು ಸಾಲವಾಗಿ ನೀಡಿ ಅವರ ಅಭಿವೃದ್ಧಿಯಲ್ಲಿಯೂ ತನ್ನ ಬಹುಪೂರ ಸೇವೆಯನ್ನು ನೀಡುತ್ತಿದೆ. "ಭಾರತದ ಬ್ಯಾಂಕಿಂಗ್ ಸೇವೆಯು ಒಂದು ಅನನ್ಯ ಸೇವೆಯಾಗಿದ್ದು ಈ ತರಹದ ಬ್ಯಾಂಕ್‌ನ ಸೇವೆ ಜಗತ್ತಿನಲ್ಲಿ ಬೇರೆಕಡೆ ವಿರಳವಾಗಿದೆ.ಈ ಹಿನ್ನೆಲೆಯಲ್ಲಿ ಬ್ಯಾಂಕಿಂಗ್ ಸೇವೆಯನ್ನು ಸಮೀಪದಿಂದ ನೋಡುವುದರಿಂದ ಬ್ಯಾಂಕ್‌ನ ಸಿದ್ಧಾಂತವನ್ನು ಪರಿಶೀಲಿಸುವುದರಿಂದ ಬ್ಯಾಂಕಿಂಗ್‌ನ ನಿಲುವು, ಕಾರ್ಯಕ್ರಮ ಹಾಗೂ ವ್ಯವಹಾರದ ಬಗ್ಗೆ ವಿಮರ್ಶೆ ಮಾಡುವುದು ಅಗತ್ಯವಾಗಿದೆ.

ಬ್ಯಾಂಕು ನಮ್ಮ ದೇಶೀಯ ಸ್ವರೂಪವನ್ನು ಹೊಂದಿದ್ದು ಇದಕ್ಕೆ ಒಂದು ಇತಿಹಾಸವಿದೆ ಮತ್ತು ಇದರ ಹುಟ್ಟು ಪ್ರಾಚೀನ ಕಾಲದ್ದಾಗಿದೆ ಎನ್ನುವುದನ್ನು ಶೋಧಿಸಬಹುದಾಗಿದೆ.

ಇಂದು ಜಗತ್ತು ಅಭಿವೃದ್ಧಿ ಹೊಂದಿದೆ. ಹಾಗೆಯೇ ಹಣಕಾಸಿನ ಬೆಳವಣಿಗೆಯು ಒಂದು ಮುಖ್ಯ ಪ್ರಕ್ರಿಯೆಯಾಗಿದೆ. ಇದಕ್ಕೆ ಮುಖ್ಯವಾಗಿ ಬ್ಯಾಂಕ್‌ನಲ್ಲಿ ಕೂಡಿಟ್ಟ ಹಣವೇ ನಮ್ಮ ದೈನಂದಿನ ಉತ್ಪಾದನೆ ಮತ್ತು ಬಳಕೆಗೆ ಬೇಕಾದ ವಸ್ತುಗಳನ್ನು ಕೊಳ್ಳಲು ಮತ್ತು ಮಾರಾಟ ಮಾಡಲು ಸಹಕರಿಸುತ್ತಿದೆ.

ಬ್ಯಾಂಕುಗಳ ಎರಡು ಪ್ರಮುಖ ಕಾರ್ಯವಾದ ಹಣವನ್ನು ಠೇವಣಿ ಇರಿಸುವ ಮತ್ತು ಸಾಲ ರೂಪದಲ್ಲಿ ನೀಡುವ ವಿಚಾರವನ್ನೇ ಉತ್ತಮ ಸೇವೆ ಎಂದು ಹೇಳಬಹುದು.ಬ್ಯಾಂಕಿನವರು ಎಲ್ಲಾ ರೀತಿಯ ಠೇವಣಿಯನ್ನು ತೆಗೆದುಕೊಂಡು, ಹಣದ ಅವಶ್ಯಕತೆ ಇರುವವರಿಗೆ ಕಡಿಮೆ ಬಡ್ಡಿಯಲ್ಲಿ ಸಾಲವನ್ನು ನೀಡಿ ಬ್ಯಾಂಕುಗಳು ತಮ್ಮ ಸಾಮಾಜಿಕ ಕರ್ತವ್ಯವನ್ನು ಮಾಡುತ್ತಿದೆ.ಇದೇ ವಿಚಾರವಾಗಿಯೇ ಶಿಕ್ಷಣ ಸಾಲ

ಯೋಜನೆಯ ವಿಶೇಷತೆ, ಅದರ ಲಕ್ಷಣಗಳು ಹಾಗೂ ಶಿಕ್ಷಣ ಸಾಲ ಪಡೆದ ಗ್ರಾಹಕರ ಸಂತೃಪ್ತಿಯ ಬಗ್ಗೆ ಪ್ರಸ್ತುತ ಅಧ್ಯಯನ ಕೈಗೊಳ್ಳಲಾಗಿದೆ.

'ಬ್ಯಾಂಕು' ಪರಿಕಲ್ಪನೆ

ಬ್ಯಾಂಕು ಒಂದು ಹಣಕಾಸಿಗೆ ಸಂಬಂಧಿಸಿದ ಸಂಸ್ಥೆ.ಇದು ಗ್ರಾಹಕರಿಂದ ಹಣ ಪಡೆಯುತ್ತದೆ ಹಾಗೆಯೇ ಸಾಲ ರೂಪದಲ್ಲಿ ಹಣವನ್ನು ನೀಡುತ್ತದೆ.ಬ್ಯಾಂಕು ಹಣವನ್ನು ಒಂದು ಖಾತೆಯಿಂದ ಇನ್ನೊಂದು ಖಾತೆಗೆ ಹಣವನ್ನು ವರ್ಗಾವಣೆ ಮಾಡುತ್ತದೆ.ಬ್ಯಾಂಕಿನಲ್ಲಿ ಇಂದು ಹಲವಾರು ಸೇವೆಗಳು ಲಭ್ಯವಿರುತ್ತವೆ.

ಬ್ಯಾಂಕ್‌ನ ವ್ಯಾಖ್ಯೆ

ಜಾನ್ ಪೇಜರ್‌ರ ಪ್ರಕಾರ "ಬ್ಯಾಂಕು ಒಂದು ಸಂಸ್ಥೆಯಾಗಿದ್ದು ಇದು ಹಣವನ್ನು ಠೇವಣಿ ರೂಪದಲ್ಲಿ ಪಡೆಯುತ್ತದೆ ಮತ್ತು ಹಣವನ್ನು ನೀಡುತ್ತದೆ. ಚೆಕ್ ಅನ್ನು ನೀಡುತ್ತದೆ ಹಾಗೆಯೇ ಚೆಕ್ ಅನ್ನು ಸ್ವೀಕರಿಸುತ್ತದೆ". (ಪ್ರಸ್ತಕ / ವರ್ಷ)

ಬ್ಯಾಂಕ್‌ನ ಕಾಯಿದೆ 1949ರ ಪ್ರಕಾರ, ಬ್ಯಾಂಕ್ ಹಣವನ್ನು ಇತರರಿಗೆ ಸಾಲಕೊಡಲು ಹಾಗೂ ಬೇರೆಗೆ ಹೆಚ್ಚಿನ ಬಡ್ಡಿಗೆ ಬಂಡವಾಳ ಹೂಡಲು ಗ್ರಾಹಕರಿಂದ ಹಣವನ್ನು ಸ್ವೀಕರಿಸುತ್ತದೆ.ಗ್ರಾಹಕರಿಗೆ ಬೇಕಾದ ಸಮಯದಲ್ಲಿ ಬ್ಯಾಂಕು ಆ ಹಣವನ್ನು ಗ್ರಾಹಕರಿಗೆ ಹಿಂತಿರುಗಿಸುತ್ತದೆ.

ಬ್ಯಾಂಕಿನ ವೈಶಿಷ್ಟ್ಯಗಳು

ಬ್ಯಾಂಕಿನ ವಿಶೇಷ ಗುಣಗಳು ಈ ಕೆಳಗಿನಂತಿವೆ.

1. ಬ್ಯಾಂಕು ಒಂದು ವಾಣಿಜ್ಯೋದ್ಯಮ ಸಂಸ್ಥೆಯಾಗಿದೆ.
2. ಬ್ಯಾಂಕು ಹಣವನ್ನು ಪಡೆಯುವುದು ಮತ್ತು ಸಾಲ ನೀಡುವ ಪ್ರಕ್ರಿಯೆ ನಡೆಸುತ್ತದೆ.
3. ಬ್ಯಾಂಕು ಹಣವನ್ನು ಪಡೆದು ಗ್ರಾಹಕರ ಖಾತೆಗೆ ಜಮಾ ಮಾಡುತ್ತದೆ.
4. ಬ್ಯಾಂಕು ತನ್ನ ಬಳಿ ಠೇವಣಿ ಬಂದ ಹಣವನ್ನು ಸಾಲ ರೂಪದಲ್ಲಿ ನೀಡಿ ಅದರಿಂದ ಬಂದ ಬಡ್ಡಿಯಿಂದ ಲಾಭ ಮಾಡುತ್ತದೆ.
5. ಬ್ಯಾಂಕನ್ನು ಒಂದು ವಿಶಿಷ್ಟವಾದ ಆರ್ಥಿಕ ಸಂಸ್ಥೆ ಎಂದು ಕರೆಯಲಾಗಿದೆ.

ಬ್ಯಾಂಕಿನ ಕಾರ್ಯಗಳು

ಬ್ಯಾಂಕಿನ ಕಾರ್ಯಗಳನ್ನು ಪ್ರಮುಖವಾಗಿ ಎರಡು ವಿಧವಾಗಿ ವಿಂಗಡಿಸಬಹುದು. ಅವುಗಳೆಂದರೆ:

1. ಪ್ರಾಥಮಿಕ ಕಾರ್ಯಗಳು
2. ಮಾಧ್ಯಮಿಕ ಕಾರ್ಯಗಳು

1. ಪ್ರಾಥಮಿಕ ಕಾರ್ಯಗಳು

- ಗ್ರಾಹಕರಿಂದ ಠೇವಣಿಗಲನ್ನು ಸಂಗ್ರಹಿಸುವುದು
- ಸಾಲ ಮತ್ತು ಮುಂಗಡಗಳ ರಚನೆ
- ಚೆಕ್ ಮತ್ತು ಪ್ಲಾಸ್ಟಿಕ್ ಕಾರ್ಡ್‌ಗಳ ಬಳಕೆ
- ಹಣ ವರ್ಗಾವಣೆ

1. ಸಾರ್ವಜನಿಕರಿಂದ ಠೇವಣಿಗಳನ್ನು ಸ್ವೀಕರಿಸುವುದು

ಬ್ಯಾಂಕಿಗೆ ಇಂದು ಒಂದು ತುಂಬಾ ಮುಖ್ಯವಾದ ಕಾರ್ಯ.ಬ್ಯಾಂಕ್ ಎಲ್ಲಾ ತರಹದ ಗ್ರಾಹಕರಿಂದ ಎಲ್ಲಾ ಮೌಲ್ಯದ ಠೇವಣಿಯನ್ನು ಕೂಡಾಸ್ವೀಕರಿಸುತ್ತದೆ.ಉಳಿತಾಯದ ದೃಷ್ಟಿಯಿಂದ ಪ್ರತಿಯೊಬ್ಬರೂ ಬ್ಯಾಂಕ್‌ನಲ್ಲಿ ಠೇವಣಿಯನ್ನು ಇಡಲು ಗ್ರಾಹಕ ಸ್ನೇಹಿ ಬ್ಯಾಂಕ್‌ಗಳ ಯೋಜನೆಗಳು ಸಹಕಾರಿಯಾಗಿದೆ. ಠೇವಣಿಗಳಲ್ಲಿ ಹಲವಾರು ಪ್ರಭೇಧಗಳಿದ್ದು ಅವುಗಳೆಂದರೆ –

- ನಿರಖು ಠೇವಣಿ
- ಚಾಲ್ತಿ ಖಾತೆ (Current Deposit)
- ಉಳಿತಾಯ ಖಾತೆ
- ಆವರ್ತಕ ಖಾತೆ
- ಗೃಹ ಸುರಕ್ಷಾ ಠೇವಣಿ ಖಾತೆ

2. ಸಾಲ ಮತ್ತು ಮುಂಗಡಗಳ ನೀಡಿಕೆ

ಬ್ಯಾಂಕ್‌ನ ಇನ್ನೊಂದುಮುಖ್ಯವಾದ ಕಾರ್ಯವೆಂದರೆ ಹಣವನ್ನು ಸಾಲವಾಗಿ ನೀಡುವಂತಹದ್ದು.ಠೇವಣಿಯ ಮುಖಾಂತರ ಸಂಗ್ರಹವಾದ ಸ್ವಲ್ಪ ಹಣವನ್ನು ಕಾಯ್ದಿರಿಸಿ ಉಳಿದ ಹಣವನ್ನು ಸಾಲವಾಗಿ ಮತು ಮುಂಗಡವಾಗಿ ಗ್ರಾಹಕರಿಗೆ ನೀಡಲಾಗುತ್ತದೆ.ವಾಣಿಜ್ಯ ಬ್ಯಾಂಕುಗಳು ತಮ್ಮ ಗ್ರಾಹಕರಿಗ ಅಥವಾ ಸಾರ್ವಜನಿಕರಿಂದ ಭದ್ರತೆಯನ್ನು ಪಡೆಯುವುದರೊಂದಿಗೆ ಸಾಲವನ್ನು ನೀಡಲಾಗುತ್ತದೆ.ವಿವಿಧ ರೀತಿಯ ಸಾಲ ಮತ್ತು ಮುಂಗಡಗಳು ಇಂತಿವೆ.

- ಸಾಲಗಳು
- ಮೀರೆಳೆತ
- ನಗದು ಸಾಲ
- ಬಿಲ್ ಆಫ್ ಎಕ್ಸ್‌ಚೇಂಜ್‌ನಲ್ಲಿ ಕಡಿತ

ಬ್ಯಾಂಕಿನಲ್ಲಿ ಸಾಲ ಯೋಜನೆಯ ನಿರ್ಮಾಣ

ಬ್ಯಾಂಕ್‌ಗಳಲ್ಲಿ ಗ್ರಾಹಕರಿಗೆ ಮತ್ತು ಇತರೆ ವ್ಯಾಕ್ತಿಗಳಿಗೆ ಸಾಲ ನೀಡುವ ವ್ಯವಸ್ಥೆಯು ಮಹತ್ತರವಾಗಿದ್ದು ಇಲ್ಲಿ ಮುಖ್ಯವಾಗಿ ಹಣ ವರ್ಗಾವಣೆಯ ಕಾರ್ಯ ಮಾತ್ರವಲ್ಲದೆ, ಸಾಲ ಪಡೆಯುವವರ ಖಾತೆಯನ್ನು ಮೊದಲನೆಯದಾಗಿ ಪ್ರಾರಂಭಿಸಿ ನಂತರ ಆ ಖಾತೆಗೆ ಸಾಲ ಪಡೆದ ಹಣವನ್ನು ವರ್ಗಾಯಿಸಲಾಗುತ್ತದೆ.ಅಲ್ಲದೆ ಒಂದು ಠೇವಣಿಯನ್ನು ಸಹ ತೆರೆಯಲಾಗುತ್ತದೆ.

3. *ಚೆಕ್ ಮತ್ತು ಪ್ಲಾಸ್ಟಿಕ್ ಕಾರ್ಡ್‌ನ ಬಳಕೆ*

ಬ್ಯಾಂಕ್‌ನ ಪ್ರಮುಖ ಕಾರ್ಯಗಳಲ್ಲಿ ಚೆಕ್ ಮತ್ತು ಪ್ಲಾಸ್ಟಿಕ್ ಕಾರ್ಡ್‌ಗಳ ಬಳಕೆ ಕೂಡ ಒಂದು ಪ್ರಮುಖ ಅಂಶವಾಗಿದೆ.ನಾವು ಇಟ್ಟಿರುವ ಠೇವಣಿಯನ್ನು ಹಿಂಪಡೆಯಲು ಮತ್ತು ತುಂಬಾ ಮೊತ್ತದ ಹಣ ವರ್ಗಾವಣೆಯ ಸಂದರ್ಭದಲ್ಲಿ ಚೆಕ್ ಅನ್ನು ಬಳಸಲಾಗುತ್ತದೆ.ಇನ್ನು ಇತ್ತೀಚಿನ ದಿನಗಳಲ್ಲಿ ವಾಣಿಜ್ಯ ಬ್ಯಾಂಕ್‌ಗಳಲ್ಲಿ ಚೆಕ್‌ನ ಕಾರ್ಯಗಳನ್ನು ಪ್ಲಾಸ್ಟಿಕ್ ಕಾರ್ಡ್ ಮುಖಾಂತರ ನಡೆಸಲಾಗುತ್ತಿದೆ.

ಉದಾ: ವೀಸಾ ಮತ್ತು ಮಾಸ್ಟರ್ ಕಾರ್ಡ್ ಈ ಎರಡು ಪ್ರಮುಖ ಕಾರ್ಡ್‌ಗಳು ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸುವ ಮತ್ತು ನಮ ಬಳಕೆಗೆ ಉಪಯೋಗಿಸಬಹುದಾದ ಕಾರ್ಡ್‌ಗಳಾಗಿವೆ.

4. *ಹಣ ವರ್ಗಾವಣೆ*

ಹಣ ವರ್ಗಾವಣೆ ಎಂದರೆ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಅಥವಾ ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಸುಲಭವಾಗಿ ಖಾತೆಯಿಂದ ಖಾತೆಗೆ ವರ್ಗಾಯಿಸಬಹುದಾದಂತಹ ಕಾರ್ಯವಾಗಿದೆ. ಪ್ರಮುಖವಾಗಿ ಹಣ ವರ್ಗಾವಣೆಯನ್ನು ಬ್ಯಾಂಕ್ ಡ್ರಾಫ್ಟ್ ಮುಖೇನ, ಮೇಲ್ ವರ್ಗಾವಣೆ ಮುಖೇನ, ಇಲೆಕ್ಟ್ರಾನಿಕ್ ಫಂಡ್ ವರ್ಗಾವಣೆ ಮುಖೇನ ನಡೆಸಬಹುದಾಗಿದೆ.

2. **ಮಾಧ್ಯಮಿಕ ಕಾರ್ಯಗಳು**

ವಾಣಿಜ್ಯ ಬ್ಯಾಂಕುಗಳು ಪ್ರಾಥಮಿಕ ಕಾರ್ಯಗಳೊಂದಿಗೆ ಮಾಧ್ಯಮಿಕ ಕಾರ್ಯಗಳನ್ನು ನಡೆಸುತ್ತವೆ. ಅವೆಂದರೆ ಬ್ಯಾಂಕ್‌ಗಳು ಗ್ರಾಹಕರಿಗೆ ಮಧ್ಯವರ್ತಿಯಾಗಿ ಕಾರ್ಯನಿರ್ವಹಿಸುತ್ತದೆ ಮತ್ತು ಬ್ಯಾಂಕ್‌ಗಳು ಸೇವೆಯನ್ನು ಒದಗಿಸುವ ಸಂಸ್ಥೆಯಂತೆಯೂ ವರ್ತಿಸುತ್ತದೆ.

1. ಸಾಲದ ಹಣ ಸಂಗ್ರಹಿಸುತ್ತದೆ.
2. ಲಾಭಾಂಶವನ್ನು ಸಂಗ್ರಹಿಸುತ್ತದೆ.
3. ಬ್ಯಾಂಕ್ ಕೆಲವೊಮ್ಮೆ ಪಾರುಪತ್ಯಗಾರನಾಗಿ ಅಥವಾ ಸಹ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತದೆ.
4. ಭದ್ರತೆಗಾಗಿ ಕೊಂಡು ಕೊಳ್ಳುವಿಕೆ ನಡೆಸುವಂತಹದ್ದು.
5. ಪ್ರತಿನಿಧಿಯಾಗಿ ಮತ್ತು ಪಾಲುಪತ್ಯೇದಾರನಾಗಿ ವರ್ತಿಸುತ್ತದೆ.
6. ಹಣವನ್ನು ವರ್ಗಾವಣೆ ಮಾಡಲು ಸಹಕರಿಸುತ್ತದೆ.
7. ವಿದೇಶೀ ಹಣ ವರ್ಗಾವಣೆ ಕಾರ್ಯ ನಡೆಸುತ್ತದೆ.
8. ಸರಕಾರದ ಅಥವಾ ಸ್ಥಳೀಯ ಪ್ರತಿನಿಧಿಯಾಗಿ ವರ್ತಿಸುತ್ತದೆ.
9. ಆಡಳಿತಾಧಿಕಾರಿಯಾಗಿಯೂ ಸಹ ವರ್ತಿಸುತ್ತದೆ.

ಸಾಮಾನ್ಯ ಸೇವೆಗಳು

ವಾಣಿಜ್ಯ ಬ್ಯಾಂಕ್‌ಗಳು ಮೇಲಿನ ಸೇವೆಗಳ ಹೊರತಾಗಿ ಹಲವಾರು ಇತರೆ ಸಾಮಾನ್ಯ ಸೇವೆಗಳನ್ನು ನಡೆಸುತ್ತಲಿವೆ. ಅವುಗಳೆಂದರೆ

1. ಬೆಲೆಬಾಳುವ ವಸ್ತುಗಳ ರಕ್ಷಣೆ ನಡೆಸುವಂತಹದ್ದು.
2. ಭದ್ರತಾ ಸೇವೆಗಳು
3. ಖಾತರಿ ಪತ್ರ
4. ಹಣ ವರ್ಗಾವಣೆ
5. ಮಾಹಿತಿಗಳನ್ನು ನೀಡುವುದು
6. ನ್ಯಾಯ ವಿಮರ್ಶಕನಂತೆ ವರ್ತಿಸುತ್ತದೆ
7. ಉಡುಗೊರೆ ಚೆಕ್‌ಗಳನ್ನು ಹೊರಡಿಸುವುದು

ಭಾರತದಲ್ಲಿ ಮುಂದಿನ ದಿನಗಳಲ್ಲಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕಂಡು ಬರಬಹುದಾದ ಸವಾಲುಗಳು

- ಬ್ಯಾಂಕ್‌ಗಳು ಮುಂದಿನ ದಿನಗಳಲ್ಲಿ ವಿಶ್ವ ಮಾರುಕಟ್ಟೆಗೆ ಪ್ರವೇಶಿಸುವ ಸಾಧ್ಯತೆಗಳು ಹೆಚ್ಚಾಗಿವೆ. ಕಾರಣ ವಿಶ್ವ ಮಾರುಕಟ್ಟೆಯು ಮುಕ್ತವಾಗಿದೆ. ತಾಂತ್ರಿಕವಾಗಿ ಅಭಿವೃದ್ಧಿ ಹೊಂದಿದ ಮತ್ತು ಕಟ್ಟು ಪಾಡುಗಲನ್ನು ಕಡಿಮೆ ಮಾಡಿದುದರಿಂದಲಾಗಿ ಉತ್ತಮ ಸೇವೆಯನ್ನು ವಿಶ್ವ ಮಟ್ಟಕ್ಕೆ ನೀಡುವ ಅವಕಾಶವಿದೆ.

- ಬ್ಯಾಂಕ್‌ಗಳು ಜಾಗತಿಕ ಮಟ್ಟದಲ್ಲಿ ಬೆಳೆಯ ಬೇಕಾದರೆ ಬ್ಯಾಂಕ್‌ಗಳು ಸ್ಪರ್ಧಾತ್ಮಕತೆಯನ್ನು ಬದಿಗಿಟ್ಟು ಎಲ್ಲಾ ಬ್ಯಾಂಕ್‌ಗಳು ಒಂದಾಗಿ ಸಹಯೋಗದೊಂದಿಗೆ ವಿಶ್ವ ಮಾರುಕಟ್ಟೆಯಲ್ಲಿ ಉತ್ತಮವಾದ ಸೇವೆ ಕೊಡಲು ಸಾಧ್ಯ ಮತ್ತು ಹೆಚ್ಚು ವಿದೇಶೀ ಗ್ರಾಹಕರನ್ನು ಸೆಳೆಯಲು ಸಾಧ್ಯ.

- ಬ್ಯಾಂಕ್‌ನ ಎಲ್ಲಾ ಶಾಖೆಗಳು ಕೋರ್ ಬ್ಯಾಂಕಿಂಗ್‌ನ ವ್ಯವಸ್ಥೆಯನ್ನು ಹೊಂದಿ ಗ್ರಾಹಕರಿಗೆ ಅತೀ ಸುಲಭವಾಗಿ ಮತ್ತು ಶೀಘ್ರವಾಗಿ ಕಾರ್ಯಗಳನ್ನು ಮುಗಿಸಿ ಕೊಟ್ಟರೆ ಮತ್ತು ಅತ್ಯುತ್ತಮ ಸಂಪರ್ಕ ಸಾಧನಗಳಿಂದ ವ್ಯೆಚಾರಿಕತೆಯನ್ನು ವೃದ್ಧಿಸಿಕೊಳ್ಳಬೇಕು.

- ಬ್ಯಾಂಕ್‌ಗಳು ತಮ್ಮ ಎಲ್ಲಾ ಗ್ರಾಹಕರಿಗೆ ಎ.ಟಿ.ಎಂ., ಮೊಬೈಲ್ ಬ್ಯಾಂಕಿಂಗ್, ಇಂಟರ್‌ನೆಟ್ ಬ್ಯಾಂಕಿಂಗ್ ಹೀಗೆ ಮುಂದುವರಿದ ತಂತ್ರಜ್ಞಾನ ಸೇವೆಗಳನ್ನು ಒದಗಿಸಿ ತಮ್ಮ ಗ್ರಾಹಕರಿಗೆ ಹೆಚ್ಚಿನ ಸಹಕಾರವನ್ನು ನೀಡಬೇಕಾಗಿದೆ. ಅಲ್ಲದೇ ಬ್ಯಾಂಕ್‌ನಲ್ಲಿ ಹಣಕಾಸಿನ ವರ್ಗಾವಣೆಯನ್ನು ಕರಾರುವಕ್ ಆಗಿ ಅತೀ ಶೀಘ್ರವಾಗಿ ಮಾಡುವುದರಿಂದ ಬ್ಯಾಂಕ್‌ನ ವರ್ಚಸ್ಸು ವೃದ್ಧಿಸುತ್ತದೆ.

- ಬ್ಯಾಂಕ್‌ನಲ್ಲಿ ಸಿಬ್ಬಂದಿಗಳ ಆಯ್ಕೆ ಪ್ರಕ್ರಿಯೆಯಲ್ಲಿಯೂ ಹೆಚ್ಚಿನ ಒತ್ತನ್ನು ಕೊಡಬೇಕಾದ ಸಂದರ್ಭ ಬಂದಿದೆ. ಕಾರಣ ಮುಂದುವರಿದ ತಂತ್ರಜ್ಞಾನಗಳ ಬಳಕೆ ಮಾಡಲು ಬ್ಯಾಂಕ್‌ನಲ್ಲಿ ಹಿರಿಯ ಉದ್ಯೋಗಗಳಿಗೆ ತುಂಬಾ ಕಷ್ಟವಾಗುತ್ತದೆ. ಆದುದರಿಂದ ಹೆಚ್ಚಾಗಿ ಯುವಕ ಯುವತಿಯರಿಗೆ ಅವಕಾಶ ನೀಡಿ ಬ್ಯಾಂಕ್‌ನ ಸೇವೆಗಳು ಉತ್ತಮವಾಗಿ ನಿರ್ವಹಣೆಯಾಗುವಂತೆ ಕ್ರಮಕೈಗೊಳ್ಳಬೇಕಾಗಿದೆ.

- ಬ್ಯಾಂಕ್‌ಗಳು ಕೇವಲ ಸೇವೆಗಳನ್ನು ನೀಡುವುದಕ್ಕಾಗಿ ಮಾತ್ರ ಒತ್ತನ್ನು ಕೊಡದೆ ಗುಣಮಟ್ಟದ ಸೇವೆಯನ್ನು ನೀಡುವಲ್ಲಿ ಹೆಚ್ಚಿನ ಗಮನ ನೀಡಬೇಕಾಗಿದೆ.

- ಬ್ಯಾಂಕ್‌ಗಳು ತುಂಬಾ ವಿಸ್ತಾರವಾದ ತಂತ್ರಜ್ಞಾನವನ್ನು ಬಳಸುವುದರಿಂದ ವ್ಯವಹಾರವನ್ನು ಸುಲಲಿತವಾಗಿ ನಡೆಸಬಹುದು ಅಲ್ಲದೆ ಬ್ಯಾಂಕ್‌ಗಳು ಲಾಭವಾಗುವಂತೆ ಮುಂದು ವೆಚ್ಚಗಳನ್ನು ಕಡಿಮೆ ಮಾಡಿಕೊಂಡು ವ್ಯವಹಾರ ನಡೆಸಲು ಅನುಕೂಲವಾಗುವಂತೆ ವ್ಯವಹಾರವನ್ನು ವೃದ್ಧಿಸಿಕೊಳ್ಳುತ್ತಾ ಮುಂದುವರಿಯಬೇಕಾಗಿದೆ.

- ತಂತ್ರಜ್ಞಾನದ ಅಭಿವೃದ್ಧಿಯಿಂದ ಗ್ರಾಹಕರು ತುಂಬಾ ಸಂತುಷ್ಟರಾಗಿದ್ದಾರೆ. ಆದರೆ ಬ್ಯಾಂಕ್‌ನವರು ತಂತ್ರಜ್ಞಾನದ ಅವಗುಣಗಳ ಬಗ್ಗೆ ಕೂಡಾ ಹೆಚ್ಚಿನ ಗಮನ ಹರಿಸುವುದರೊಂದಿಗೆ ಹೆಚ್ಚಿನ ಹಣ ದರೋಡೆ ಹಾಗೂ ಇತರೆ ಅಪರಾಧಗಳ ತಡೆಯ ಬಗೆಗೂ ಗಮನವನ್ನು ಕೊಡಬೇಕಾಗಿದೆ.

- ಬ್ಯಾಂಕ್‌ಗಳು ಸ್ವಯಂ ಕಾಯಿದೆಗಳನ್ನು ಹೊರಡಿಸುವಲ್ಲಿ ಪ್ರಾಮುಖ್ಯತೆಯನ್ನು ಹೊಂದಿದ್ದು ಇದರಿಂದಲಾಗಿ ಉತ್ತಮ ಆಡಳಿತವನ್ನು ನಿರ್ವಹಣೆ ಮಾಡಲು ಸುಲಭವಾಗಿದೆ. ಮತ್ತು ವಿದೇಶೀ ಗ್ರಾಹಕರನ್ನು ಸೆಳೆಯುವಲ್ಲಿ ಇದು ಮಹತ್ತರವಾದ ಪಾತ್ರವನ್ನು ನಿರ್ವಹಿಸುತ್ತಲಿದೆ ಮತ್ತು ತನ್ನ ಸದಸ್ಯರಿಂದ ಉತ್ತಮವಾದ ನಿರ್ಧಾರಗಳ ಬಗ್ಗೆ ಚರ್ಚಿಸಿ ಅವಲೋಕಿಸಿ ಹಲವಾರು ಮಹತ್ತರ ಯೋಜನೆಗಳನ್ನು ಜಾರಿಗೊಳಿಸುವಲ್ಲಿ ಪಾರದರ್ಶಕವಾಗಿ ಕಾರ್ಯವನ್ನು ನಡೆಸಬಹುದಾಗಿದೆ.

ಭಾರತದಲ್ಲಿನ ಶಿಕ್ಷಣ ವ್ಯವಸ್ಥೆ

ಪೀಠಿಕೆ

ಭಾರತದಲ್ಲಿ ಶಿಕ್ಷಣ ವ್ಯವಸ್ಥೆಯು ಬಹಳ ಪುರಾತನ ಕಾಲದಿಂದಲೂ ಬೆಳೆದು ಬಂದಿದೆ.ತಕ್ಷಶಿಲ ಮತ್ತು ನಳಂದಾ ವಿದ್ಯಾ ಸಂಸ್ಥೆಗಳು ಅತೀ ಪುರಾತನ ವಿಶ್ವ ವಿದ್ಯಾಲಯಗಳಾಗಿವೆ. ಭಾರತದಲ್ಲಿ ಬ್ರಿಟಿಷ್ ಸ್ಥಾಪನೆಯಾದ ನಂತರದಲಿ ಪಾಶ್ಚಿಮಾತ್ಯ ಶಿಕ್ಷಣವು ಕೂಡಾ ಪ್ರಾರಂಭವಾಯಿತು.ಭಾರತದ ಶಿಕ್ಷಣ ವ್ಯವಸ್ಥೆಯನ್ನು ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳು ನೋಡಿಕೊಳ್ಳುತ್ತಿವೆ. ಭಾರತದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯಗೊಳಿಸಲಾಗಿದೆ.ನಮ್ಮ ಸಂವಿಧಾನವು ಶಿಕ್ಷಣಕ್ಕೆ ಹೆಚ್ಚಿನ ಒತ್ತನ್ನು ನೀಡುವುದರೊಂದಿಗೆ ಶಿಕ್ಷಣವು ಕೂಡ ಒಂದು ಮೂಲಭೂತ ಹಕ್ಕು ಎಂದು ಪ್ರತಿಪಾದಿಸಿ ತಿದ್ದುಪಡಿಯನ್ನು ಜಾರಿಗೊಳಿಸಿದೆ.

ಭಾರತದ ಮೂಲಭೂತ ಶಿಕ್ಷಣದ ವ್ಯಾಪ್ತಿಯು ದಿನದಿಂದ ದಿನಕ್ಕೆ ಹೆಚ್ಚಾಗುತ್ತಾ ಸಾಗಿದೆ ಮತ್ತು ವಿದ್ಯಾರ್ಥಿಗಳ ಹಾಜರಾತಿಯಲ್ಲಿಯೂ ಗಣನೀಯ ಏರಿಕೆಯನ್ನು ಕಾಣಬಹುದಾಗಿದೆ ಹಾಗೂ ದೇಶದ ಜನರ 2/3 ರಷ್ಟು ಜನರು ಸುಶಿಕ್ಷಿತರಾಗಿದ್ದಾರೆ.

ಭಾರತ ಸರಕಾರವು ಮೂಲಭೂತ ಶಿಕ್ಷಣವನ್ನು ಕಡ್ಡಾಯ ಶಿಕ್ಷಣವನ್ನಾಗಿಸಿದೆ.ಅಲ್ಲದೇ 14 ವರ್ಷದೊಳಗಿನ ಮಕ್ಕಳಿಗೆ ಕಡ್ಡಾಯ ಮತ್ತು ಉಚಿತ ಶಿಕ್ಷಣ ವ್ಯವಸ್ಥೆಯನ್ನು ಜಾರಿಮಾಡಿದೆ.ಸರಕಾರವು ಬಾಲಕಾರ್ಮಿಕ ಕಾಯ್ದೆ ಜಾರಿಗೊಳಿಸಿದ್ದು 14 ವರ್ಷದೊಳಗಿನ ಮಕ್ಕಳು ಯಾವುದೇ ರೀತಿಯ ಕೆಲಸಕ್ಕೆ ಸೇರಿಕೊಳ್ಳುವಂತಿಲ್ಲ ಎಂದು ಆದೇಶ ಹೊರಡಿಸಿದೆ.ಮಾಧ್ಯಮಿಕ ಶಿಕ್ಷಣ ಮಟ್ಟದಲ್ಲಿಯೂ ಏರಿಕೆಯನ್ನು ನಾವು ಕಾಣುತ್ತಲಿದ್ದೇವೆ. 2001ನೇ ಸಾಲಿನ ಜನಗಣತಿಯ ಪ್ರಕಾರ 14–18 ವರ್ಷದ ವಯೋಮಿತಿಯ ಮಕ್ಕಳು 88.5 ಮಿಲಿಯ ಜನರು ಮಾಧ್ಯಮಿಕ ಶಿಕ್ಷಣ ಪೂರ್ಣಗೊಳಿಸಿದ್ದಾರೆ.

ಭಾರತದ ಉನ್ನತ ಶಿಕ್ಷಣವು ಜಗತ್ತಿನಲ್ಲಿಯೇ ಮೂರನೇ ಸ್ಥಾನದಲ್ಲಿದ್ದು, ಕ್ರಮವಾಗಿ ಮೊದಲನೇ ಮತ್ತು ಎರಡನೇ ಸ್ಥಾನದಲ್ಲಿ ಚೀನಾ ಮತ್ತು ಅಮೇರಿಕಾ ದೇಶಗಳಿವೆ.

ಪ್ರಾಥಮಿಕ ಶಿಕ್ಷಣ

14 ವರ್ಷದೊಳಗಿನ ಮಕ್ಕಳಿಗೆ ಭಾರತ ಸರಕಾರವು ಪ್ರಾಥಮಿಕ ಶಿಕ್ಷಣವನ್ನು ಉಚಿತ ಮತ್ತು ಕಡ್ಡಾಯಗೊಳಿಸಿದೆ.ಭಾರತ ಸರಕಾರವು ಬಾಲ ಕಾರ್ಮಿಕ ಪದ್ದತಿಯನ್ನು ಸಿಕ್ಷಾರ್ಹ ಅಪರಾಧವೆಂದು ಕಾಯ್ದೆ ಜಾರಿಗೊಳಿಸಿದ್ದು ಮಕ್ಕಳು ಉದ್ಯೋಗಿಗಳಿಗೆ ಶಿಕ್ಷಣದಿಂದ ವಂಚಿತರಾಗದೆ, ಜೀವಾಪಾಯಗಳಿಂದ ರಕ್ಷಣೆ ನೀಡುವ ಮತ್ತು ಉದ್ದೇಶದಿಂದ ಈ ಕಾಯ್ದೆಯನ್ನು ಜಾರಿಗೊಳಿಸಲಾಗಿದೆ.

ಮಕ್ಕಳಿಗೆ ಕಡ್ಡಾಯ ಶಿಕ್ಷಣ ಮತ್ತು ಬಾಲಕಾರ್ಮಿಕ ನಿರ್ಮೂಲನಾ ಕಾಯ್ದೆಯನ್ನು ಜಾರಿಗೆ ತಂದರೂ ಸಹ ಅದನ್ನು ಪರಿಪೂರ್ಣಗೊಳಿಸಲು ಕಷ್ಟಸಾಧ್ಯವಾಗಿದೆ ಕಾರಣ ಭಾರತದಲ್ಲಿನ ಅನೇಕ ಸಮಸ್ಯೆಗಳು ರಾಜಕೀಯ ದಾಳಿಗಳಿಂದ, ಜಾತಿ ಪದ್ದತಿಗಳಿಂದ ಹಾಗೂ ಇನ್ನಿತರ ಹಲವಾರು ಸಮಸ್ಯೆಗಳಿಂದ ಸಂಪೂರ್ಣವಾಗಿ ಜಾರಿಗೊಳುವಲ್ಲಿ ವಿಫಲವಾಗಿದೆ.ಇನ್ನು 80 ಶೇಕಡಾ ಪ್ರಾಥಮಿಕ ಶಾಲೆಗಳನ್ನು ಸರಕಾರವೇ ನಡೆಸುತ್ತಲಿದೆ.ಆದರೆ ಮೂಲ ಸೌಕರ್ಯದ ಕೊರತೆ, ಶಿಕ್ಷಕರಿಲ್ಲದಿರುವುದು, ಶಿಕ್ಷಕರಿಗೆ ಸರಿಯಾದ ತರಬೇತಿ ನೀಡದಿರುವುದು ಹೀಗೆ ಸಮಸ್ಯೆಗಳು ಅನೇಕಾನೇಕ ಇದ್ದು ಆದರೂ ಮಕ್ಕಳ ಕಡ್ಡಾಯ ಶಿಕ್ಷಣದ ಜಾರಿಯಿಂದ ಹೆಚ್ಚಿನ ವಿದ್ಯಾರ್ಥಿಗಳು ಶಿಕ್ಷ ಪಡೆಯುತ್ತ ಇದ್ದಾರೆ ಮತ್ತು 2009 ನೇ ಸಾಲಿನ ಕಾಯ್ದೆ ಉಚಿತ ಶಿಕ್ಷಣದಿಂದಲಾಗಿ ಮಕ್ಕಳು ಶಿಕ್ಷಣವನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಸರಕಾರವು ಪ್ರಾಥಮಿಕ ಶಿಕ್ಷಣವನ್ನು ಕಾಡ್ಡಾಯಗೊಳಿಸಲು ಅನೇಕ ಕ್ರಮಗಳನ್ನು ಕೈಗೊಂಡಿದ್ದು 1994ರಲ್ಲಿ ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆ ಎಂಬ ಯೋಜನೆಯನ್ನು ಜಾರಿಗೊಳಿಸಿದೆ.ಈ ಯೋಜನೆಯ ಪ್ರಮುಖ ಉದ್ದೇಶ ಪ್ರಾಥಮಿಕ ಶಿಕ್ಷಣವನ್ನು ವಿಸ್ತರಿಸುವುದು ಮತ್ತು ಹಳೆಯ ಪದ್ಧತಿಯನ್ನು ಬದಲಾಯಿಸುವುದಾಗಿದೆ.ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಯಲ್ಲಿ 85% ಜಿಲ್ಲೆಗಳನ್ನು ಕೇಂದ್ರ ಸರಕಾರವೇ ನೋಡಿಕೊಂಡರೆ ಉಳಿದ 15% ಅನ್ನು ಸರಕಾರಗಳು ನೋಡಿಕೊಳ್ಳುತ್ತಿವೆ.

ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಯಲ್ಲಿ 160000 ದಷ್ಟು ಪರ್ಯಾಯ ಶಿಕ್ಷಣಶಾಲೆಗಳು ಪ್ರಾರಂಭಗೊಂಡಿದ್ದು, 3:5 ಮಿಲಿಯನ್ ವಿದ್ಯಾರ್ಥಿಗಳು ಶಕ್ಷಣವನ್ನು ಪಡೆದಿರುತ್ತಾರೆ.ಈ ವ್ಯವಸ್ಥೆಗೆ ಯುನಿಸೆಫ್ ಮತ್ತು ಅಂತರಾಷ್ಟ್ರೀಯ ಯೋಜನೆಗಳ ಸಹಕಾರವು ಇದೆ.ಈ ಶಿಕ್ಷಣ ವ್ಯವಸ್ಥೆ ಇಂದಲಾಗಿ ದಾಖಲಾತಿಯಲ್ಲಿಯೂ ಹೆಚ್ಚಿನದನ್ನು ಕಾಣಬಹುದಾಗಿದೆ.ಕಳೆದ ಮೂರು ವರ್ಷದಲ್ಲಿ 93–95% ರಷ್ಟು ದಾಖಲಾತಿಯು ಕೆಲವು ರಾಜ್ಯಗಳಲ್ಲಿ ಕಂಡು ಬರುತ್ತಲಿದೆ.ಇನ್ನು ವಿದ್ಯಾರ್ಥಿನಿಯರ ದಾಖಲಾತಿಯಲ್ಲಿಯೂ ಗಣನೀಯ ಏರಿಕೆಯನ್ನು ಕಾಣಬಹುದಾಗಿದೆ.ಈಗಿನ ಹೊಸ ಯೋಜನೆಯಾದ ಸರ್ವಶಿಕ್ಷಾ ಅಭಿಯಾನ ಇದು ಒಂದು ಮಹತ್ತರವಾದ ಯೋಜನೆಯಾಗಿದ್ದು ಜಗತ್ತಿನಲ್ಲಿಯೇ ಅತೀ ದೊಡ್ಡ ಶಿಕ್ಷಣ ಯೋಜನೆಯಾಗಿದೆ.ಈ ಯೋಜನೆಯಲ್ಲಿ ಮಕ್ಕಳ ದಾಖಲಾತಿಯಲ್ಲಿ ಏರಿಕೆ ಕಂಡರೂ ಶಿಕ್ಷಣ ವ್ಯವಸ್ಥೆ ಮಾತ್ರ ತುಂಬಾ ಕಳಪೆ ಮಟ್ಟದ್ದಾಗಿದೆ.

ಮಾಧ್ಯಮಿಕ ಶಿಕ್ಷಣ

ಶಿಕ್ಷಣದ ರಾಷ್ಟ್ರೀಯ ದೃಷ್ಟಿಕೋನ (NPE) 1986 ವು ಜ್ಞಾನದ ಅರಿವುಳ್ಳ, ವಿಜ್ಞಾನ ಮತ್ತು ತಂತ್ರಜ್ಞಾನ ಶಿಕ್ಷಣ ಮತ್ತು ಪುರಾತನ ಯೋಗಾಭ್ಯಾಸವನ್ನು ಭಾರತದ ಮಾಧ್ಯಮಿಕ ಶಿಕ್ಷಣ ವ್ಯವಸ್ಥೆಗೆ ಪರಿಚಯಿಸಿದೆ.ಮಾಧ್ಯಮಿಕ ಶಿಕ್ಷಣದಲ್ಲಿ 14–18 ವರ್ಷ ವಯೋಮಿತಿಯ ವಿದ್ಯಾರ್ಥಿಗಳು ಸುಮಾರು 88.5 ಮಿಲಿಯ ವಿದ್ಯಾರ್ಥಿಗಳು ಶಿಕ್ಷಣ ಪಡೆದಿದ್ದಾರೆಂದು 2001 ರ ಜನಗಣತಿ ತಿಳಿಸಿದೆ.ಇನ್ನು 2001–02 ರ ದಾಖಲಾತಿಯ ಪ್ರಕಾರ 31 ಮಿಲಿಯ ವಿದ್ಯಾರ್ಥಿಗಳು ಮಾತ್ರ ಹಾಜರಾತಿ ಪಡೆದರೆ ಮಿಕ್ಕ 2/3 ರಷ್ಟು ಜನರು ಶಾಲೆಗೆ ಹಾಜರಾಗಿಲ್ಲ.

ಮಾಧ್ಯಮಿಕ ಶಿಕ್ಷಣದ ಪ್ರಮುಖ ಲಕ್ಷಣವೆಂದರೆ ಶಿಕ್ಷಣ ವಂಚಿತ ಸಮೂದಾಯದವರಿಗೆ ಪ್ರೋತ್ಸಾಹ ನೀಡುವಂತಹದ್ದು ಮತ್ತು ಉಚಿತ ಕೌಶಲ ತರಬೇತಿ ಕಾರ್ಯಾಗಾರಗಳ ಮುಖೇನ ವಿದ್ಯಾರ್ಥಿಗಳ ಕೌಶಲ್ಯಮಟ್ಟವನ್ನು ಅಭಿವೃದ್ಧಿ ಪಡಿಸಲಾಗುತ್ತದೆ.

ಒಂದು ವಿಶೇಷ ಶಿಕ್ಷಣ ವ್ಯವಸ್ಥೆಯನ್ನು ಅಂಗವಿಕಲ ಮಕ್ಕಳಿಗಾಗಿ 1974 ರಲ್ಲಿ ಜಾರಿಗೊಳಿಸಲಾಗಿದೆ.ಅಲ್ಲದೆ ಮಾಧ್ಯಮಿಕ ಶಿಕ್ಷಣವನ್ನು ಕೇಂದ್ರೀಯ ವಿದ್ಯಾಲಯ ಅಧ್ಯಯನ ಎಂದು 1965 ರಲ್ಲಿ ನಾಮಕರಣ ಮಾಡಲಾಗಿದ್ದು ಇದರಿಂದಲಾಗಿ ವರ್ಗಾವಣೆಗೊಳ್ಳುವ ಸರಕಾರಿ ಉದ್ಯೋಗಸ್ಥರ ಮಕ್ಕಳಿಗೆ ಅನುಕೂಲವಾಗುವಂತೆ ಈ ಯೋಜನೆಯನ್ನು ಜಾರಿಗೊಳಿಸಲಾಗಿದೆ.ಅಲ್ಲದೆ ಮಾಧ್ಯಮಿಕ ಶಿಕ್ಷಣವನ್ನು ಕೇಂದ್ರೀಯ ವಿದ್ಯಾಲಯ ಅಧ್ಯಯನ ಎಂದು 1975 ರಲ್ಲಿ ನಾಮಕರಣ ಮಾಡಲಾಗಿದ್ದು ಇದರಿಂದಲಾಗಿ ವರ್ಗಾರ್ಗವಣೆಗೊಳ್ಳುವ ಸರಕಾರಿ ಉದ್ಯೋಗಸ್ಥರ ಮಕ್ಕಳಿಗೆ ಅನುಕೂಲವಾಗುವಂತೆ ಈ ಯೋಜನೆಯನ್ನು ಜಾರಿಗೊಳಿಸಲಾಗಿದೆ.

ತೃತೀಯ ಶಿಕ್ಷಣ (Tertiary Education)

ಭಾರತವು ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಮೂರನೇ ಸ್ಥಾನದಲ್ಲಿದೆ.ಕ್ರಮವಾಗಿ ಚೀನಾ ಮತ್ತು ಅಮೇರಿಕಾ ಮೊದಲನೇ ಮತ್ತು ಎರಡನೇ ಸ್ಥಾನದಲ್ಲಿದೆ.ಭಾರತದಲ್ಲಿ ಉನ್ನತ ಶಿಕ್ಷಣವು ಯು.ಜಿ.ಸಿ.ಯ ಅಧೀನದಲ್ಲಿ ಬರುತ್ತದೆ.ಯು.ಜಿ.ಸಿ.ಯ ಅಧೀನ ಹಲವಾರು ವಿಶ್ವ ವಿದ್ಯಾಲಯಗಳಿಗೆ ಸಲಹೆ, ಸೂಚನೆ, ನಿರ್ದೇಶನ, ಸಹಾಯ ಹೀಗೆ ಎಲ್ಲಾ ತರಹದ ಸಹಕಾರವನ್ನು ಯು.ಜಿ.ಸಿ.ಯು ಮಾಡುತ್ತದೆ.ಅಲ್ಲದೇ ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳ ಶಿಕ್ಷಣ ನೀತಿಯನ್ನು ಅಳವಡಿಸುವಲ್ಲಿ ಒಂದು ಮಹತ್ತರವಾದ ಪಾತ್ರವನ್ನು ಸಹ ಮಾಡುತ್ತದೆ.ಯು.ಜಿ.ಸಿ.ಯು ಒಟ್ಟು 12 ಸ್ವಾಯತ್ತ ವಿಶ್ವ ವಿದ್ಯಾಲಯಗಳನ್ನು ಸ್ಥಾಪಿಸಿದೆ.

2009 ರ ಪ್ರಕಾರ ಭಾರತವು 20 ಕೇಂದ್ರೀಯ ವಿಶ್ವವಿದ್ಯಾಲಯ, 215 ರಾಜ್ಯ ಮಟ್ಟದ ವಿಶ್ವವಿದ್ಯಾಲಯ, 100 ಪರಿಗಣಿತ ವಿಶ್ವವಿದ್ಯಾಲಯ, 5 ಸಂಸ್ಥೆಗಳ ಸ್ಥಾಪನೆ ಮತ್ತು ಕಾರ್ಯನಿರ್ವಹಣೆಯನ್ನು ರಾಜ್ಯ ಕಾಯಿದೆ ಮತ್ತು 13 ಸಂಸ್ಥೆಗಳು ರಾಷ್ಟ್ರೀಯ ಮಟ್ಟದ್ದಾಗಿದೆ.ಇನ್ನು ಇತರೆ ಸಂಸ್ಥೆಗಳಾಗಿ 16000

ಕಾಲೇಜುಗಳಲ್ಲಿ 1800 ಮಹಿಳಾ ಕಾಲೇಜುಗಳನ್ನು ಒಳಗೊಂಡಿದ್ದು ಇವಲ್ಲವು ಯು.ಜಿ.ಸಿ.ಯ ಅಧೀನದಲ್ಲೇ ಬರುತ್ತದೆ.

ತಾಂತ್ರಿಕ ಶಿಕ್ಷಣ

ಭಾರತದ ಮೊದಲ ಪಂಚ ವಾರ್ಷಿಕ ಯೋಜನೆಯು ಹೆಚ್ಚಾಗಿ ವಿಜ್ಞಾನ ಮತ್ತು ತಂತ್ರಜ್ಞಾನಗಳ ಬಳಕೆಯ ಒಲವಿನೊಂದಿಗೆ ಪ್ರಾರಂಭಗೊಂಡಿದೆ.ಭಾರತದ ರಾಷ್ಟ್ರೀಯ ಶಿಕ್ಷಣ ಕಾಯಿದೆಯು ಮಹತ್ತರ ಸಭೆಯಲ್ಲಿ ಅಂಗೀಕಾರಗೊಂಡಿದೆ.ಇದರ ಪ್ರಕಾರ ಭಾರತದಲ್ಲಿ ಉನ್ನತ ತಾಂತ್ರಿಕ ಶಿಕ್ಷಣದ ಮಟ್ಟ ಅಭಿವೃದ್ಧಿಪಡಿಸುವುದು.ಭಾರತದ ವಿಧಾನಸಭೆಯಲ್ಲಿಯೂ ತಂತ್ರಿಕ ಶಿಕ್ಷಣವನ್ನು ಬಲಪಡಿಸುವ ಉದ್ದೇಶದಿಂದ ಹಲವಾರು ಕ್ರಮಗಳನ್ನು ಕೈಗೊಳ್ಳಲಾಗಿದೆ.ಭಾರತದ ತಾಂತ್ರಿಕ ಸಂಸ್ಥೆಗಳು ಮತ್ತು ಪರಿಗಣಿತ ಸಂಸ್ಥೆಗಳು ಒಟ್ಟಾಗಿ ಉನ್ನತ ಶಿಕ್ಷಣ ಮಟ್ಟ ವೃದ್ಧಿಗಾಗಿ ಕಾರ್ಯನಡೆಸುತ್ತಲಿದೆ.ಯು.ಜಿ.ಸಿ. ವಿಶ್ವವಿದ್ಯಾಲಯಗಳಲ್ಲಿ ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸಿದ್ದು ಇದರ ಮುಖೇನ ಸಂಶೋಧನೆಗೆ ಹೆಚ್ಚಿನ ಒತ್ತನ್ನು ನೀಡಲಾಗುತ್ತಿದೆ.

ಉದಾ: ಅಣು ವಿಜ್ಞಾನ ಕೇಂದ್ರವನ್ನು ಜವಾಹರಲಾಲ್ ನೆಹರು ವಿಶ್ವವಿದ್ಯಾಲಯ ನವದೆಹಲಿಯಲ್ಲಿ ಸ್ಥಾಪಿಸಲಾಗಿದೆ.

ಖಾಸಗಿ ಶಿಕ್ಷಣ

ಪ್ರಸ್ತುತ ಭಾರತದ 50% ಶಾಲೆಗಳು ಭಾರತ ಸರಕಾರದ ಅಧೀನದಲ್ಲಿದೆ ಮತ್ತು ಶಿಕ್ಷಣವನ್ನು ನೀಡುತ್ತಲಿದೆ.ಅದೇ ರೀತಿ 27% ಭಾರತದ ಮಕ್ಕಳು ಸರಕಾರಿ ಶಾಲೆಗಳು ಕಳಪೆ ಮಟ್ಟದಿಂದ ಕೂಡಿದೆ ಎಂಬ ಕಾರಣಕ್ಕಾಗಿ ಖಾಸಗಿ ಶಿಕ್ಷಣದ ಮೊರೆ ಹೋಗಿದ್ದಾರೆ.

ಕೆಲವು ಸಂಶೋಧನೆಗಳ ಪ್ರಕಾರ ಖಾಸಗಿ ಶಿಕ್ಷಣ ಸಂಸ್ಥೆಗಳು ಉತ್ತಮವಾದ ಫಲಿತಾಂಶವನ್ನು ನೀಡುತ್ತಲಿದೆ ಮತ್ತು ಅತೀ ಕಡಿಮೆ ಸಯಮದಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ಯಶಸ್ಸನ್ನು ಸಾಧಿಸುತ್ತಲಿದ್ದಾರೆ.ಇನ್ನು ಕೆಲವು ಸಂಶೋಧನೆಗಳ ಪ್ರಕಾರ ಖಾಸಗಿ ಶಿಕ್ಷಣ ಸಂಸ್ಥೆಗಳು ಹೆಚ್ಚಿನ ಹಣ ವಸೂಲಿ ಮಾಡುತ್ತಿದ್ದು ಜನರನ್ನು ಸುಲಿಗೆ ಮಾಡುತ್ತಲಿವೆ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳು ಕೇವಲ ಶ್ರೀಮಂತರಿಗೆ ಮಾತ್ರ ಮೀಸಲಾಗಿದೆ ಕಾರಣ ಶುಲ್ಕ ಭರಿಸಲು ಬಡವರಿಗೆ ಸಾಧ್ಯವಾಗುತ್ತಿಲ್ಲ ಎಂದು ವರದಿ ಮಾಡಿದೆ.ಇನ್ನು ಖಾಸಗಿ ವಿದ್ಯಾಸಂಸ್ಥೆಗಳು ಶಿಕ್ಷಣದೊಂದಿಗೆ ಸಾಮಾನ್ಯ ಜ್ಞಾನ, ಆಟೋಟ, ಸಂಗೀತ, ನೃತ್ಯ, ನಾಟಕ ಹಾಗೂ ವಿಜ್ಞಾನ ಹೀಗೆ ಹಲವಾರು ಪಠ್ಯೇತರ ಚಟುವಟಿಕೆಗಳಿಗೂ ಒತ್ತನ್ನು ನೀಡುತ್ತಲಿದೆ.

ಸರಕಾರಿ ಶಾಲೆಗಳು ಉಚಿತ ಶಿಕ್ಷಣವನ್ನು ಒದಗಿಸುತ್ತಿದ್ದರೂ ಬಡಜನರು ತಮ್ಮ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ಕೊಡಿಸುವ ದೃಷ್ಟಿಯಿಂದ ಖಾಸಗಿ ಶಾಲೆಗಳಿಗೆ ಸೇರಿಸುತ್ತಿದ್ದಾರೆ.ಒಂದು ಸಂಶೋಧನೆಯ

ಪ್ರಕಾರ ಹೈದ್ರಾಬಾದಿನ ಕೊಳಚೆ ಪ್ರದೇಶದ ಶೇಕಡಾ 65% ಜನರು ತಮ್ಮ ಮಕ್ಕಳಿಗೆ ಖಾಸಗಿ ಶಾಲೆಗಳಲ್ಲಿಯೇ ಶಿಕ್ಷಣವನ್ನು ಕೊಡಿಸುತ್ತಲಿದ್ದಾರೆ.

ಇನ್ನು ಖಾಸಗಿ ಶಾಲೆಗಳಲ್ಲಿ ಕೆಲವೊಂದು ಶಾಲೆಗಳು ಪರವಾನಗಿ ಇಲ್ಲದೆ ಶಾಲೆಗಳನ್ನು ನಡೆಸುತ್ತಲಿವೆ. 2001ರ ಒಂದು ಸಂಶೋಧನೆಯ ಪ್ರಕಾರ ನವದೆಹಲಿಯಲ್ಲಿ ಶಾಲೆಗೆ ಪರವಾನಗಿ ಸಿಗಲು ಒಟ್ಟು 14 ತರಹದ ಅನುಮತಿ ಪತ್ರಗಳು ಬೇಕಾಗುತ್ತವೆ. ಈ ಪತ್ರಗಳನ್ನು ಪಡೆಯಲು ಏನಿಲ್ಲವೆಂದರೂ ಹಲವು ವರುಷಗಳೇ ಬೇಕಾಗುತ್ತದೆ. ಆದುದರಿಂದ ಶಾಲೆಯ ಆಡಳಿತದವರು ಪರವಾನಗಿ ಇಲ್ಲದೇ ಶಾಲೆಗಳನ್ನು ನಡೆಸಲು ಶುರುಮಾಡುತ್ತಾರೆ.ಆದರೆ ಪರವಾನಗಿ ಇಲ್ಲದೆ ಶಾಲೆ ನಡೆಸುವುದು ಕಾನೂನು ಬಾಹಿರ ಮತ್ತು ಇದೊಂದು ಅಪರಾಧ ಕೂಡ ಆದುದರಿಂದ ಇಂತಹ ಕೃತ್ಯಗಳನ್ನು ತಡೆಯುವುದಕ್ಕಾಗಿ ಸರಕಾರವು ಖಾಸಗಿ ಶಾಲೆಗಳನ್ನು ಪ್ರಾರಂಭಿಸಲು ಪರವಾನಗಿ ಪಡೆಯುವ ಪ್ರಕ್ರಿಯೆಯನ್ನು ಕಡಿಮೆಗೊಳಿಸಿದೆ.

ಮಹಿಳಾ ಶಿಕ್ಷಣ

ಭಾರತದಲ್ಲಿ ಮಹಿಳೆಯರ ಶಿಕ್ಷಣ ಮಟ್ಟವು ಪುರುಷರಿಗೆ ಹೋಲಿಸಿದರೆ ತೀರಾ ಕಡಿಯೆಮಿದೆ.ಇನ್ನು ಕೆಲವು ಹುಡುಗಿಯರು ಶಾಲೆಗೆ ಸೇರಿದರೂ ನಂತರದಲ್ಲಿ ಶಾಲೆಯನ್ನು ತೊರೆದಿದ್ದಾರೆ.1998ರಲ್ಲಿ ಅಮೇರಿಕಾದ ಕಾಮರ್ಸ್ ಶಾಖೆ ನೀಡಿದ ವರದಿಯ ಪ್ರಕಾರ ಭಾರತದಲ್ಲಿ ಮಹಿಳೆಯರ ಶಿಕ್ಷಣಕ್ಕೆ ಸರಿಯಾದ ಮೂಲ ವ್ಯವಸ್ಥೆಯಲ್ಲಿ ನ್ಯೂನ್ಯತೆಗಳಿವೆ ಮತ್ತು ಮಹಿಳಾ ಉಪನ್ಯಾಸಕರ ಕೊರತೆ ಇದೆ ಎಂದು ಹೇಳಿದೆ.

ಭಾರತದಲ್ಲಿ ಸುಶಿಕ್ಷಿತ ಮಹಿಳೆಯರ ಮಟ್ಟವು 2–6% ಬ್ರಿಟಿಷಿರ ಆಳ್ವಿಕೆಯ ಕಾಲದಲ್ಲಿ ಇತ್ತು.ನಂತರ 1961ರಲ್ಲಿ 15.3% ರಷ್ಟಿದ್ದರೆ 1981 ರಲ್ಲಿ 28.5% ಗೆ ಏರಿಕೆಯಾಯಿತು.2001 ನೇ ಇಸವಿಯಲ್ಲಿ ಮಹಿಳೆಯರ ಶಿಕ್ಷಣ ಮಟ್ಟವು 50% ಗೂ ಮಿಕ್ಕಿದೆ.ಇತ್ತೀಚೆಗೆ ಭಾರತ ಸರಕಾರವು ಮಹಿಳೆಯರಿಗೆ ಶಿಕ್ಷಣ ಕೊಡಿಸುವ ನಿಟ್ಟಿನಲ್ಲಿ ಮತ್ತು ಮಹಿಳೆಯರ ಶಿಕ್ಷಣಕ್ಕೆ ಒತ್ತನ್ನು ನೀಡುವ ಕಾರಣಕ್ಕಾಗಿ ಸಾಕ್ಷರ ಭಾರತ ಮಿಷನ್ ಅನ್ನು ಮಹಿಳೆಯರ ಶಿಕ್ಷಣಕ್ಕಾಗಿಯೇ ಸ್ಥಾಪಿಸಿದೆ.

ಭಾರತದಲ್ಲಿ ಸ್ವಾತಂತ್ರಾನಂತರದಿಂದ ಸರಕಾರವು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ನೀಡುತ್ತಾ ಬಂದಿದೆ.ಶಾಲಾ ವಿದ್ಯಾರ್ಥಿನಿಯರ ಹಾಜರಾತಿಯನ್ನು ಪರಗಣಿಸಿ ಅನೇಕ ಯೋಜನೆಗಳನ್ನು ಜಾರಿಗೊಳಿಸಲಾಗಿದೆ.ಮಧ್ಯಾಹ್ನದ ಊಟ ಉಚಿತ ಪುಸ್ತಕ ಮತ್ತು ಸಮವಸ್ತ್ರ ಹೇಗೆ ಅನೇಕ ಸವಲತ್ತುಗಳನ್ನು ನೀಡುತ್ತ ಬಂದಿವೆ.

1986 ರಲ್ಲಿ ರಾಷ್ಟ್ರೀಯ ಶಿಕ್ಷಣ ಕಾಯಿದೆಯು ಹಲವಾರು ಬದಲಾವಣೆಗಳನ್ನು ಕೈಗೊಂಡಿತು.ಪ್ರಮುಖವಾಗಿ ಎಲ್ಲಾ ರಾಜ್ಯಗಳಲ್ಲೂ ಒಂದೇ ತರನಾದ ಶಿಕ್ಷಣ ನೀತಿಯನ್ನು ಕೈಗೊಳಲು ಸೂಚನೆ ನೀಡುವುದು, ಪ್ರತಿಯೊಂದು ಶಾಲೆಯ ಮೂಲಸೌಕರ್ಯ ವೃದ್ಧಿಗಾಗಿ ಹಣಕಾಸಿನ ವ್ಯವಸ್ಥೆ ಮಾಡುವುದು, ಮಹಿಳಾ ಶಿಕ್ಷಣಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡುವುದು ಇತ್ಯಾದಿ.

ಮಹಿಳೆಯರಿಗೆ ಪ್ರಾಥಮಿಕ ಶಿಕ್ಷಣವನ್ನು ಕೊಡಿಸುವುದು ಮತ್ತು ಮಹಿಳಾ ಉದ್ದಿಮೆಗಳಿಗೆ ಪ್ರೋತ್ಸಾಹ ನೀಡುವುದು ಮಹಿಳೆಯರಿಗೆ ಮಾಧ್ಯಮಿಕ ಮತ್ತು ಉನ್ನತ ಶಿಕ್ಷಣವನ್ನು ಪಡೆಯಲೂ ಪ್ರೋತ್ಸಾಹಿಸುವುದು ಹಳ್ಳಿಗಳ ಮತ್ತು ಪಟ್ಟಣಗಳ ಮಹಿಳೆಯರು ಶಿಕ್ಷಣವನ್ನು ಪಡೆದು ಸುಶಿಕ್ಷಿತರಾಗುವಲ್ಲಿ ಸರಕಾರವು ಹೆಚ್ಚಿನ ಆದ್ಯತೆ ನೀಡಿದೆ.

ಇವೆಲ್ಲಾ ಕಾರ್ಯಗಳನ್ನು ಸರಕಾರಗಳು ಮಾಡಿದರೂ ಕೂಡ ಒಂದು ಅಧ್ಯಯನದ ವರದಿಯ ಪ್ರಕಾರ ಮಹಿಳೆಯರು ತಮ್ಮ ಬಡತನವನ್ನು ನಿವಾರಿಸುವ ನಿಟ್ಟಿನಲ್ಲಿ ಶಿಕ್ಷಣ ಮೊಟಕುಗೊಳಿಸಿ ಕೆಲಸಕ್ಕೆ ಸೇರುತ್ತಾರೆ.ಇನ್ನು ಬಾಲ್ಯ ವಿವಾಹ ಪದ್ಧತಿ, ಮನೆಯ ಕೆಲಸ ಮಾಡಿಕೊಂಡಿರುವುದು. ಹೀಗೆ ಅನೇಕ ಕಾರಣಗಳಿಂದಲಾಗಿ ಹೆಣ್ಣು ಮಕ್ಕಳು ಶಿಕ್ಷಣದಿಂದ ದೂರ ಸರಿದಿದ್ದಾರೆ.ಸರಕಾರವು ಕೂಡ ಈ ನಿಟ್ಟಿನಲ್ಲಿ ಅನೇಕ ಕಾರ್ಯಗಳನ್ನು ಕೈಗೊಂಡಿದೆ.ಹೆಣ್ಣು ಮಕ್ಕಳಿಗೆ 18 ವರ್ಷದೊಳಗೆ ಮದುವೆ ಮಾಡುವುದು ಕಾನೂನು ಬಾಹಿರವಾಗಿದೆ.

ಗ್ರಾಮೀಣ ಶಿಕ್ಷಣ

ಗ್ರಾಮೀಣ ಶಿಕ್ಷಣ ನೀತಿಯು 1950 ರಿಂದ ಜಾರಿಯಲ್ಲಿದ್ದು ಮುಂದುವರಿಯುತ್ತಾ ಸಾಗಿಬಂದಿದೆ.ಗ್ರಾಮೀಣ ಶಿಕ್ಷಣವನ್ನು ಖಾಸಗಿ ಸಂಸ್ಥೆಗಳ ಸಹಯೋಗದೊಂದಿಗೆ ನಡೆಸುತ್ತಲಿದೆ.ಒಂದು ದೊಡ್ಡ ಗಾತ್ರದಲ್ಲಿ ಗ್ರಾಮೀಣ ಶಿಕ್ಷಣದ ಜ್ವಾಲವು ಗಾಂಧಿಗ್ರಾಮ ಗ್ರಾಮೀಣ ಶಿಕ್ಷಣ ಸಂಸ್ಥೆ ಹೆಸರಿನಲ್ಲಿ ಉದಯಗೊಂಡು 5200 ಕೂಟವು ಅಭಿವೃದ್ಧಿ ಹೊಂದಿದೆ.ಅಂಗನವಾಡಿ ಕೇಂದ್ರ, ಪ್ರಾಥಮಿಕ ಶಿಕ್ಷಣ, ಪ್ರೌಢ ಶಿಕ್ಷಣ, ಮಾಧ್ಯಮಿಕ ಮತ್ತು ಉನ್ನತ ಶಿಕ್ಷಣ ಹೀಗೆ ಎಲ್ಲಾ ತರಹದ ಶಿಕ್ಷಣವನ್ನು ನೀಡುತ್ತಾ ಸಾಗಿ ಬಂದಿದೆ.ಅಲ್ಲದೇ ವಯಸ್ಸು ಹೆಣ್ಣು ಮಕ್ಕಳ ಶಿಕ್ಷಣವನ್ನೂ ನಡೆಸುತ್ತಲಿದೆ.ಸರಕಾರವು ಗ್ರಾಮೀಣ ಶಿಕ್ಷಣಕ್ಕೆ ಉತ್ತೇಜನ ನೀಡುವುದರೊಂದಿಗೆ ಯಾವುದೇ ರೀತಿಯ ಅಧಿಕಾರಿ ಧೋರಣೆ ನಡೆಸದೇ ಸಾಮಾನ್ಯ ರೀತಿಯ ಅಧಿಕಾರಿ ಧೋರಣೆ ನಡೆಸದೇ ಯಾವುದೇ ರಿತಿಯ ಶಿಕ್ಷಣಕ್ಕೆ ಪ್ರೊತ್ಸಾಹ ನೀಡುತ್ತಲಿದೆ. ಹೀಗೆ ಅನೇಕ ಸರಕಾರಿ ಯೋಜನೆಗಳು ಗ್ರಾಮೀಣ ಶಿಕ್ಷಣಕ್ಕಾಗಿ ರೂಪುಗೊಂಡರೂ ಅದರ ಪ್ರಗತಿಯಲ್ಲಿ ಮಾತ್ರ ಓಚ್ಚಿನ ಬೆಳವಣಿಗೆ ಕಂಡಿಲ್ಲ. ಮೂಲ ಸೌಕರ್ಯಗಳ ಕೊರತೆ, ಶಿಕ್ಷಕರಿಲದಿರುವುದು, ಕುಡಿಯುವ ನೀರಿನ ಸಮಸ್ಯೆ ಹೀಗೆ ಅನೇಕ ಸಮಸ್ಯೆಗಳಿಂದಲಾಗಿ ಗ್ರಾಮೀಣ ಶಿಕ್ಷಣದ ಮಟ್ಟ ಕುಸಿದಿದೆ.ಅಲ್ಲದೇ ವಿದ್ಯರ್ಥಿಗಳ ಸಂಖ್ಯೆಯಲ್ಲಿಯೂ ಕಡಿಮೆಯಾಗಿ ಅನೇಕ ಶಾಲೆಗಳು ಮುಚ್ಚತೊಡಗಿವೆ.

ಶೈಕ್ಷಣಿಕ ಸಾಲ

ಶಿಕ್ಷಣವೂ ಉದ್ಯಮವಾಗುತ್ತಿರುವ ಇಂದಿನ ಸಂದರ್ಭದಲ್ಲಿ ಬಡ ಹಾಗೂ ಮಧ್ಯಮ ವರ್ಗದ ಮಕ್ಕಳಿಗೆ ಉನ್ನತ ಶಿಕ್ಷಣ ಮರೀಚಿಕೆಯಾಗುತ್ತಿದೆ.ಈ ಕಾರಣಕ್ಕಾಗಿಯೇ ಅದೆಷ್ಟೋ ವಿದ್ಯಾರ್ಥಿಗಳು ಶಿಕ್ಷಣವನ್ನು ಅರ್ಧದಲ್ಲೇ ಬಿಡುವುದೂ ಉಂಟು.ಇದು ಪ್ರತಿಭಾವಂತ ಮಕ್ಕಳನ್ನೂ ಹೊರತಾಗಿಲ್ಲ.

ರಾಜ್ಯದಲ್ಲಿ 24 ಸರ್ಕಾರದ ವಿಶ್ವವಿದ್ಯಾಲಯಗಳು, 16 ಡೀಮ್ಡ್ ವಿಶ್ವವಿದ್ಯಾಲಯಗಳು, 10 ಖಾಸಗಿ ಮತ್ತು 1 ಕೇಂದ್ರ ವಿಶ್ವವಿದ್ಯಾಲಯಗಳಿವೆ. ಅದಲ್ಲದೆ 3360 ಪದವಿ ಕಾಲೇಜುಗಳಿವೆ. ಇಷ್ಟೆಲ್ಲಾ ವಿದ್ಯಾ ಸಂಸ್ಥೆಗಳಿದ್ದರೂ ಪ್ರತಿವರ್ಷ ಕಾಲೇಜಿನಿಂದ ಹೊರಗುಳಿಯುವ ಮಕ್ಕಳೇ ಅಧಿಕವಾಗಿದ್ದಾರೆ. ಇಂದು ಆರ್ಥಿಕ ಪರಿಸ್ಥಿತಿಯಿಂದ ಬಳಲುತ್ತಿರುವ ವಿದ್ಯಾರ್ಥಿಗಳು ಶೈಕ್ಷಣಿಕ ಸಾಲ ಪಡೆದು ಉನ್ನತ ಶಿಕ್ಷಣ ಪಡೆಯಬಹುದು.ನಂತರ ಉದ್ಯೋಗ ಪಡೆದು ಸಾಲವನ್ನು ಮರುಪಾವತಿ ಮಾಡುತ್ತೇನೆ ಎಂಬ ಆತ್ಮವಿಶ್ವಾಸವಿದ್ದರೆ ಬ್ಯಾಂಕ್‌ಗಳು ನೀಡುವ ಶೈಕ್ಷಣಿಕ ಸಾಲದ ಉಪಯೋಗ ಪಡೆದುಕೊಳ್ಳಬಹುದು.

ಈ ಹಿಂದೆ ಶೈಕ್ಷಣಿಕ ಸಾಲ ಎಂದರೆ ವೃತ್ತಿಪರ ಕೋರ್ಸ್‌ಗಳಿಗೆ ಮಾತ್ರ ಸೀಮಿತವಾಗಿತ್ತು.ಕಾರಣ ಇಷ್ಟೇ, ವೃತ್ತಿಪರ ಕೋರ್ಸ್ ಮುಗಿಸಿದ ಒಂದೆರಡು ವರ್ಷಗಳಲ್ಲಿ ಸಾಲ ಮರುಪಾವತಿಯಾಗುತ್ತದೆ ಎಂಬ ಉದ್ದೇಶದಿಂದ ಬ್ಯಾಂಕ್‌ಗಳು ಸಾಲ ನೀಡುತ್ತಿದ್ದವು.

ಇದೀಗ ಬ್ಯಾಂಕ್‌ಗಳು ತಮ್ಮ ನಿಯಮವನ್ನು ಸಡಿಲಗೊಳಿಸಿವೆ. ವೃತ್ತಿಪರ ಕೋರ್ಸ್‌ಗಳ ಹೊರತಾಗಿಯೂ ಇರುವ ಪದವಿ ಕೋರ್ಸ್‌ಗಳಿಗೆ ಸಾಲ ನೀಡಲು ಮುಂದಾಗಿವೆ. ಪಿ.ಯು. ನಂತರ ಬಿ.ಎಸ್ಸಿ., ಬಿ.ಕಾಂ., ಬಿ.ಎ., ಸ್ನಾತ್ತಕೋತ್ತರ ಪದವಿಗೆ ಸೇರಬಯಸುವ ವಿದ್ಯಾರ್ಥಿಗಳು ಕೂಡ ಶೈಕ್ಷಣಿಕ ಸಾಲವನ್ನು ಪಡೆಯಬಹುದು. ಸಾಮನ್ಯ ಸಹಕಾರಿ ಬ್ಯಾಂಕ್‌ನಿಂದ ಹಿಡಿದು, ರಾಷ್ಟ್ರೀಕೃತ ಬ್ಯಾಂಕ್‌ಗಳು ಕೂಡ ಶೈಕ್ಷಣಿಕ ಸಾಲವನ್ನು ನೀಡುತ್ತವೆ.

ಶೈಕ್ಷಣಿಕ ಸಾಲ ಪಡೆಯುವುದು ಹೇಗೆ?

ಸಾಕಷ್ಟು ಬ್ಯಾಂಕ್‌ಗಳು ವಿವಿಧ ಹೆಸರಿನಲ್ಲಿ ಶೈಕ್ಷಣಿಕ ಸಾಲವನ್ನು ನೀಡುತ್ತಿವೆ. ಇದನ್ನು ಪಡೆಯಲು ಅಗತ್ಯ ದಾಖಲೆಗಳನ್ನು ನೀಡಬೇಕು.ಕನಿಷ್ಠ 30 ಸಾವಿರದಿಂದ ಗರಿಷ್ಠ 30 ಲಕ್ಷದವರೆಗೂ ವಿದ್ಯಾರ್ಥಿಗೆ ಸಾಲ ದೊರೆಯುತ್ತದೆ. ಹೆಚ್ಚಿನ ಸಾಲ ಪಡೆಯುವುದಾದರೆ ಹೆಚ್ಚಿನ ಭದ್ರತಾ ದಾಖಲೆಗಳನ್ನು ನೀಡಬೇಕಾಗುತ್ತದೆ.

ಕೋರ್ಸ್‌ನ ಮಹತ್ವ ಹಾಗೂ ಅವಧಿಯ ಮೇಲೆ ಇದು ಬಿಂಬಿತವಾಗಿರುತ್ತದೆ.ಕೆಲವು ಬ್ಯಾಂಕ್‌ಗಳು ಕೇವಲ ಬೋಧನಾ ಶುಲ್ಕವನ್ನು ನೀಡಿದರೆ ಮತ್ತೆ ಕೆಲವು ಬೋಧಕೇತರ ಶುಲ್ಕದ ವೆಚ್ಚವನ್ನು ಭರಿಸುತ್ತವೆ. ಸಾರ್ವಜನಿಕ ವಲಯದ ಬ್ಯಾಂಕುಗಳು ಶೇ.9.70 ರಿಂದ ವಾರ್ಷಿಕ ಶೇ.13 ರಷ್ಟು ಬಡ್ಡಿ ವಿಧಿಸುತ್ತವೆ. ಖಾಸಗಿ ವಲಯದ ಬ್ಯಾಂಕ್‌ಗಳು ಶೇ.11 ರಿಂದ ಶೇ.15 ರವರೆಗೆ ಬಡ್ಡಿ ವಿಧಿಸುತ್ತವೆ. ಈ ಬಡ್ಡಿದರವನ್ನು ಬ್ಯಾಂಕ್‌ಗಳು ವ್ಯಾಸಂಗ ಮುಗಿದ ದಿನದಿಂದ ಪಾವತಿಸುವವರೆಗಿನ ದಿನದವರೆಗೆ ಲಕ್ಕ ಹಾಕಲಾಗುತ್ತದೆ.

ಯಾವ ಕೋರ್ಸ್‌ಗಳಿಗೆ ಲಭ್ಯ?

ಶೈಕ್ಷಣಿಕ ಸಾಲ ಪಡೆಯಲು ಕೋರ್ಸ್‌ಗಳಿಗೆ ವಿಶ್ವವಿದ್ಯಾಲಯ ಧನ ಸಹಾಯ ಆಯೋಗ (ಯು.ಜಿ.ಸಿ.), ಸರ್ಕಾರಿ, ಎಐಸಿಟಿಇ ಅನುಮೋದನೆ ಪಡೆದಿರಬೇಕು. ಇಂಜಿನೀಯರಿಂಗ್, ವೈದ್ಯಕೀಯ ಮತ್ತು ದಂತವೈದ್ಯಕೀಯ, ಬಿ.ಎ., ಎಂ.ಎ., ಬಿ.ಕಾಂ., ಏವಿಯೇಷನ್ ಸೇರಿದಂತೆ ಸಾಕಷ್ಟು ಕೋರ್ಸ್‌ಗಳಿಗೆ ಸಾಲ ದೊರೆಯುತ್ತದೆ.

ಅರ್ಜಿ ಸಲ್ಲಿಕೆಯ ವಿಧಾನ

ಬ್ಯಾಂಕ್‌ಗಳಲ್ಲಿ ಶೈಕ್ಷಣಿಕ ಸಾಲ ಪಡೆಯಲು ವಿದ್ಯಾರ್ಥಿಗಳು ಹಲವಾರು ಬ್ಯಾಂಕ್‌ಗೆ ಬೇಟಿ ನೀಡಿ ಮಾಹಿತಿ ಪಡೆದು ಅರ್ಜಿಸಲ್ಲಿಸುವ ರಗಳೆಯಿಂದ ಮುಕ್ತ ಮಾಡಲು ಕೇಂದ್ರ ಸರ್ಕಾರ ವಿದ್ಯಾಲಕ್ಷ್ಮೀ ಯೋಜನೆ ಜಾರಿಗೆ ತಂದಿದೆ.ಸಾಲ ಪಡೆಯಲಿಚ್ಛಿಸುವ ವಿದ್ಯಾರ್ಥಿಯು ಅಂತರ್ಜಾಲದಲ್ಲಿ ವಿದ್ಯಾಲಕ್ಷ್ಮೀ ಜಾಲತಾಣದಲ್ಲಿ ತಮ್ಮ ಹೆಸರು ನೋಂದಾಯಿಸಿಕೊಳ್ಳಬೇಕು.ಆನಂತರ ಸಾಲದ ಅರ್ಜಿ ಭರ್ತಿ ಮಾಡಿದರೆ ಆ ಅರ್ಜಿಯು ವಿದ್ಯಾಲಕ್ಷ್ಮೀ ಯೋಜನೆಯಡಿ ನೋಂದಾಯಿಸಿಕೊಂಡಿರುವ ಬ್ಯಾಂಕ್‌ಗಳಿಗೆ ತಲುಪಲಿದೆ.ಆನಂತರ ಬ್ಯಾಂಕ್ ನೀಡುವ ಬಡ್ಡಿಯ ವಿವರದೊಂದಿಗೆ ಯಾವ ಬ್ಯಾಂಕ್‌ನಲ್ಲಿ ಸಾಲ ತೆಗೆದು ಕೊಳ್ಳಬೇಕೆಂಬುದನ್ನು ಆಯ್ಕೆ ಮಾಡಿಕ್ಕೊಳ್ಳಬಹುದಾಗಿದೆ.ಒಟ್ಟಾರೆ 39 ಬ್ಯಾಂಕ್‌ಗಳು ಈ ಯೋಜನೆಯಡಿ ನೋಂದಾಯಿಸಿಕೊಂಡಿದ್ದು 62 ವಿವಿಧ ಯೋಜನೆಗಳಲ್ಲಿ ಸಾಲ ದೊರೆಯಲಿದೆ.

ಶೈಕ್ಷಣಿಕ ಸಾಲ ಯೋಜನೆಯಲ್ಲಿ ಸಬ್ಸಿಡಿ

ಶೈಕ್ಷಣಿಕ ಸಾಲ ಪಡೆಯುವವರು ಪಡೆದ ಹಣ ಹಾಗೂ ಅದಕ್ಕೆ ಬ್ಯಾಂಕ್ ವಿಧಿಸುವ ಬಡ್ಡಿ ಎಲ್ಲವನ್ನು ಪಾವತಿಸಬೇಕು ಎಂದು ಭಯ ಪಡಬೇಕಾಗಿಲ್ಲ. ಆರ್ಥಿಕವಾಗಿ ಹಿಂದುಳಿದವರೇ ಶೈಕ್ಷಣಿಕ ಸಾಲ ಪಡೆಯುವುದರಿಂದ ಅಂತಹ ವಿದ್ಯಾರ್ಥಿಗಳಿಗೆ ಕೇಂದ್ರ ಸರ್ಕಾರ ಬಡ್ಡಿಯ ಮೇಲೆ ಸಂಪೂರ್ಣ ಸಬ್ಸಿಡಿ ಕೂಡ ನೀಡುತ್ತದೆ.

ವಾರ್ಷಿಕ ಆದಾಯ 4.5 ಲಕ್ಷ ರೂ.ಮಿತಿಯೊಳಗೆ ಇರುವ ವಿದ್ಯಾರ್ಥಿಗಲು ಇದರ ಸೌಲಭ್ಯ ಪಡೆದುಕೊಳ್ಳಬಹುದು.ಆದಾಯ ಪ್ರಮಾಣ ಪತ್ರವನ್ನು ಬ್ಯಾಂಕ್‌ಗೆ ಸಲ್ಲಿಕೆ ಮಾಡಿದಲ್ಲಿ ಅದನ್ನು ಪರಿಶೀಲಿಸಲು ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ (ಎಂ.ಎಚ್.ಆರ್.ಡಿ.) ಜಿಲ್ಲಾ ಮಟ್ಟದ ಸಮಿತಿ ರಚನೆ ಮಾಡುತ್ತದೆ.ಈ ಸಮಿತಿ ಅಗತ್ಯ ದಾಖಲೆ ಪರಿಶೀಲಿಸಿದ ನಂತರ ಅರ್ಹತೆ ಹೊಂದಿದ್ದರೆ ಸಬ್ಸಿಡಿ ದೊರೆಯಲಿದೆ.

ಸಾಲ ಯೋಜನೆಗಳು

ಇಂದಿನ ಜೀವನಕ್ಕೆ ಶಿಕ್ಷಣವು ಅತೀ ಮುಖ್ಯವಾಗಿದೆ.ಶಿಕ್ಷಣವನ್ನು ಪಡೆಯಬೇಕಾದರೆ ವಿದ್ಯಾರ್ಥಿಗಳು ಶಾಲೆ, ಕಾಲೇಜುಗಳಿಗೆ ಸೇರಬೇಕು.ಆದರೆ ಅಲ್ಲಿ ನೀಡಬೇಕಾದ ಶುಲ್ಕಗಳು, ಪುಸ್ತಕ, ಹಾಗೂ ಇತರೆ ವಸ್ತುಗಳನ್ನು ಕೊಳ್ಳಲು ಹಣದ ಸಮಸ್ಯೆ ಎದುರಾಗುತ್ತದೆ.ಈ ಕಾರಣದಿಂದಲಾಗಿ ಹಲವಾರು ವಿದ್ಯರ್ಥಿಗಳು ಶಿಕ್ಷಣವನ್ನು ಮೊಟಕುಗೊಳಿಸಲು ಮುಂದಾಗುತ್ತಾರೆ.ಆದರೆ ಈಗ ಶಿಕ್ಷಣ ಸಾಲ ಯೋಜನೆಯಿಂದಲಾಗಿ ವಿದ್ಯಾರ್ಥಿಗಳು ಹಣದ ಸಮಸ್ಯೆಯಿಂದ ಸ್ವಲ್ಪ ನಿರಾಳರಾಗಿದ್ದಾರೆ. ವಿದ್ಯಾರ್ಥಿಗಳು ಯಾವುದೇ ಉನ್ನತ ಶಿಕ್ಷಣ ಪಡೆಯುವುದಾದರೂ ಶಿಕ್ಷಣ ಸಾಲ ದೊರೆಯುತ್ತದೆ. ಆದರೆ ಆ ಶಿಕ್ಷಣ ಸಂಸ್ಥೆಯು ವಿಶ್ವವಿದ್ಯಾಲಯದಲ್ಲಿ

ಮಾನ್ಯತೆಯನ್ನು ಪಡೆದಿರುವಂತಹದ್ದು ಪ್ರಮುಖವಾಗಿರುತ್ತದೆ. ಹಾಗೂ ವಿದ್ಯಾರ್ಥಿಗೆ ಅಲ್ಲಿ ಪ್ರವೇಶ ಕೊಡುತ್ತೇವೆ ಎಂಬ ಪತ್ರ ಬ್ಯಾಂಕ್‌ನವರಿಗೆ ಕಾಲೇಜಿನವರು ನೀಡಬೇಕಾಗುತ್ತದೆ.

ಶಿಕ್ಷಣ ಸಾಲವು ಶಾಲೆ ಕಾಲೇಜಿನ ಶುಲ್ಕ, ವಸತಿ ಶುಲ್ಕ, ಮತ್ತು ಪುಸ್ತಕ ಸಾಮಗ್ರಿಗಳ ಶುಲ್ಕವನ್ನು ಭರಿಸುತ್ತದೆ.ಇದಲ್ಲದೆ ಇನ್ಯಾವುದೇ ಇತರೆ ಶುಲ್ಕಗಳಿದ್ದರೂ ಬ್ಯಾಂಕ್‌ನವರು ಭರಿಸುತ್ತಾರೆ.ಶಿಕ್ಷಣ ಸಾಲವು ಹೆಚ್ಚು ಎಂದರೆ 7.50 ಲಕ್ಷ ಸಾಲ ಮಂಜೂರು ಮಾಡುತ್ತದೆ.ಅದು ಭಾರತದಲ್ಲಿ ಅಭ್ಯಾಸ ನಡೆಸುವುದಾದಲ್ಲಿ ಮಾತ್ರ.ಇನ್ನು ಹೊರ ರಾಷ್ಟ್ರಗಳಲ್ಲಿ ಅಭ್ಯಸಿಸುವುದಾದಲ್ಲಿ 15 ಲಕ್ಷದವರೆಗೆ ಸಾಲ ಸೌಲಭ್ಯವನ್ನು ನೀಡುತ್ತದೆ.ಇನ್ನು ಸಾಲ ಸೌಲಭ್ಯವನ್ನು ಸಾಕ್ಷಿದಾರರ ಮುಖೇನ ನೀಡಲಾಗುತ್ತದೆ.ಅದು ವಿದ್ಯಾರ್ಥಿಯ ಸಂಬಂಧಿಕರು, ಸ್ನೇಹಿತ, ನೆರೆಹೊರೆಯವರು ಹೀಗೆ ಸಾಕ್ಷಿದಾರರಾಗಿರಬೇಕಾಗುತ್ತದೆ.

ಶಿಕ್ಷಣ ಸಾಲವನ್ನು ಮರುಪಾವತಿಸಲು ವಿದ್ಯಾರ್ಥಿಗೆ ಸಾಲ ಪಡೆದ 5 ರಿಂದ 7 ವರ್ಷ ಕಾಲಾವಕಾಷ ನೀಡಲಾಗುತ್ತದೆ ಅಥವಾ ವಿದ್ಯಾಭ್ಯಾಸ ಪಡೆದು ಒಂದು ವರ್ಷ ಕಾಲಾವಕಾಶವನ್ನು ನೀಡಲಾಗುತ್ತದೆ.ಸಾಲ ಪಡೆದ ಮೊತ್ತವನ್ನು ತೀರಿಸಲು 84 ತಿಂಗಳುಗಳ ಕಾಲಾವಕಾಶ ನೀಡಲಾಗುತ್ತದೆ.ಇದನ್ನು ತೀರಿಸಲು ವಿದ್ಯಾರ್ಥಿಯು ಶಿಕ್ಷಣ ಮುಗಿಸಿ ಒಂದು ವರ್ಷ ಮುಗಿಸಿರಬೇಕು ಇಲ್ಲವೆಂದರೆ ಕೆಲಸಕ್ಕೆ ಸೇರಿ 6 ತಿಂಗಳು ಕಳೆದಿರಬೇಕು ಇದರಲ್ಲಿ ಯಾವುದು ಮೊದಲು ಆಗುತ್ತದೋ ಅದನ್ನು ಆಯ್ಕೆ ಮಾಡಿ ಸಾಲವನ್ನು ಮರುಪಾವತಿಸಲು ಗಡುವನ್ನು ನೀಡಲಾಗುತ್ತದೆ.ಒಂದು ವೇಳೆ ವಿದ್ಯಾರ್ಥಿಗೆ 7 ಲಕ್ಷಕ್ಕಿಂತ ಅಧಿಕ ಶಿಕ್ಷಣ ಸಾಲ ಬೇಕಾದಲ್ಲಿ ನಿರಖು ಠೇವಣಿಯನ್ನು ಇಡಿಸಬೇಕಾಗುತ್ತದೆ.ಅಲ್ಲದೇ ಎನ್.ಎಸ್.ಸಿ.ಮತ್ತೆ ಇಡಬೇಕು ಅಥವಾ ಜಾಗಕ್ಕೆ ಸಂಬಂಧಪಟ್ಟ ಪತ್ರವನ್ನು ಲಗತ್ತಿಸಬೇಕಾಗುತ್ತದೆ.

ಇತರೆ ಸಾಮಾನ್ಯ ವಿಚಾರಗಳು

- ಶಿಕ್ಷಣ ಸಾಲದ ಬಡ್ಡಿದರವು ಬ್ಯಾಂಕ್‌ನಿಂದ ಬ್ಯಾಂಕ್‌ಗೆ ವ್ಯತ್ಯಾಸವಿರುತ್ತದೆ. ಹೆಚ್ಚಾಗಿ ಬಡ್ಡಿದರವು 10 ರಿಂದ 15 ಪ್ರತಿಶತವಿರುತ್ತದೆ.
- ಶಿಕ್ಷಣ ಶುಲ್ಕವಲ್ಲದೆ ಇತರೆ ವೆಚ್ಚಗಳನ್ನು ಕೂಡ ಶಿಕ್ಷಣ ಸಾಲದ ಮುಖೇನ ಬ್ಯಾಂಕ್‌ಗಳು ನೀಡುತ್ತವೆ. ಆದರೆ ಈ ಎಲ್ಲಾ ವೆಚ್ಚಗಳನ್ನು ಎಲ್ಲಾ ಬ್ಯಾಂಕ್‌ಗಳಲ್ಲಿ ಭರಿಸಲಾಗುವುದಿಲ್ಲ.
- ಶಿಕ್ಷಣ ಸಾಲದ ಬಡ್ಡಿದರವನ್ನು ಒಂದೇ ದರದಲ್ಲಿ ಅಥವಾ ಬದಲಾವಣೆಯ ದರಗಳಲ್ಲಿಯೂ ನೀಡಲಾಗುತ್ತದೆ ಆದರೆ ಬಡ್ಡಿಯನ್ನು ಪ್ರತಿದಿನ ಅಥವಾ ತಿಂಗಳಿಗೊಮ್ಮೆ ಕಡಿತಗೊಳಿಸುವ ರೀತಿಯಲ್ಲಿ ಬಡ್ಡಿದರ ನಿಗದಿಪಡಿಸಲಾಗುತ್ತದೆ.
- ರಾಷ್ಟ್ರೀಕೃತ ಬ್ಯಾಂಕ್‌ಗಳು ಮಾರ್ಪಡಿಸುವ ಬಡ್ಡಿದರವನ್ನು ಶಿಕ್ಷಣ ಸಾಲಕ್ಕೆ ಅಳವಡಿಸಿದರೆ ಅಂತರಾಷ್ಟ್ರೀಯ ಮತ್ತು ಖಾಸಗಿ ಬ್ಯಾಂಕ್‌ಗಳು ನಿಶ್ಚಿತ ಬಡ್ಡಿದರವನ್ನು ಶಿಕ್ಷಣ ಸಾಲಕ್ಕೆ ಅಳವಡಿಸಿರುತ್ತಾರೆ.

- ಶಿಕ್ಷಣ ಸಾಲವನ್ನು ಪಡೆಯುವಾಗ ನಾನು ಅದಕ್ಕೆ ತಗಲುವ ವೆಚ್ಚವನ್ನು ಭರಿಸಬೇಕಾಗುತ್ತದೆ.
- ಕೆಲವೊಮ್ಮೆ ಬ್ಯಾಂಕ್‌ಗಳು ಶಿಕ್ಷಣ ಶುಲ್ಕದ ಪೂರ್ತಿ ಹಣವನ್ನು ಸಾಲವಾಗಿ ನೀಡುವುದಿಲ್ಲ. ಸ್ವಲ್ಪ ಹಣವನ್ನು ಸಾಲ ಪಡೆಯುವವರೇ ಭರಿಸಬೇಕಾಗುತ್ತದೆ. ಭಾರತದಲ್ಲಿ ವಿದ್ಯಾಭ್ಯಾಸ ಮಾಡುವವರಿಗೆ 5% ಹಣವನ್ನು ತಾವೇ ಭರಿಸಬೇಕಾಗುತ್ತದೆ.

ಅರ್ಹತಾ ಮಾನದಂಡ

- ಸಾಲ ಪಡೆಯಲ್ಲಿಚ್ಚಿಸುವವರು ಭಾರತೀಯ ನಾಗರೀಕನಾಗಿರಬೇಕು.
- ಅವನು / ಅವಳು ತಾಂತ್ರಿಕ / ಉನ್ನತ ಶಿಕ್ಷಣ ಸಂಸ್ಥೆಯಲ್ಲಿ ಪ್ರವೇಶವನ್ನು ಪ್ರವೇಶ ಪರೀಕ್ಷೆ ಅಥವಾ ಆಯ್ಕೆ ವಿಧಾನದಲ್ಲಿ ಆಯ್ಕೆಯಾಗಿರಬೇಕು.
- ಅವನ / ಅವಳ ಪ್ರಾಯವು 16ರಿಂದ 26 ವರ್ಷದ ಒಳಗಿದೆ ಎಂದು ಬ್ಯಾಂಕ್‌ನವರು ಖಾತ್ರಿಪಡಿಸಿಕೊಂಡಿರಬೇಕು.
- ಅವನು / ಅವಳು ಕಿರಿಯ ವಯಸ್ಸಿನವರಾಗಿರಬಾರದು.
- ಅವನ / ಅವಳ ಶೈಕ್ಷಣಿಕ ಹಾದಿಯು ಉತ್ತಮವಾಗಿರಬೇಕು.
- ಅವನ / ಅವಳ ಹೆತ್ತವರು ಅಥವಾ ಪೋಷಕರ ವರಮಾನವು ಉತ್ತಮವಾಗಿರಬೇಕು ಮತ್ತು ದೃಢವಾಗಿರಬೇಕು.
- ಅವನು/ಅವಳು ಒಂದು ಉತ್ತಮ ಕಾಲೇಜಿನಲ್ಲಿ ಪ್ರವೇಶ ಪಡೆದಿರಬೇಕು ಮತ್ತು ಅದು ಸರಕಾರದ ಮಾನ್ಯತೆ ಪಡೆದಿರಬೇಕು.

ಅಗತ್ಯ ದಾಖಲೆಗಳು

01. ಶಾಲಾ / ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿದ ವಿಷಯದ ಅಂಕ ಪಟ್ಟಿ.
02. ಪ್ರವೇಶ ಪಡೆದ ದಾಖಲಾತಿ.
03. ವಿದ್ಯಾಭ್ಯಾಸದ ವೆಚ್ಚದ ಮಾಹಿತಿಯ ಪಟ್ಟಿ.
04. ವಿದ್ಯಾರ್ಥಿವೇತನ ಪಡೆದಿದ್ದರೆ ಅದರ ನಕಲು ಪ್ರತಿ.
05. ಅಂತರಾಷ್ಟ್ರೀಯ ವರ್ಗಾವಣಾ ಪತ್ರದ ಪರವಾನಗಿಯ ನಕಲು ಪ್ರತಿ.
06. 2 ಪಾಸ್‌ಪೋರ್ಟ್ ಅಳತೆಯ ಛಾಯಾಚಿತ್ರ.
07. ಸಾಲ ಪಡೆಯುವವರ ಅಥವಾ ಹೆತ್ತವರ ಬ್ಯಾಂಕಿನ ಖಾತೆಯ 6 ತಿಂಗಳ ಹೇಳಿಕೆ.

08. ಆದಾಯ ತೆರಿಗೆ ಮಾಪನ 2 ವರ್ಷದವರೆಗಿನದ್ದು.

09. ಆಸ್ತಿ ಮತ್ತು ಇತರೆ ಹೊಣೆಗಾರಿಕೆಯ ಚಿಕ್ಕದಾದ ಹೇಳಿಕೆಯನ್ನು ನೀಡಬೇಕು.

10. ಬ್ಯಾಂಕ್‌ನ ಗ್ರಾಹಕರಾಗಿರದಿದ್ದಲ್ಲಿ ಗುರುತು ಚೀಟಿ ಅಥವಾ ವಿಳಾಸದ ದಾಖಲಾತಿಯನ್ನು ನೀಡಬೇಕು.

ಸಮಸ್ಯೀಕರಣ

ಉತ್ತಮವಾದ ಸಮಾಜ ನಿರ್ಮಾಣಕ್ಕೆ ಶಿಕ್ಷಣ ಬುನಾದಿಯಾಗಿದೆ.ಈ ಪರಿಕಲ್ಪನೆ ನಿಜವಾಗಲು ವಿದ್ಯಾರ್ಥಿಗಳು ತಮ್ಮ ಉನ್ನತ ಶಿಕ್ಷಣವನ್ನು ಪಡೆದಿರಬೇಕಾಗುತ್ತದೆ.ಇಂದು ಪ್ರತಿಯೊಂದು ಕ್ಷೇತ್ರವೂ ಸ್ಪರ್ಧಾತ್ಮಕವಾಗಿರುವ ಕಾರಣದಿಂದಲಾಗಿ ಸಾಮಾನ್ಯ ಶಿಕ್ಷಣವು ಸಹಕಾರಿಯಾಗದು. ವಿದ್ಯಾರ್ಥಿಗಳು ಉನ್ನತ ಶಿಕ್ಷಣವನ್ನು ಪಡೆಯಲೇ ಬೇಕಾದ ಅನಿವಾರ್ಯತೆ ಹೆಚ್ಚಾಗಿದೆ. ನಾವು ಈ ಸಂಶೋಧನೆಯನ್ನು ಕೈಗೆತ್ತಿಕೊಂಡಿರುವ ಪ್ರಮುಖವಾದ ಕಾರಣವೇನೆಂದರೆ ಉಡುಪಿ ತಾಲೂಕು ಶೈಕ್ಷಣಿಕವಾಗಿ ಮುಂದುವರಿದ ಜಿಲ್ಲೆಯಾಗಿರುವುದು ಒಂದಾದರೆ, ಉನ್ನತ ಶಿಕ್ಷಣ ಸಂಸ್ಥೆಗಳ ಸಂಖ್ಯೆಯಲ್ಲಿ ಗಣನೀಯ ಹೆಚ್ಚಳವಾಗಿರುವುದು ಕಾಣಬಹುದು.

ಉಡುಪಿ ತಾಲೂಕಿನಲ್ಲಿ ಪ್ರಾಥಮಿಕ ಶಿಕ್ಷಣವನ್ನು ಮತ್ತು ಮಾಧ್ಯಮಿಕ ಶಿಕ್ಷಣವನ್ನು ಹೆಚ್ಚಾಗಿ ಎಲ್ಲಾ ವಿದ್ಯಾರ್ಥಿಗಳೂ ಮುಗಿಸಿರುತ್ತಾರೆ. ಆದರೆ ಉನ್ನತ ಶಿಕ್ಷಣವನ್ನು ತೆಗೆದುಕೊಳ್ಳಲು ಮುಖ್ಯವಾಗಿ ಆರ್ಥಿಕವಾಗಿ ಹಿಂದುಳಿದವರು, ಅಂಚಿನಲ್ಲಿರುವ ಸಮೂಹಗಳು ಹಿಂಜರಿಯುತ್ತಾರೆ. ಇದಕ್ಕೆ ಮುಖ್ಯ ಕಾರಣ ಹಣಕಾಸಿನ ಸಮಸ್ಯೆ ಉನ್ನತ ಶಿಕ್ಷಣ ಶುಲ್ಕ ಪಾವತಿಸಲು ಮತ್ತು ಪಠ್ಯ ಪುಸ್ತಕಗಳನ್ನು ಕೊಳ್ಳಲು ಬೇಕಾದ ಹಣ ಇಲ್ಲದೇ ತಮ್ಮ ಶಿಕ್ಷಣವನ್ನೇ ಮೊಟಕುಗೊಳಿಸುತ್ತಾರೆ.ಬ್ಯಾಂಕ್‌ಗಳಲ್ಲಿ ಸಿಗುವಂತಹ ಶಿಕ್ಷಣ ಸಾಲ ಯೋಜನೆಗಳ ಅರಿವಿಲ್ಲದೇ ಅಥವಾ ಶಿಕ್ಷಣ ಸಾಲದ ಬಗ್ಗೆ ಹೆಚ್ಚಿನ ವಿಚಾರಗಳನ್ನು ತಿಳಿಯುವ ಪ್ರಯತ್ನ ಮಾಡದೇ ಇರುವಂತಹದ್ದು ಮತ್ತು ಬಡ್ಡಿ ದರವು ಏರಿಕೆಯಾಗುವಂತಹ ಭೀತಿ ಇಂದಲೂ ಜನರಲ್ಲಿ ಒಂದು ರೀತಿಯ ಅರಿವಿನ ಸಮಸ್ಯೆ ಎದ್ದು ಕಾಣುತ್ತಲಿದೆ.ಆದುದರಿಂದ ಬ್ಯಾಂಕ್‌ಗಳಲ್ಲಿ ಶಿಕ್ಷಣ ಸಾಲ ಪಡೆದ ಫಲಾನುಭವಿಗಳ ಅಧ್ಯಯನ ನಡೆಸಿ ಬ್ಯಾಂಕ್‌ಗಳ ಕಾರ್ಯ ಚಟುವಟಿಕೆಗಳನ್ನು ವಿಶ್ಲೇಷಿಸುತ್ತಾ ಆದರಿಂದ ಶಿಕ್ಷಣಕ್ಕೆ ಆಗುವ ನೆರವಿನ ಬಗ್ಗೆ ತಿಳಿಯುವ ಪ್ರಾಮಾಣಿಕ ಪ್ರಯತ್ನ ಮಾಡಲು ಈ ವಿಷಯವನ್ನು ಅಧ್ಯಯನ ವಿಷಯವನ್ನಾಗಿ ಆರಿಸಲಾಗಿದೆ.ಹಾಗೆಯೇ ಇದರಿಂದ ಆಗುವ ಶೈಕ್ಷಣಿಕ ಅಭಿವೃದ್ಧಿ ಮತ್ತು ಒಟ್ಟು ಸಾಮಾಜಿಕ–ಆರ್ಥಿಕ ಅಭಿವೃದ್ಧಿಯ ಕುರಿತು ಈ ಅಧ್ಯಯನದ ಮೂಲಕ ಪರಿಶೀಲಿಸಲಾಗುವುದು.

ಉದ್ದೇಶಗಳು

1. ಶೈಕ್ಷಣಿಕ ಸಾಲ ಯೋಜನೆ ಮತ್ತು ಅದರ ವಿವಿಧ ಹಂತಗಳ ಬಗ್ಗೆ ಅಧ್ಯಯನ ನಡೆಸುವುದು.

2. ಉಡುಪಿ ತಾಲೂಕಿನ ಆಯ್ದ ಬ್ಯಾಂಕ್‌ಗಳ ಮತ್ತು ಸಹಕಾರಿ ಬ್ಯಾಂಕ್‌ಗಳ ಪಟ್ಟಿ ಮಾಡುವುದು.

3. ಉನ್ನತ ಶಿಕ್ಷಣ ಅಭಿವೃದ್ಧಿಯಲ್ಲಿ ಬ್ಯಾಂಕ್‌ಗಳ ಪಾತ್ರವನ್ನು ಪರಿಶೀಲಿಸುವುದು.

4. ಶಿಕ್ಷಣ ಸಾಲ ಯೋಜನೆಗೆ ಹಣದುಬ್ಬರದಿಂದಾಗುವ ಪ್ರಭಾವ ಮತ್ತು ಸಾಲ ಸೌಲಭ್ಯಗಳ ಫಲಾನುಭವಿಗಳ ಹಿನ್ನಲೆ, ಅರಿವು, ಬಳಕೆಯ ಫಲಿತಾಂಶ, ಅನುಕೂಲತೆಗಳನ್ನು ಪರಿಶೀಲಿಸುವುದು.

ಊಹೆಗಳು

1. ಬ್ಯಾಂಕ್‌ಗಳು ಮತ್ತು ಸಹಕಾರಿ ಬ್ಯಾಂಕ್‌ಗಳು ಶಿಕ್ಷಣ ಸಾಲ ಯೋಜನೆಯ ಮಾಹಿತಿಯನ್ನು ನಿರಂತರವಾಗಿ ಒದಗಿಸುತ್ತಾರೆ.

2. ಶಿಕ್ಷಣ ಸಾಲ ಸೌಲಭ್ಯಗಳು ಸಮರ್ಪಕವಾಗಿ ಬಳಕೆಯಾಗುತ್ತಿವೆ.

3. ಬ್ಯಾಂಕ್‌ಗಳು ಮತ್ತು ಸಹಕಾರಿ ಬ್ಯಾಂಕ್‌ಗಳ ಸಹಕಾರದಿಂದ ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚಿನ ಅಭಿವೃದ್ಧಿಯಾಗಿದೆ.

4. ಫಲಾನುಭವಿಗಳ ಸಂಖ್ಯೆ ಹೆಚ್ಚಾಗುತ್ತಿವೆ.

ಅಧ್ಯಾಯ – ೨

ಸಂಶೋಧನೆಯ ವಿಧಾನ, ಸಾಹಿತ್ಯ ವಿಮರ್ಶೆ ಮತ್ತು ಅಧ್ಯಯನದ ಮಿತಿಗಳು

ಅಧ್ಯಾಯ ೨

ಸಂಶೋಧನೆಯ ವಿಧಾನ, ಸಾಹಿತ್ಯ ವಿಮರ್ಶೆ ಮತ್ತು ಅಧ್ಯಯನದ ಮಿತಿಗಳು

ಅಧ್ಯಯನ ವಿಧಾನ

01. ಪ್ರಾಥಮಿಕ ಮೂಲ

ಅಧ್ಯಯನಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ಪ್ರಶ್ನಾವಳಿ, ಸಂದರ್ಶನ ಮತ್ತು ಸಂವಾದಗಳ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗುತ್ತದೆ.ಪ್ರಸ್ತುತ ಅಧ್ಯಾಯದಲ್ಲಿ ಮೂರು ರಾಷ್ಟ್ರೀಕೃತ ಬ್ಯಾಂಕ್ ಹಾಗೂ ಒಂದು ಸಹಕಾರಿ ಬ್ಯಾಂಕನ್ನು ಸಂದರ್ಶಿಸಲಾಗುವುದು ಮತ್ತು ಮಾಹಿತಿ ಸಂಗ್ರಹಿಸಲಾಗುವುದು.ಅಲ್ಲದೇ 80 ಮಾಹಿತಿದಾರರಿಂದ ಸಂದರ್ಶನ ವಿಧಾನಗಳ ಮೂಲಕ ದತ್ತಾಂಶ ಸಂಗ್ರಹಿಸಲಾಗುವುದು.ಈ ಆಧಾರದಲ್ಲಿ ಸಂಶೋಧನಾ ವರದಿ ಸಿದ್ಧಪಡಿಸಲಾಗುವುದು.

02. ಉದ್ದೇಶಿತ ಅನುಷಂಗಾಕ ಮೂಲಗಳು

ಪ್ರಕಟಿತ ಗ್ರಂಥಗಳು, ಪತ್ರಿಕೆ, ವರದಿಗಳ ಮುಖಾಂತರ ಬ್ಯಾಂಕ್ ದಸ್ತಾವೇಜು ಇತ್ಯಾದಿಗಳಿಂದ ಮಾಹಿತಿ ಸಂಗ್ರಹಿಸಲಾಗುವುದು.

ಪ್ರಶ್ನಾವಳಿಗಳನ್ನು ನೇರ, ವಿಮರ್ಶಕ ಹಾಗೂ ಬಹುಆಯ್ಕೆಯ ಉತ್ತರಗಳನ್ನೊಳಗೊಂಡಂತೆ ಸಿದ್ಧಪಡಿಸಿ ಮಾಹಿತಿದಾರರಿಂದ ಸಂಪೂರ್ಣವಾದ ವಿಚಾರವನ್ನು ನಿಖರವಾಗಿ ಪಡೆಯಲಾಗಿದೆ ಹಾಗೂ ಪ್ರಶ್ನಾವಳಿಯ ಒಂದು ಪ್ರತಿಯನ್ನು ಈ ಅಧ್ಯಯನದ ಕೊನೆಯಲ್ಲಿ ಲಗತ್ತಿಸಲಾಗಿದೆ.

ಅಧ್ಯಯನ ಮಿತಿಗಳು

ಪ್ರಸ್ತುತ ಅಧ್ಯಯನವು ಉಡುಪಿ ತಾಲೂಕಿಗೆ ಮಾತ್ರ ಸೀಮಿತವಾಗಿದ್ದು, 80 ಮಾಹಿತಿದಾರರ ಮೂಲಕ ದತ್ತಾಂಶಗಳನ್ನು ಸಂಗ್ರಹಿಸಲಾಗುವುದು.

ನಮೂನೆ ವಿಧಾನ (Sampling Method)

ಪ್ರಸ್ತುತ ಅಧ್ಯಯನದಲ್ಲಿ ಉತ್ತಮ ರೀತಿಯಲ್ಲಿ ಕ್ರಮಬದ್ಧವಾಗಿ ಎಲ್ಲರಿಗೂ ತಿಳಿಯುವಂತಹ ಮಾದರಿಯನ್ನು ತೆಗೆದುಕೊಳ್ಳಲಾಗಿದೆ.ಸುಲಭ ರೀತಿಯ ಮಾಹಿತಿಯನ್ನು ಇಲ್ಲಿ ಅಳವಡಿಸಲಾಗಿದ್ದು, ಮಾಹಿತಿದಾರರು ನಮಗೆ ಸುಲಭವಾಗಿ ಮಾಹಿತಿಯನ್ನು ನೀಡಲು ಮತ್ತು ಅವರು ಯಾವಾಗಲೂ ನಮಗೆ ಸುಲಭರೀತಿಯಲ್ಲಿ ಸಿಗುವ ಹಾಗೆಯೂ ನೋಡಿಕೊಳ್ಳಲಾಗಿದೆ.

ನಮೂನೆಯ ಮೂಲವಸ್ತು

ನಮೂನೆಯನ್ನು ನಿರ್ಧರಿಸುವಾಗ ಮುಖ್ಯವಾಗಿ ನಾವು ಗಮನಕೊಡಬೇಕಾಗಿರುವುದು ಮೂಲವಸ್ತು.ಇಲ್ಲಿ ನಾವು ನೋಡುವ ಮುಖ್ಯವಾದ ಮೂಲವಸ್ತು ವೆಂದರೆ ಭೌಗೋಳಿಕ ಪ್ರದೇಶವಾದ ರಾಜ್ಯ, ಜಿಲ್ಲೆ ಮತ್ತು ಹಳ್ಳಿ ಅಥವಾ ವೈಯಕ್ತಿಕವಾಗಿಯೂ.ಇಲ್ಲಿ ಮುಖ್ಯವಾಗಿ ಸಂಶೋಧಕನು ತನಗೆ ಯಾವ ಮೂಲವಸ್ತುವಿನಿಂದ ಮಾಹಿತಿ ಸಂಗ್ರಹಿಸಲು ಸಾಧ್ಯ ಎಂಬುದನ್ನು ನಿರ್ಧರಿಸಬೇಕಾಗುತ್ತದೆ.ಈ ಅಧ್ಯಯನದಲ್ಲಿ ಉಡುಪಿ ತಾಲೂಕಿನ ಮೂರು ರಾಷ್ಟ್ರೀಕೃತ ಬ್ಯಾಂಕ್ ಮತ್ತು ಒಂದು ಸಹಕಾರಿ ಬ್ಯಾಂಕ್‌ನಿಂದ ವಿದ್ಯಾರ್ಥಿಗಳು ಶಿಕ್ಷಣ ಸಾಲ ಪಡೆದ ಮಾಹಿತಿಯನ್ನು ಕಲೆಹಾಕಲಾಗಿದೆ.

ನಿಬಂದನೆಗಳು

- ಅಧ್ಯಯನಕ್ಕೆ ಸಮಯಾವಕಾಶದ ಕೊರತೆಯಿಂದಲಾಗಿ ಚುಟುಕಾದ ಅಧ್ಯಯನವನ್ನು ಕಡಿಮೆ ಸಮಯದಲ್ಲಿ ನಡೆಸಲಾಗಿದೆ.
- ಇಲ್ಲಿ ಬರುವಂತಹ ಫಲಿತಾಂಶವು ಊಹೆಗಳಿಂದ ಒಳಪಟ್ಟಿದ್ದು ಮಾಹಿತಿದಾರರ ಮಾಹಿತಿಯ ಆಧಾರಕ್ಕೆ ಒಳಪಟ್ಟಿದೆ.
- ಸಮಯಾವಕಾಶದ ಕೊರತೆಯಿಂದ ಈ ಅಧ್ಯಯನವು ಕೇವಲ 80 ಗ್ರಾಹಕರನ್ನು ಬೇಟಿಯಾಗಿ ಮಾಹಿತಿ ಪಡೆಯುವಲ್ಲಿನ್ನು ಕೊಡಮಾಡಿದೆ.
- ಈ ಅಧ್ಯಯನವು ಕೇವಲ ಉಡುಪಿ ತಾಲೂಕಿಗೆ ಸೀಮಿತವಾಗಿದೆ.
- ಗ್ರಾಹಕರ ಇಚ್ಛಾಶಕ್ತಿ, ಮನಸ್ಥಿತಿಯು ಕಾಲಕ್ಕನುಗುಣವಾಗಿ ಬದಲಾಗುತ್ತಾ ಸಾಗುವುದರಿಂದ ಅಧ್ಯಯನದಲ್ಲಿ ನಡೆಸಿದ ಸಂಶೋಧನೆಯು ಧೀರ್ಘಾವಧಿಗೆ ಉತ್ತಮವಲ್ಲ.
- ಸ್ಪರ್ಧಾತ್ಮಕ ಬ್ಯಾಂಕುಗಳು ಹಲವಾರು ಇರುವುದರಿಂದ ಈ ಅಧ್ಯಯನದಲ್ಲಿ ಕೆಲವು ಬ್ಯಾಂಕ್‌ಗಳ ಮಾಹಿತಿ ಮಾತ್ರ ಬಳಸಲಾಗಿದೆ.

ಸಾಹಿತ್ಯ ವಿಮರ್ಶೆ

ವೈಭವ ಅಗರವಾಲ್ ರವರ – ಬ್ಯಾಂಕ್‌ನಿಂದ ಉತ್ತಮ ಶಿಕ್ಷಣ ಸಾಲ ಪಡೆಯಲು ಭಾರತದಲ್ಲಿ ಮುಖ್ಯವಾಗಿ 6 ವಿಚಾರಗಳನ್ನು ತುಲನೆ ಮಾಡಬೇಕು.

ರಾಷ್ಟ್ರೀಕೃತ ಮತ್ತು ಖಾಸಗಿ ಬ್ಯಾಂಕ್‌ಗಳಾದ ಎಸ್.ಬಿ.ಐ., ಬ್ಯಾಂಕ್ ಆಫ್ ಬರೋಡ, ಎಚ್.ಡಿ.ಎಫ್.ಸಿ. ಬ್ಯಾಂಕ್, ಸಿಟಿ ಬ್ಯಾಂಕ್ ಮತ್ತು ಇತರೆ ಬ್ಯಾಂಕ್‌ಗಳಲ್ಲಿಯೂ ಶಿಕ್ಷಣ ಸಾಲ ಯೋಜನೆಯು ಸಾಲಕ್ಕೆ ಪಾತ್ರರಾದವರಿಗೆ ಶಿಕ್ಷಣ ಸಾಲವನ್ನು ನೀಡಲಾಗುತ್ತದೆ.ಬ್ಯಾಂಕ್‌ಗಳು ಅತೀ ಕಡಿಮೆ ಅವಧಿಯಲ್ಲಿ ಮತ್ತು ಅತೀ ಕಡಿಮೆ ಪ್ರಕ್ರಿಯೆಯಿಂದ ಸಾಲವನ್ನು ನೀಡುತ್ತದೆ.ಬ್ಯಾಂಕ್‌ಗಳು ಸ್ಪರ್ಧಾತ್ಮಕ ರೀತಿಯಲ್ಲಿ ಸಾಲವನ್ನು ಗ್ರಾಹಕರಿಗೆ ನೀಡುತ್ತಲಿದೆ ಅಲ್ಲದೇ ಗ್ರಾಹಕರ ಇಚ್ಛೆಯ ಕೋರ್ಸುಗಳನ್ನು ಆರಿಸಲು ಅವಕಾಶ

ಕಲ್ಪಿಸುತ್ತಲಿದೆ.ಭಾರತದಲ್ಲಿ ಶಿಕ್ಷಣ ಸಾಲ ಯೋಜನೆಯನ್ನು ಪಡೆಯಲು ಗ್ರಾಹಕರು ಈ ಕೆಳಗಿನ ವಿಷಯಗಳನ್ನು ನೆನಪಿಟ್ಟುಕೊಳ್ಳಬೇಕು.

ಶಿಕ್ಷಣ ಸಾಲ ಯೋಜನೆಯ ಬಗೆಗೆ ಡಾ! ಎ. ವಿನಯಗ ಮೂರ್ತಿಯವರ ಅಧ್ಯಯನದ ಪ್ರಕಾರ ಇತ್ತೀಚಿನ ದಿನಗಳಲ್ಲಿ ಉನ್ನತ ಶಿಕ್ಷಣದ ಶುಲ್ಕವು ತುಂಬಾ ಜಾಸ್ತಿ ಆಗುತ್ತಲಿದ್ದು ಶಿಕ್ಷಣ ಸಂಸ್ಥೆಗಳ ಶುಲ್ಕವು ಬೇರೆ ಬೇರೆಯಾಗಿದ್ದು ಸರಕಾರಿ ಶಿಕ್ಷಣ ಸಂಸ್ಥೆಗಳು ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳ ಶುಲ್ಕಗಳನ್ನು ಆಯಾ ಶಿಕ್ಷಣ ಸಂಸ್ಥೆಗಳು ಶುಲ್ಕವನ್ನು ತನ್ನ ಅಭಿವೃದ್ಧಿ ಕಾರ್ಯಗಳಿಗಾಗಿ ವಿದ್ಯಾರ್ಥಿಗಳಿಂದ ಪಡೆಯುತ್ತಾರೆ. ಈ ಎಲ್ಲಾ ಕಾರಣಗಳಿಂದಲಾಗಿ ವಿದ್ಯಾರ್ಥಿಗಳ ಉನ್ನತ ಶಿಕ್ಷಣ ಪಡೆಯುವ ಕನಸು ಸಾಕಾರವಾಗಿದೆ.ತಮ್ಮ ಶಿಕ್ಷಣವನ್ನು ಮೊಟಕುಗೊಳಿಸುತ್ತಲಿದ್ದಾರೆ.ಇನ್ನು ಗ್ರಾಮೀಣ ಜನರು ತಮ್ಮ ಮಕ್ಕಳ ವಿದ್ಯಾಭ್ಯಾಸವನ್ನು ಪಟ್ಟಣಗಳಲ್ಲೇ ಕೊಡಿಸಬೇಕಾಗಿರುವ ಕಾರಣ ತಮ್ಮ ಮಕ್ಕಳನ್ನು ಪಟ್ಟಣಗಳಲ್ಲಿ ಉನ್ನತ ಶಿಕ್ಷಣಕ್ಕಾಗಿ ಸೇರಿಸುತ್ತಾರೆ.ಆದರೆ ಕಾಲೇಜಿನ ಶುಲ್ಕಗಳು ವಿದ್ಯಾರ್ಥಿನಿಲಯ ಶುಲ್ಕ ಹಾಗೂ ಇತರೆ ಖರ್ಚುಗಳನ್ನು ಭರಿಸಲು ಗ್ರಾಮೀಣ ಜನರಲ್ಲಿ ಹಣದ ಅಭಾವ ಕಂಡು ಬರುತ್ತದೆ.ಇದರಿಂದಲಾಗಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳ ಉನ್ನತ ಶಿಕ್ಷಣ ಪಡೆಯುವ ಕನಸು ನನಸಾಗಿ ಉಳಿಯುತ್ತಿದೆ.ಇಂದು ರಾಷ್ಟ್ರೀಕೃತ ಬ್ಯಾಂಕುಗಳು ತಮ್ಮ ಹೊಸ ಹೊಸ ಯೋಜನೆಗಳಲ್ಲಿ ಶಿಕ್ಷಣ ಸಾಲ ಯೋಜನೆಯನ್ನು ಕೂಡ ಪ್ರಾರಂಭಿಸಿದ್ದು ಇದರಿಂದಲಾಗಿ ವಿದ್ಯಾರ್ಥಿಗಳು ತಮ್ಮ ಉನ್ನತ ಶಿಕ್ಷಣ ಪಡೆಯುವ ಕನಸನ್ನು ನನಸಾಗಿಸಲು ಸಹಕಾರಿಯಾಗಿದೆ.

ಇನ್ನುಳಿದಂತೆ ಬ್ಯಾಂಕ್‌ಗಳು ಮರುಪಾವತಿಸಲು ಕೂಡ ಹೆಚ್ಚಿನ ಕಾಲಾವಾಕಾಶವಿದ್ದು ಇದರಿಂದಲಾಗಿ ವಿದ್ಯಾರ್ಥಿಗಳ ಕನಸು ನನಸಾಗಿಸಿದೆ.ಬ್ಯಾಂಕ್‌ನ ಶಿಕ್ಷಣ ಸಾಲ ಯೋಜನೆಯ ಬಡ್ಡಿದರದಲ್ಲಿಯೂ ಸ್ಪರ್ಧಾತ್ಮಕತೆ ಇರುವುದರಿಂದಲಾಗಿ ವಿದ್ಯಾರ್ಥಿಗಳಿಗೆ ಇದು ತುಂಬಾ ಸಹಕಾರಿಯಾಗಿದೆ.

ಬಡ್ಡಿದರ

ಬ್ಯಾಂಕ್‌ಗಳಲ್ಲಿ ಶಿಕ್ಷಣ ಸಾಲ ಪಡೆಯುವವರು ಮುಖ್ಯವಾಗಿ ಗಮನಿಸಬೇಕಾದುದು ಬಡ್ಡಿದರ.ಈ ಬಡ್ಡಿದರವು ಬ್ಯಾಂಕ್‌ಗಳಿಗೆ ಹಣವನ್ನು ಕ್ರೋಢೀಕರಿಸುವ ಮುಖ್ಯ ವಿಷಯವಾಗಿದೆ.ಆದುದರಿಂದ ಬ್ಯಾಂಕ್‌ನವರು ಹೆಚ್ಚಾಗಿ ಬಡ್ಡಿದರವನ್ನು ಹೆಚ್ಚು ಇರುವಂತೆ ಮಾಡುತ್ತಾರೆ.ಆದರೆ ಇತ್ತೀಚಿನ ದಿನಗಳಲ್ಲಿ ಬ್ಯಾಂಕ್‌ಗಳ ಸಂಖ್ಯೆ ಹೆಚ್ಚಾದುದರಿಂದ ಮತ್ತು ಸ್ಪರ್ಧಾತ್ಮಕ ರೀತಿಯ ಶಿಕ್ಷಣ ಸಾಲ ಯೋಜನೆಗಳನ್ನು ಪ್ರಾರಂಭಿಸಿರುವುದರಿಂದ ಬಡ್ಡಿದರವು ಒಂದು ಮಟ್ಟವನ್ನು ಕಾಯ್ದುಕೊಂಡಿರುತ್ತದೆ.ಆದರೂ ಬ್ಯಾಂಕ್‌ಗೆ ಉತ್ತಮವಾದ ಆದಾಯ ಬರುತ್ತದೆ.ಇನ್ನು ಬ್ಯಾಂಕ್‌ಗಳು ಬದಲಾಗುತ್ತ ಬಡ್ಡಿದರಕ್ಕಿಂತ ನಿರಖು ಬಡ್ಡಿದರವನ್ನೇ ಹೆಚ್ಚಾಗಿ ಇಟ್ಟಿರುತ್ತಾರೆ.

ಬಡ್ಡಿದರ ನಿಗದಿ

ಬ್ಯಾಂಕ್‌ನವರು ಹಣವನ್ನು ಸಾಲ ರೂಪದಲ್ಲಿ ಕೊಟ್ಟಕೂಡಲೇ ಬಡ್ಡಿದರ ನಿಗದಿ ಮಾಡುತ್ತಾರೆ.ನಾವು ಸಾಲ ಮರುಪಾವತಿ ಮಾಡುವವರೆಗೆ ಕಾಯುವುದಿಲ್ಲ. ನಾವು ಬ್ಯಾಂಕ್‌ನವರಲ್ಲಿ ಶಿಕ್ಷಣ ಸಾಲದ ಬಡ್ಡಿದರ ನಿಗದಿಯ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ಪಡೆದು ಕೊಳ್ಳಲೇಬೇಕು.ಇಲ್ಲವಾದಲ್ಲಿ ಬಡ್ಡಿಯು ಶೇಖರಗೊಳ್ಳುತ್ತಾ ಹೋಗಿ ನಮ್ಮ ಸಾಲದ ಮೊತ್ತ ಎನ್ನುವುದು ಅತೀ ದೊಡ್ಡ ಮೊತ್ತವಾಗುತ್ತದೆ.ಆದುದರಿಂದ ಸಾಲ ಪಡೆಯುವವರೇ ಮುಂಜಾಗರೂಕರಾಗಿ ಎಲ್ಲಾ ಮಾಹಿತಿಯನ್ನು ಕೇಳಿಕೊಳ್ಳುವುದು ಸೂಕ್ತ.

ವಿನಾಯಿತಿಯ ಅವಧಿ

ಶಿಕ್ಷಣ ಸಾಲ ಯೋಜನೆಯಲ್ಲಿ ವಿದ್ಯಾರ್ಥಿಯು ತನ್ನ ವಿದ್ಯಾಭ್ಯಾಸ ಮುಗಿಸಿ ಒಂದು ವರ್ಷ ಅಥವಾ ಕಲಸಕ್ಕೆ ಸೇರಿ ಆರು ತಿಂಗಳು ಇದರಲ್ಲಿ ಯಾವುದು ಮೊದಲೋ ಆವಾಗ ಅತನು ತನ್ನ ಶಿಕ್ಷಣ ಸಾಲ ಮರುಪಾವತಿಯನ್ನು ಪ್ರಾರಂಭಿಸಬೇಕುತ್ತದೆ.ಆದರೆ ಈ ಅವಕಾಶ ನೀವು ಸಾಲ ಪಡೆದ ಬ್ಯಾಂಕ್‌ನಲ್ಲಿ ಇದೆಯಾ ಎಂಬ ಮಾಹಿತಿಯನ್ನು ಅತೀ ಸೂಕ್ಷ್ಮವಾಗಿ ಗಮನಿಸಿಕೊಂಡಿರಬೇಕು.

ಶುಲ್ಕ ಮತ್ತು ಇತರೆ ಖರ್ಚು

ಶಿಕ್ಷಣ ಸಾಲ ಪಡೆಯಲು ಬ್ಯಾಂಕ್‌ನಲ್ಲಿ ಯಾವುದಾದರೂ ಶುಲ್ಕಗಳಿವೆಯೇ ಅಥವಾ ಆ ಶುಲ್ಕಗಳು ತೀರಾ ಕಡಿಮೆಯಾಗಿ ನಮಗೆ ಸಿಗುತ್ತದೆಯೇ ಎಂದು ಗಮನಿಸಬೇಕು.

ಜಾಮೀನು ಅಥವಾ ಭದ್ರತೆ

ಭಾರತದಲ್ಲಿ 4 ಲಕ್ಷಕ್ಕಿಂತ ಹೆಚ್ಚಿನ ಶಿಕ್ಷಣ ಸಾಲವನ್ನು ಪಡೆಯ ಬೇಕಾದರೆ ಆ ವಿದ್ಯಾರ್ಥಿ ಅಥವಾ ಪೋಷಕರು ಆಯಾ ಬ್ಯಾಂಕ್‌ನ ನಿಯಮಗಳಿಗನುಸಾರವಾಗಿ ಜಾಮೀನು ಅಥವಾ ಭದ್ರತೆಯನ್ನು ನೀಡಬೇಕಾಗುತ್ತದೆ.ಆದುದರಿಂದ ಶಿಕ್ಷಣ ಸಾಲ ಪಡೆಯಲು ಬಯಸುವವರು ಅಥವಾ ಭದ್ರತೆ ನೀಡಲು ಬೇಕಾದ ಏರ್ಪಾಟುಗಳನ್ನು ಮೊದಲೇ ಮಾಡಿಟ್ಟುಕೊಳ್ಳಬೇಕು.

ಅರೆ ಸಂದಾಯ (ಮೊದಲ ಸಂದಾಯ, Down Payment)

ಶಿಕ್ಷಣ ಸಾಲ ಪಡೆಯುವಾಗ ವಿದ್ಯಾರ್ಥಿಯ ಹೆತ್ತವರು ಆಯಾ ಬ್ಯಾಂಕ್‌ನ ನಿಯಾಮಾನುಸಾರ ಶಿಕ್ಷಣ ಸಾಲ ಪಡೆದ ಮೊತ್ತದ 5% ರಿಂದ 20% ವರೆಗೆ ಅರೆ ಸಾಂದಾಯ ಮಾಡಬೇಕಾಗುತ್ತದೆ.

ಈ ಎಲ್ಲಾ 6 ವಿಚಾರಗಳನ್ನು ಶಿಕ್ಷಣ ಸಾಲ ಪಡೆಯುವವರು ಗಮನದಲ್ಲಿರಿಸಿಕೊಂಡು ಬೇರೆ ಬೇರೆ ಬ್ಯಾಂಕ್‌ನ ಶುಲ್ಕಗಳ, ಕಾಗದ ಪತ್ರಗಳ, ಜಾಮೀನು ಅಥವಾ ಭದ್ರತೆ, ಬಡ್ಡಿದರ, ವಿನಾಯಿತಿ ಅವಧಿ ಇತ್ಯಾದಿಗಳನ್ನು ತುಲನೆ ಮಾಡಿ ಯಾವುದು ಉತ್ತಮ ಮತ್ತು ಎಲ್ಲಿ ಸಾಲ ಪಡೆದರೆ ನಮಗೆ ಹೆಚ್ಚಿನ

ಅನುಕೂಲವಾಗುತ್ತದೆ ಎಂಬುದನ್ನು ಗಮನಿಸಿ ಶಿಕ್ಷಣ ಸಾಲ ಪಡೆಯುವುದು ಸೂಕ್ತ ಎಂದು ವೈಭ ಅಗರವಾಲ್‌ರವರ ಅನಿಸಿಕೆ.

ದೇಶದ ಅಭಿವೃದ್ಧಿ

ಎ.ಪಿ.ಜೆ.ಅಬ್ದುಲ್ ಕಲಾಮ್‌ರವರು ಡಿಸೆಂಬರ್ 28, 2003ರಲ್ಲಿ ಯು.ಜಿ.ಸಿ.ಯ ಸುವರ್ಣ ವರ್ಷಾಚರಣೆಯ ಕಾರ್ಯಕ್ರಮದಲ್ಲಿ ಈ ರೀತಿ ಹೇಳಿದ್ದಾರೆ.ಯಾವುದೇ ದೇಶ ಅಭಿವೃದ್ಧಿ ಆಗಬೇಕಾದರೆ ಆ ದೇಶದ ಶಿಕ್ಷಣ ಮಟ್ಟ ಅಭಿವೃದ್ಧಿಯಾಗಿರಬೇಕು ಎಂದಿದ್ದಾರೆ.

ಅಧ್ಯಯನದ ಪ್ರಾಮುಖ್ಯತೆ

01. ಪ್ರಸ್ತುತ ಅಧ್ಯಯನ ಮುಂದಿನ ಅಧ್ಯಯನಕ್ಕೆ ಪ್ರಯೋಜನಕಾರಿಯಾಗಬಲ್ಲದು.
02. ಈ ಅಧ್ಯಯನದಿಂದ ಬರುವ ಫಲಿತಾಂಶಗಳು ಸರಕಾರ ಮತ್ತು ಸರಕಾರೇತರ ಸಂಸ್ಥೆಗಳಿಗೆ ಕಾರ್ಯಕ್ರಮ ಅಳವಡಿಸುವ ಸಂದರ್ಭದಲ್ಲಿ ಸಹಕಾರಿಯಾಗಬಹುದು.
03. ಈ ಅಧ್ಯಯನದಿಂದ ಕಂಡು ಬಂದಂತಹ ಫಲಿತಾಂಶವು ಶಿಕ್ಷಣವನ್ನು ಪಡೆಯಲಿಚ್ಛಿಸುವ ಬಡ ವಿದ್ಯಾರ್ಥಿಗಳಿಗೆ, ಸಮಾಜ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಂಸ್ಥೆಗಳಿಗೆ, ಅಭಿವೃದ್ಧಿ ಅಧ್ಯಯನ, ಮತ್ತು ಇತರೇ ಸಂಬಂಧಪಟ್ಟ ವಿಷಯಗಳಿಗೆ ಕೊಡುಗೆ ನೀಡಬಲ್ಲದು.

ಅಧ್ಯಯನದ ವ್ಯಾಪ್ತಿ ಮತ್ತು ಉಡುಪಿ ತಾಲೂಕಿನ ಸಂಕ್ಷಿಪ್ತ ವಿವರ


ಕರ್ನಾಟಕ ರಾಜ್ಯದ ಜಿಲ್ಲೆಗಳಲ್ಲಿ ಒಂದಾದ ಉಡುಪಿ ಜಿಲ್ಲೆಯು 1997ರಲ್ಲಿ ಉದಯಿಸಿತು.ಉಡುಪಿ ತಾಲೂಕು ಇದು ಉಡುಪಿ ಜಿಲ್ಲೆಯ ಮೂರು ತಾಲೂಕುಗಳಲ್ಲಿ ಒಂದಾಗಿದೆ.ಉಡುಪಿ ಜಿಲ್ಲೆಯ ಉತ್ತರದಲ್ಲಿ ಕುಂದಾಪುರ ತಾಲೂಕು ಹಾಗೂ ಪೂರ್ವದಲ್ಲಿ ಕಾರ್ಕಳ ತಾಲೂಕು ಇದೆ.ಉಡುಪಿ ತಾಲೂಕು ಹಲವು ರಾಷ್ಟ್ರೀಕೃತ ಬ್ಯಾಂಕುಗಳ ಹುಟ್ಟೂರು ಎಂದರೆ ತಪ್ಪಾಗಲಾರದು.ಸಿಂಡಿಕೇಟ್ ಬ್ಯಾಂಕು, ವಿಜಯ ಬ್ಯಾಂಕ್, ಕಾರ್ಪೊರೇಷನ್ ಬ್ಯಾಂಕ್‌ಗಳು ಉಡುಪಿ ತಾಲೂಕಿನಲ್ಲಿ ಉದಯಿಸಿ ದೇಶದ ನಾನಾ ಕಡೆಗಳಲ್ಲಿ ತನ್ನ ಶಾಖೆಗಳನ್ನು ಹೊಂದಿದೆ. ಹಾಗೆಯೇ ಹೊಟೇಲು ಉದ್ಯಮ ಮತ್ತು ದೇಗುಲಗಳ ನಾಡು ಎಂಬ ಹೆಸರಿಂದ ಪ್ರಖ್ಯಾತಿಪಡೆದಿದೆ. ಇಲ್ಲಿನ ಅನೇಕ ವಿದ್ಯಾ ಸಂಸ್ಥೆಗಳು ವೈದ್ಯಕೀಯ ಆಸ್ಪತ್ರೆಗಳು ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದೆ.ಉಡುಪಿ ತಾಲೂಕಿನಲ್ಲಿ ಹೆಚ್ಚಾಗಿ ಅಕ್ಕಿ ಮತ್ತು ತೆಂಗು ಪ್ರಮುಖ ಬೆಳೆಯಾಗಿ ರೈತರು ಬೆಳೆಯುತ್ತಾರೆ.ಮೀನುಗಾರಿಕೆ ಇಲ್ಲಿನ ಪ್ರಮುಖ ಉದ್ಯೋಗವಾಗಿದೆ.ತುಳು. ಕನ್ನಡ ಮತ್ತು ಕೊಂಕಣಿ ಇಲ್ಲಿನ ಜನರ ಪ್ರಮುಖ ಭಾಷೆಗಳಾಗಿವೆ. ಜೊತೆಗೆ ಬ್ಯಾರಿ ಭಾಷೆ ಮತ್ತು ಕುಂದ ಕನ್ನಡ ಕೂಡ ಬಳಕೆಯಲ್ಲಿವೆ.

ಭರತನಾಟ್ಯ, ಯಕ್ಷಗಾನ, ನಾಗಾರಾಧನೆ, ಭೂತಕೋಲ ಮತ್ತು ಕೋಳಿ ಅಂಕ.ಇಲ್ಲಿನ ಸಂಸ್ಕೃತಿಯ ಭಾಗಗಳು ರಾಜ್ಯ ಸರ್ಕಾರ ನಡೆಸುವ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿ.ಯು.ಸಿ.ಪರೀಕ್ಷಾ ಫಲಿತಾಂಶದಲ್ಲಿ

ಜಿಲ್ಲೆ ಉತ್ತಮ ಸ್ಥಿತಿ ಕಾಯ್ದುಕೊಂಡಿದೆ.ಎಂ.ಐ.ಟಿ. ಮಣಿಪಾಲ ವಿಶ್ವ ವಿದ್ಯಾಲಯವು ಜಾಗತಿಕ ಮಟ್ಟದಲ್ಲಿ ಉನ್ನತ ಶಿಕ್ಷಣಕ್ಕೆ ಕೇಂದ್ರವಾಗಿದೆ.ಇಷ್ಟೆಲ್ಲಾ ಮುಂದುವರಿದ ಉಡುಪಿ ತಾಲೂಕು ಆಧುನೀಕರಣ, ಕೈಗಾರೀಕರಣ, ಜಾಗತೀಕರಣವನ್ನು ಹೆಚ್ಚೆಚ್ಚು ಬಳಸಿ ಅತೀ ವೇಗದಿಂದ ಅಭಿವೃದ್ಧಿ ಎಡೆಗೆ ಸಾಗುತ್ತಲಿದೆ.ಆದರೆ ಉನ್ನತ ಶಿಕ್ಷಣ ಪಡೆಯುವವರ ಸಂಖ್ಯೆ ಮತ್ತು ಉನ್ನತ ಶಿಕ್ಷಣ ಪಡೆಯುವಲ್ಲಿ ಅವರಿಗೆ ಉಂಟಾಗುವ ಆರ್ಥಿಕ ತೊಂದರೆ ಇಂದಲಾಗಿ ಉನ್ನತ ಶಿಕ್ಷಣ ಪಡೆಯಲು ಸಮಸ್ಯೆಯಾಗುತ್ತಿದೆ.ಈ ನಿಟ್ಟಿನಲ್ಲಿ ಸಂಶೋಧಕರು ಉನ್ನತ ಶಿಕ್ಷಣದಲ್ಲಿ ಸಾಲ ಸೌಲಭ್ಯಗಳು ಉಡುಪಿ ತಾಲೂಕಿನ ಫಲಾನುಭವಿಗಳ ಬಗ್ಗೆ ಅಧ್ಯಯನ ನಡೆಸುವ ನಿಟ್ಟಿನಲ್ಲಿ ಸಂಶೋಧನೆಯನ್ನು ಕೈಗೆತ್ತಿಕೊಳ್ಳಲಾಗಿದೆ.

KARNATAKA MAP




UDUPI
DISTRICT
N
UTTARA KANNADA
To Karwar
NH-17
Kadike
Goliguddej
Mavinakaru
Golihole
Ambaglu
Jadkal
Muduru
Kollur
Aluru
Chittur
Talahurane
Baregundi
SHIMOGA
Vandse
Harmannu
Dottinaberu
Nachchattu
KUNDAPURA
Halakki Hola
Koteswar
Nettukallugudde
Surikodlu
Kota
Thalamakki
Bakudi Hole
Someshvar
Kokkaroni
Hangarkatta
Chantaru
Shivapura
Kuditota
Tonse
ARABIAN SEA
UDUPI
Bommarubettu
CHIKMAGALUR
Ajekar
Nagabail
Umikal
Pernankile
Pangala
Pitarkan
KARKAL
Bija
Yermal
Kanyala
NH-17
Sanuru
To Mangalore
Kodlamale
Kadandale
DAKSHINA KANNADA
LEGEND
National Highway
Major Road
Railway
District Boundary
State Boundary
River
District HQ
Other Town
Major Town
Map not to Scale
Copyright © 2013 www.mapsofindia.com
(Updated on 18th February 2013)

ಅಧ್ಯಾಯ – ೩

ಬ್ಯಾಂಕ್‌ಗಳ ಕಿರು ಪರಿಚಯ

ಅಧ್ಯಾಯ ೩

ಬ್ಯಾಂಕ್‌ಗಳ ಕಿರು ಪರಿಚಯ

ಬ್ಯಾಂಕಿನ ಪಾರ್ಶ್ವ ಚಿತ್ತ ಕೆನರಾ ಬ್ಯಾಂಕ್ ಎ. ಸುಬ್ಬರಾವ್ ಪೈ.ರವರ ಪ್ರಕಾರ ಒಂದು ಉತ್ತಮವಾದ ಬ್ಯಾಂಕ್ ಕೇವಲ ಹಣಕಾಸಿನ ವ್ಯವಹಾರಕ್ಕೆ ಮಾತ್ರ ಸೀಮಿತವಾಗಿರದೆ, ಅವರೊಂದಿಗೆ ಎಲ್ಲಾ ರೀತಿಯ ಉಪಕಾರವನ್ನು ಮಾಡಿ ಸಾಮಾನ್ಯ ಜನರ ಜೀವನ ಮಟ್ಟ ಮತ್ತು ಆರ್ಥಿಕ ಮಟ್ಟ ಸುಧಾರಿಸುವಲ್ಲಿಯೂ ತನ್ನ ಕಾರ್ಯವನ್ನು ಸಾಧಿಸಬೇಕು ಎಂದಿದ್ದಾರೆ.

ಪ್ರಸ್ಥಾನ

ಕೆನರಾ ಬ್ಯಾಂಕ್ ಒಂದು ಉತ್ತಮ ವ್ಯವಹಾರನಿರತ ಬ್ಯಾಂಕ್ ಆಗಿದ್ದು ವಿಶ್ವಮಟ್ಟದಲ್ಲಿ ಒಳ್ಳೆಯ ಲಾಭಾಂಶವನ್ನು ಸಾಧಿಸುತ್ತಲಿದೆ.ವ್ಯವಹಾರ ದಕ್ಷತೆ, ಆಸ್ತಿಯ ಗುಣಮಟ್ಟ, ಅಪಾಯದ ನಿರ್ವಹಣೆ ಮತ್ತು ವಿಶ್ವದರ್ಜೆಗೆ ವಿಸ್ತರಿಸುತ್ತಲಿದೆ.

ಧ್ಯೇಯ

ಉತ್ತಮವಾದ ವ್ಯವಹಾರ ಸೇವೆಯನ್ನು ತನ್ನ ಗ್ರಾಹಕರಿಗೆ ನೀಡುವಂತಹದ್ದು, ತನ್ನ ಶೇರುದಾರರಿಗೆ ಹೆಚ್ಚಿನ ಲಾಭವನ್ನು ತಂದು ಕೊಡುವಂತಹದ್ದು.

ಇತಿಹಾಸ

ಬ್ಯಾಂಕ್‌ಗಳು ಎಲ್ಲಾ ಕಂಪೆನಿಗಳಂತೆ ತಾವಾಗೇ ಹುಟ್ಟಿಕೊಂಡಿರುವಂತಹದ್ದಾಗಿಲ್ಲ. ಬ್ಯಾಂಕ್‌ಗಳನ್ನು ಹಿಂದಿನ ಕಾಲದಲ್ಲಿ ರಾಜಕೀಯದವರು ನಿರ್ಮಿಸಿದ್ದಾರೆ.

ಕೆನರಾ ಬ್ಯಾಂಕ್ 1906ರಲ್ಲಿ ಮಂಗಳೂರಿನಲ್ಲಿ ಸ್ಥಾಪನೆಗೊಂಡಿತು.ಇದನ್ನು ಹಿರಿಯ ವಕೀಲ, ಸಮಾಜ ಸೇವಕ, ಶ್ರೀ ಅಮ್ಮೆಂಬಳ ಸುಬ್ಬರಾವ್ ಪೈಗಳು ಸ್ಥಾಪಿಸಿದರು.ಸ್ಥಾಪನೆಗೊಂಡಾಗ ಕೆನರಾ ಹಿಂದೂ ಕಾಯಂ ಬಂಡವಾಳ ಎಂಬ ಹೆಸರಿನೊಂದಿಗೆ ಸ್ಥಾಪನೆಯಾಗಿ 1910ರಲ್ಲಿ ಕೆನರಾ ಬ್ಯಾಂಕ್ ಲಿಮಿಟೆಡ್ ಎಂದು ಆಯಿತು.ತದ ನಂತರ 1969 ರಲ್ಲಿ ಬ್ಯಾಂಕ್ ರಾಷ್ಟ್ರೀಕರಣಗೊಂಡು ಕೆನರಾ ಬ್ಯಾಂಕ್ ಆಗಿ ಪರಿವರ್ತಿತಗೊಂಡಿತು.

ಮೂಲತತ್ವ

1. ಮೂಢ ನಂಬಿಕೆ ಮತ್ತು ಕಡೆಗಣಿಸುವಿಕೆಯನ್ನು ನಿರ್ಮೂಲನೆ ಮಾಡುವುದು.
2. ಉಳಿತಾಯ ಮತ್ತು ಮಿತವ್ಯಯದ ಬಗೆಗೆ ಮನದಟ್ಟಾಗುವಂತೆ ಹೇಳುವುದು.

3. ಬ್ಯಾಂಕ್‌ನಲ್ಲಿ ಕೇವಲ ಹಣಕಾಸಿನ ವ್ಯವಹಾರ ಸಂಬಂಧವನ್ನು ಮಾತ್ರ ತೋರದೇ ಸಾಮಾಜಿಕವಾಗಿಯೂ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು.

4. ಬಡವರಿಗೆ ಸಹಾಯವನ್ನು ಮಾಡುವುದು.

5. ಸಿಬ್ಬಂದಿಗಳು ಸೇವಾಮನೋಭಾವದಿಂದ ಮತ್ತು ಮನಸ್ಪೂರ್ವಕವಾಗಿ ಕೆಲಸ ಮಾಡುವಂತಹದ್ದು.

6. ಆನರ ಕಷ್ಟ ಕಾರ್ಪಣ್ಯಗಳಿಗೆ ಸ್ಪಂದಿಸುವ ಮತ್ತು ಜನರಿಗೆ ಸಾಮಾಜಿಕ ನ್ಯಾಯ ಒದಗಿಸುವ ಕೆಲಸ ಮಾಡುವುದು.

ನಿಶ್ಚಲವಾದ ತತ್ವ, ಸದೃಢವಾದ ನಾಯಕತ್ವ, ಉತ್ತಮವಾದ ಕೆಲಸ ಮತ್ತು ಎಲ್ಲ ಮೆಚ್ಚುಗೆಗೆ ಪಾತ್ರವಾಗಿ ಬ್ಯಾಂಕಿಂಗ್‌ನ ವಲಯದಲ್ಲಿ ಮುಂದೆ ಇರುವ ಬ್ಯಾಂಕ್‌ಗಳಲ್ಲಿ ಕೆನರಾ ಬ್ಯಾಂಕ್ ಕೂಡಾ ಒಂದಾಗಿದೆ.

ಕೆನರಾ ಬ್ಯಾಂಕ್‌ನ ಬಗ್ಗೆ

ಕೆನರಾ ಬ್ಯಾಂಕ್ ಅನ್ನು ಸ್ಥಾಪಿಸಿದವರು ಶ್ರೀ ಅಮ್ಮೆಂಬಳ್ ಸುಬ್ಬರಾವ್ ಪೈ ರವರು.ಅವರೊಬ್ಬ ಪ್ರವಾದಿ ಮತ್ತು ತತ್ವಜ್ಞಾನಿಗಳಾಗಿದ್ದರು.1906 ಜುಲೈ ತಿಂಗಳಿನಲ್ಲಿ ಅವರು ಮಂಗಳೂರಿನಲ್ಲಿ ಪ್ರಥಮವಾಗಿ ಬ್ಯಾಂಕ್ ಅನ್ನು ಸ್ಥಾಪನೆ ಮಾಡಲಾಯಿತು.ಬ್ಯಾಂಕ್‌ಗೆ ಈಗ ನೂರು ವರ್ಷ ತುಂಬಿದೆ.ಆದರೆ ಆ ನೂರು ವರ್ಷಗಳಲ್ಲಿ ಹಲವಾರು ಮೈಲುಗಳನ್ನು ದಾಟಿ ಮುಂದೆ ಸಾಗಿ ಬಂದಿದೆ.1969 ರಲ್ಲಿ ಕೆನರಾ ಬ್ಯಾಂಕ್ ರಾಷ್ಟ್ರೀಕೃತಗೊಂಡಿತು.ಅನಂತರದಲ್ಲಿ ಕೆನರಾ ಬ್ಯಾಂಕ್ ಬ್ಯಾಂಕಿಂಗ್ ಕ್ಷೇತ್ರದಲ್ಲಿ ತನ್ನದೇ ಆದ ಛಾಪವನ್ನು ಮೂಡಿಸುತ್ತಾ ಬಂದಿದೆ.2006ರಲ್ಲಿ ಕೆನರಾ ಬ್ಯಾಂಕ್ ಶತವರ್ಷ ಪೂರೈಸಿದ್ದು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಮುಂದುವರಿಯುತ್ತಾ ಸಾಗಿದೆ.ಇಷ್ಟೇ ಅಲ್ಲದೆ ಕೆನರಾ ಬ್ಯಾಂಕ್ ಹಲವಾರು ಪ್ರಥಮಗಳಿಗೆ ಕಾರಣವಾಗಿದೆ. ಅವುಗಳೆಂದರೆ –

- ಪ್ರಥಮವಾಗಿ ನಗರದೊಳಗಿನ ಎ.ಟಿ.ಎಂ. ಜಾಲಬಂಧ ಸ್ಥಾಪಿಸಿದೆ.
- ತನ್ನ ಶಾಖೆಗಳಿಗೆ ಐ.ಎಸ್.ಓ. ಪ್ರಮಾಣಪತ್ರವನ್ನು ಪಡೆದಿದೆ.
- ಮಹಿಳಾ ಬ್ಯಾಂಕ್‌ನ ಶಾಖೆಯನ್ನು ಇದು ಸ್ಥಾಪಿಸಿದೆ.
- ಕಟ್ಟಡ ನಿರ್ಮಾಣ ಸಂಸ್ಥೆಗಳಿಗಾಗಿಯೇ ಸಬ್ಸಿಡಿಯನ್ನು ಜಾರಿಗೆ ತಂದಿದೆ.
- ಕೃಷಿಕರಿಗೆ ಪ್ರಥಮ ಬಾರಿಗೆ ಕ್ರೆಡಿಟ್ ಕಾರ್ಡ್ ಅನ್ನು ನೀಡಿದ ಹೆಗ್ಗಳಿಕೆ.
- ಕೃಷಿ ಮಾಹಿತಿ ಕೇಂದ್ರವನ್ನು ಬ್ಯಾಂಕ್‌ನಲ್ಲಿ ಪ್ರಥಮವಾಗಿ ಪರಿಚಯಿಸಿದ ಹೆಗ್ಗಳಿಕೆಗೆ ಕೆನರಾ ಬ್ಯಾಂಕ್‌ಗೆ ಸಲ್ಲುತ್ತದೆ.

ಕೆನರಾ ಬ್ಯಾಂಕ್ ವರ್ಷಗಳಿಂದ ತನ್ನ ವ್ಯವಹಾರ ಮಟ್ಟವನ್ನು ವೃದ್ಧಿಸುತ್ತಾ ಸಾಗುತ್ತಿದೆ ಅಲ್ಲದೆ ಬ್ಯಾಂಕ್‌ನ ಒಟ್ಟಿಗೆ ಇತರೆ ವ್ಯವಹಾರಗಳೊಂದಿಗೂ ಸಹಭಾಗಿತ್ವ ಹೊಂದಿದೆ ಮತ್ತು ಹಲವಾರು ಕಾರ್ಯಕ್ರಮಗಳಿಗೆ ಧನ ಸಹಾಯವನ್ನು ಕೂಡ ನೀಡುತ್ತಾ ಬಂದಿದೆ.ಕೆನರಾ ಬ್ಯಾಂಕ್‌ನ ಸಹಯೋಗದೊಂದಿಗೆ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳು, ಔದ್ಯೋಗಿಕ ಕಾರ್ಯಕ್ರಮಗಳು, ವಿಚಾರ ಗೋಷ್ಠಿಗಳು, ಮಹಿಳಾ ಗೃಹ ಉತ್ಪನ್ನಗಳ ಮಾರಾಟಕ್ಕೆ ಸಹಕಾರ ಹೀಗೆ ಅನೇಕ ಕಾರ್ಯಕ್ರಮಗಳ ಮುಖೇನ ಜನಮಾನಸದಲ್ಲಿ ಕೆನರಾ ಬ್ಯಾಂಕ್ ಒಂದು ಮಹತ್ತರವಾದ ಸ್ಥಾನದಲ್ಲಿದೆ.

ಅನೇಕ ಸಾಮಾಜಿಕ ಕಳಕಳಿಯೊಂದಿಗೆ ಕೆನರಾ ಬ್ಯಾಂಕ್ ಹಲವಾರು ಯೋಜನೆಗಳನ್ನು ಕೈಗೊಂಡಿದ್ದು ಅವುಗಳೆಂದರೆ ದೇಶದ ಸೇವೆಗೆ ಆದ್ಯತೆಯನ್ನು ನೀಡಿದೆ.ಗ್ರಾಮೀಣಾಭಿವೃದ್ಧಿ ಯೋಜನೆಗಳು, ಗ್ರಾಮೀಣ ಜನರು ಉದ್ಯೋಗಾವಕಾಶ ಪಡೆಯಲು ಸಹಕಾರಿಯಾಗುವಂತೆ ಅನೇಕ ಉದ್ಯೋಗ ಕಾರ್ಯಾಗಾರ, ತರಬೇತಿ ಕಾರ್ಯಕ್ರಮಗಳನ್ನು ಗ್ರಾಮೀಣ ಮಟ್ಟದಲ್ಲಿ ನಡೆಸಿಕೊಂಡು ಬರುತ್ತಿದೆ.

ಅಧ್ಯಕ್ಷಕರ ನುಡಿ

ಕೆನರಾ ಬ್ಯಾಂಕ್ ಭಾರತದ ಒಂದು ಸರ್ವ ಶ್ರೇಷ್ಠ ಕಮರ್ಷಿಯಲ್ ಬ್ಯಾಂಕ್ ಆಗಿದ್ದು, ನೂರು ವರ್ಷಗಳ ಸೇವಾ ಅನುಭವ ಹೊಂದಿದೆ.2015 ರ ನವೆಂಬರ್ ಪ್ರಕಾರ ಭಾರತದಲ್ಲಿ ಕೆನರಾ ಬ್ಯಾಂಕಿನ 5784 ಶಾಖೆಗಳಿದ್ದು 9153 ಎ.ಟಿ.ಎಂ.ಕೇಂದ್ರಗಳು ಭಾರತದುದ್ದಕ್ಕೂ ಇದೆ ಮತ್ತು 31 ಮಿಲಿಯನ್‌ಗಿಂತಲೂ ಅಧಿಕ ಗ್ರಾಹಕರನ್ನು ಇದು ಒಳಗೊಂಡಿದೆ. ಅಲ್ಲದೆ 9 ಸಹಾಯಕ ಸಂಸ್ಥೆಗಳು/ಪ್ರಾಯೋಗಿಕ ಸಂಸ್ಥೆಗಳು/ಸಹಭಾಗಿತ್ವ ಸಂಸ್ಥೆಗಳು ಭಾರತದಲ್ಲಿ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿಯೂ ಕೂಡ ಇದೆ.

ಕೆನರಾ ಬ್ಯಾಂಕ್‌ನ ಸಂಘಟನೆಯ ನಕ್ಷೆ

ಗೌರವಾಧ್ಯಕ್ಷರು

↓

ನಿರ್ದೇಶಕರು (10)

↓

ಅಧ್ಯಕ್ಷರು

↓

ಪ್ರಧಾನ ವ್ಯವಸ್ಥಾಪಕ (13)

↓

ವೃತ್ತ ವ್ಯವಸ್ಥಾಪಕರು (30) (Circle Officers)

ಬ್ಯಾಂಕ್‌ನ ಮುಂದಿನ ಧ್ಯೇಯೋದ್ದೇಶಗಳು

ಕೆನರಾ ಬ್ಯಾಂಕ್ ಭಾರತದಲ್ಲಿ ತನ್ನದೇ ಆದ ಒಂದು ಉತ್ತಮ ಅಡಿಪಾಯವನ್ನು ಹೊಂದಿದ್ದು, ಉತ್ತಮ ಗ್ರಾಹಕ ಸ್ನೇಹಿ ಸೇವೆಯನ್ನು ನೂರಕ್ಕೂ ಹೆಚ್ಚು ವರ್ಷಗಳಿಂದ ನೀಡುತ್ತಾ ಬಂದಿದೆ.ಮೂರಕ್ಕೂ ಹೆಚ್ಚು ತಲೆಮಾರಿನವರ ಖಾತೆಗಳನ್ನು ನಿರ್ವಹಿಸಿ ಅನುಭವವಿರುವ ಬ್ಯಾಂಕ್ ಇದಾಗಿದ್ದು ಬಹುಕೋಟಿ ಲಾಭಾಂಶವನ್ನು ಪ್ರತೀ ವರ್ಷ ಸಂಪಾದಿಸುತ್ತಲಿದೆ.ಅಲ್ಲದೇ ಹೊಸ ಹೊಸ ತಂತ್ರಜ್ಞಾನಗಳನ್ನು ಬಳಸಿ ಗ್ರಾಹಕರಿಗೆ ಇನ್ನೂ ಹೆಚ್ಚಿನ ಸೇವೆಯನ್ನು ನೀಡುತ್ತಾ ಬಂದಿದೆ. ಆದರೆ ಯಾವುದೇ ಕಾರಣಕ್ಕೂ ದೇಶದ ಸಂಸ್ಕೃತಿಗಾಗಲೀ ಅಥವಾ ಜನರ ಮನಸ್ಸಿಗಾಗಲೀ ನೋವುಂಟು ಮಾಡದೆ ಅನೇಕ ಸವಲತ್ತುಗಳನ್ನು ನೀಡಿ ಜನರ ಆರ್ಥಿಕ ಮಟ್ಟವನ್ನು ಸುಧಾರಿಸುವಲ್ಲಿ ತನ್ನ ಪಾತ್ರವನ್ನು ತೋರಿಸಿದೆ ಮತ್ತು ತನ್ನ ಶೇರುದಾರರಿಗೂ ಉತ್ತಮ ಮೌಲ್ಯವರ್ದಿತ ದರದಲ್ಲಿ ಲಾಭಾಂಶವನ್ನು ನೀಡಿ ಅವರ ಆಕಾಂಕ್ಷೆಗಳನ್ನು ಈಡೇರಿಸಿದೆ. ಇನ್ನು ಗ್ರಾಮೀಣ ಜನರಿಗೆ ಮತ್ತು ಸಣ್ಣ ಪುಟ್ಟ ಪಟ್ಟಣಗಳ ಜನರಿಗೆ ಜನಸ್ನೇಹೀ ಕಾರ್ಯಕ್ರಮಗಳನ್ನು ನಡೆಸಿ ಅವರ ಏಳ್ಗೆಗೆ ತನ್ನ ಸಹಕಾರವನ್ನು ನೀಡಿದೆ.

21ನೇ ಶತಮಾನವು ತಂತ್ರಜ್ಞಾನ ಮತ್ತು ಉತ್ತಮ ಜ್ಞಾನದ ಶತಮಾನ ಎಂದು ಬಣ್ಣಿಸಿಲಾಗಿದ್ದು ಕೆನರಾ ಬ್ಯಾಂಕ್ ಕೂಡ ಈ ನಿಟ್ಟಿನಲ್ಲಿ ಅನೇಕ ಯೋಜನೆಗಳನ್ನು ಹೊರತಂದಿದೆ.ಕೆನರಾ ಬ್ಯಾಂಕ್ ಒಂದು ಕೇಂದ್ರಾಡಳಿತ ಬ್ಯಾಂಕಿಂಗ್ ವ್ಯವಸ್ಥೆಯನ್ನು ಜಾರಿಗೆ ತಂದಿದ್ದು ಇದರಿಂದ ಬೇರೆ ಬ್ಯಾಂಕ್‌ನೊಂದಿಗೆ ಸ್ಪರ್ಧೆ ನಡೆಸಲು ಅನುಕೂಲಕರವಾಗಿದೆ.

- ಬ್ಯಾಂಕ್ 21ನೇ ಶತಮಾನಕ್ಕೆ ತಕ್ಕನಾಗಿ ಮಾಹಿತಿ ತಂತ್ರಜ್ಞಾನ, ಜ್ಞಾನ ಮತ್ತು ಸ್ಪರ್ಧೆ ಇವಲ್ಲವೆನ್ನೂ ತಲುಪಲು ಹೆಚ್ಚಿನ ಯೋಜನೆಗಳನ್ನು ಹೊರತಂದಿದೆ.
- ಬ್ಯಾಂಕ್ ತನ್ನ ಗ್ರಾಹಕರಿಗೆ ಇ–ಬ್ಯಾಂಕಿಂಗ್ ಅನ್ನು ಮೊಬೈಲ್ ಬ್ಯಾಂಕಿಂಗ್ ಅನ್ನು ಅತೀ ಹೆಚ್ಚಿನವರು ಈ ಸೇವೆಯನ್ನು ಹೊಂದುವಂತೆ ಮತ್ತು ಇಂಟರ್‌ನೆಟ್ ಬ್ಯಾಂಕಿಂಗ್ ಅನ್ನು ಚಾಲನೆ ಮಾಡಿದೆ.
- ಬ್ಯಾಂಕ್ ತನ್ನ ಸಿಬ್ಬಂದಿಗಳ ಜ್ಞಾನವನ್ನು ತರಬೇತಿ ನೀಡುವ ಮುಖೇನ ವೃದ್ಧಿಸಿದೆ. ಸಿಬ್ಬಂದಿಗಳಿಗೆ ಕಂಪ್ಯೂಟರ್ ತರಬೇತಿ, ಹಾಗೂ ಇನ್ನಿತರ ಮಾಧ್ಯಮಗಳ ತರಬೇತಿಯನ್ನು ನೀಡಿ ಗ್ರಾಹಕರ ಸೇವೆಗೆ ಸಿಬ್ಬಂದಿಗಳನ್ನು ಹೊಸ ರೀತಿಯಲ್ಲಿ ತಯಾರು ಮಾಡಲಾಗಿದೆ.

ಈ ರೀತಿಯಾಗಿ ಕೆನರಾ ಬ್ಯಾಂಕ್ ಗ್ರಾಹಕ ಸ್ನೇಹಿಯಾಗಿ ಹಾಗೂ ಗ್ರಾಹಕರಿಗೆ ಸುಲಭವಾಗುವಂತೆ ನೋಡಿಕೊಳ್ಳಲು ಹೆಚ್ಚಿನ ಆದ್ಯತೆಗಳನ್ನು ನೀಡುತ್ತಲಿದ್ದು ಗ್ರಾಹಕರ ನಂಬಿಕೆಗೆ ಪಾತ್ರವಾಗಿದೆ.

ಕೆನರಾ ಬ್ಯಾಂಕ್‌ನ ಮುಂದಿನ ದ್ಯೇಯೋದ್ದೇಶಗಳು ಹೊಸ ಪೀಳಿಗೆಗೆ ಅನುಕೂಲಕರವಾಗಿ ಬ್ಯಾಂಕ್ ನಡೆಸಲು ಉದ್ದೇಶಿಸಿದ್ದು ಅದರ ಪ್ರಕಾರ ಕೆಲವು ಕಾರ್ಯಗಳು ಇಂತಿವೆ.

ಕೆನರಾ ಬ್ಯಾಂಕ್ ಎ.ಟಿ.ಎಂ. ಸೇವೆ

ಕೆನರಾ ಬ್ಯಾಂಕ್ ಎ.ಟಿ.ಎಂ.ನಲ್ಲಿ ನಾವು ದಿನದ ಯಾವ ಸಮಯದಲ್ಲಿಯೂ ಹೋಗಿ ಹಣವನ್ನು ಪಡೆಯಬಹುದು ಹಾಗೆಯೇ ನಮ್ಮ ಖಾತೆಗೆ ಹಣವನ್ನು ತುಂಬಲೂ ಬಹುದು.ಅದೇ ರೀತಿ ನಮ್ಮ ಖಾತೆಯಲ್ಲಿರುವ ಹಣದ ಮಾಹಿತಿಯನ್ನು ಪಡೆಯಬಹುದು.ಅಲ್ಲದೇ ಮೊಬೈಲ್ ರೀಚಾರ್ಜ್, ವಿಮಾನ ಟಿಕೆಟ್ ಪಡೆಯಲು, ಅಥವಾ ಯಾವುದಾದರೂ ವಸ್ತುಗಳನ್ನು ಖರೀದಿಸಲು ಈ ಎ.ಟಿ.ಎಂ.ಕಾರ್ಡ್ ಅನ್ನು ಬಳಸಬಹುದಾಗಿದೆ. ಹಣ ವರ್ಗಾಯಿಸಲೂ ಈ ಎ.ಟಿ.ಎಂ. ಕಾರ್ಡ್ ಅನ್ನು ಬಳಸಬಹುದಾಗಿದೆ.

ಕೆನರಾ ಬ್ಯಾಂಕ್ ಮನೆ ಸಾಲ

ಕೆನರಾ ಬ್ಯಾಂಕ್‌ನಿಂದ ನಮ್ಮ ಕನಸಿನ ಮನೆ ನಿರ್ಮಿಸಲು ಸ್ಪರ್ಧಾತ್ಮಕ ಬಡ್ಡಿದರದಲ್ಲಿ ಸಾಲವನ್ನು ಪಡೆಯಬಹುದಾಗಿದೆ.ಅಲ್ಲದೇ ಸಾಲ ಪಡೆಯುವ ಕಾರ್ಯ ಕೂಡ ಅತೀ ಕಡಿಮೆಯಾಗಿದ್ದು ಕೆಲವು ದಾಖಲೆಗಳು ಮಾತ್ರ ಸಾಕಾಗುತ್ತವೆ.

ಕೆನರಾ ಬ್ಯಾಂಕ್ ಅನ್ಯೋನ್ಯ ಬಂಡವಾಳ (Mutual Fund)

ಕೆನರಾ ಬ್ಯಾಂಕ್‌ನೊಂದಿಗೆ ಕೆನರಾ ರೋಬೆಕೋ ಮತ್ತು ಎಚ್.ಡಿ.ಎಫ್.ಸಿ., ಎ.ಎಂ.ಸಿ.ಗಳೊಂದಿಗೆ ಸಂಬಂಧ ಹೊಂದಿದ್ದು ಇದರಿಂದಲಾಗಿ ಕೆನರಾ ಬ್ಯಾಂಕ್‌ನ ಶಾಖೆಗಳಲ್ಲಿ ಈ ಎಲ್ಲಾ ಕಂಪನಿಗಳ ಶೇರ್ ಅನ್ನು ಮಾರಾಟ ಮಾಡಲಾಗುತ್ತದೆ.

ಕೆನರಾ ಬ್ಯಾಂಕ್ ಇಂಟರ್‌ನೆಟ್ ಬ್ಯಾಂಕಿಂಗ್

ಈ ವ್ಯವಸ್ಥೆ ಇಂದಲಾಗಿ ಬ್ಯಾಂಕಿಂಗ್ ಸೇವೆಯು ಗ್ರಾಹಕರ ಬೆರಳ ತುದಿಗೆ ತಲುಪುವಂತಾಗಿದೆ.ಕೆನರಾ ಬ್ಯಾಂಕ್‌ನ ಚಿಲ್ಲರೆ ವ್ಯಾಪಾರವು ಈಗ ನಮ್ಮ ಇಂಟರ್‌ನೆಟ್ ಬ್ಯಾಂಕಿಂಗ್‌ನಿಂದ ದಿನದ 24 ಗಂಟೆಯೂ ಗ್ರಾಹಕರ ಸೇವೆಗಾಗಿ ತೆರೆದುಕೊಂಡಿರುತ್ತದೆ.ಅಲ್ಲದೇ ಈ ಸೇವೆಯು ಉಚಿತವಾಗಿದ್ದು ತಮ್ಮ ಖಾತೆಯ ಸಂಪೂರ್ಣ ಮಾಹಿತಿಯನ್ನು ಇದರಿಂದ ಪಡೆಯಬಹುದಾಗಿದೆ ಮತ್ತು ನಾವು ಎಲ್ಲಿಂದ ಬೇರೆದ್ದರೂ ಈ ಸೇವೆಯನ್ನು ಪಡೆಯಲು ಸಾಧ್ಯವಾಗುತ್ತದೆ.

ಉಳಿತಾಯ ಮತ್ತು ಠೇವಣಿ ಖಾತೆ

ಕೆನರಾ ಬ್ಯಾಂಕ್‌ನ ಖಾತೆಗಳಲ್ಲಿ ಉಳಿತಾಯ ಖಾತೆ, ಠೇವಣಿ ಖಾತೆ, ಆರ್.ಡಿ.ಖಾತೆ, ಬಂಡವಾಳ ಹೂಡುವ ವ್ಯವಸ್ಥೆ, ತೆರಿಗೆ ರಿಯಾಯಿತಿ ಬಂಡವಾಳ ಹೂಡಿಕೆಗಳು, ಹಿರಿಯ ನಾಗರಿಕರಿಗಾಗಿ ಉಳಿತಾಯ ಖಾತೆ, ಚಕ್ರಬಡ್ಡಿಗಳಿಸುವ ಉಳಿತಾಯ ಖಾತೆ ಹೀಗೆ ಅನೇಕ ಖಾತೆಗಳನ್ನು ಹೊಂದಿದೆ.

ವೈಯಕ್ತಿಕ ಖಾತೆ

ಈ ಖಾತೆಯು ಬ್ಯಾಂಕ್‌ನ ಎಲ್ಲಾ ಸೇವೆಗಳನ್ನು ಪಡೆಯಬಹುದಾದಂತಹ ಖಾತೆಯಾಗಿದ್ದು ತುಂಬಾ ಅನುಕೂಲಕರವಾಗಿದೆ.ಈ ಖಾತೆಯೂ ಠೇವಣಿ, ಸಾಲ, ಬಂಡವಾಳ ಹೂಡಿಕೆ, ವಿಮೆ, ಇತ್ಯಾದಿ ಸೇವೆಗಳನ್ನು ಒಳಗೊಂಡಿದೆ.

ವೈಯಕ್ತಿಕ ಸಾಲ

ಕೆನರಾ ಬ್ಯಾಂಕ್‌ನ ವೈಯಕ್ತಿಕ ಸಾಲ ಯೋಜನೆಯಲ್ಲಿ ಮನೆ ಸಾಲ, ವಾಹನ ಸಾಲ, ವ್ಯಾವಹಾರಿಕ ಸಾಲ, ಆಸ್ತಿ ಹಾಗೂ ಇತರೆ ವಸ್ತುಗಳ ಅಡವಿನ ಮೇಲೆ ಸಾಲವನ್ನು ನೀಡಲಾಗುತ್ತದೆ.

ಬಂಡವಾಳ ಹೂಡಿಕೆ

ಕೆನರಾ ಬ್ಯಾಂಕ್‌ನಲ್ಲಿ ಲಭ್ಯವಿರುವ ಬಂಡವಾಳ ಹೂಡಿಕೆಯು ಕೆನರಾ ಬ್ಯಾಂಕ್ ಫ್‌ಂಡ್ಸ್ ಮತ್ತು ಎಚ್.ಡಿ.ಎಫ್.ಸಿ.ಬ್ಯಾಂಕ್ ಫ್‌ಂಡ್ಸ್.

ವಿಮೆ: ಕೆನರಾ ಬ್ಯಾಂಕ್ ತನ್ನ ಗ್ರಾಹಕರಿಗೆ ಜೀವ ವಿಮೆ ಸೌಲಭ್ಯವನ್ನು ನೀಡುತ್ತಲಿದ್ದು ಕೆನರಾ ಬ್ಯಾಂಕ್ ಅವಿವಾ ಜೀವ ವಿಮಾ ಕಂಪೆನಿಯೊಂದಿಗೆ ಒಡಂಬಡಿಕೆ ಮಾಡಿಕೊಂಡಿದೆ.ಇನ್ನು ಇತರೆ ವಿಮಾ ಯೋಜನೆಗಳಿಗೆ ಜನರಲ್ ವಿಮಾ ಕಂಪೆನಿಯೊಂದೆಗೆ ಒಡಂಬಡಿಕೆ ಮಾಡಿಕೊಂಡಿದೆ.

ಕೆನರಾ ಬ್ಯಾಂಕ್ ಮಾಹಿತಿ ಕೇಂದ್ರ

ಕೆನರಾ ಬ್ಯಾಂಕ್‌ನ ಅಧಿಕಾರಿಗಳು ಗ್ರಾಹಕರಿಗೆ ಬಂಡವಾಳ ಹೂಡಿಕೆಯ ಬಗ್ಗೆ, ತೆರಿಗೆ ಉಳಿತಾಯ ಅಲ್ಲದೇ ಉತ್ತಮ ಬಂಡವಾಳ ಹೂಡಿಕೆಯ ವಲಯ ಅಲ್ಲದೇ ಉತ್ತಮ ಬಂಡವಾಳ ಹೂಡಿಕೆಯ ವಲಯಗಳ ಬಗೆಗೆ ವಿಶೇಷ ಮಾಹಿತಿಯನ್ನು ನೀಡಲಾಗುವುದು.

ಅಧೀನ ಸೇವೆಗಳು

ಕೆನರಾ ಬ್ಯಾಂಕ್ ತನ್ನ ಗ್ರಾಹಕರಿಗೆ ಸುರಕ್ಷಿತ ಖಜಾನೆಯನ್ನು ನೀಡುತ್ತದೆ, ನೇಮಕ ಮಾಡುವ ಅಧಿಕಾರ, ಮತ್ತು ಇತರೆ ವಿಶೇಷ ಸವಲತ್ತುಗಳನ್ನು ನೀಡುತ್ತದೆ.

ಆ್ಯಕ್ಸಿಸ್ ಬ್ಯಾಂಕ್‌ನ ಪರಿಚಯ

ಆ್ಯಕ್ಸಿಸ್ ಬ್ಯಾಂಕ್ 1993 ರಲ್ಲಿ ಸ್ಥಾಪನೆಗೊಂಡು ಭಾರತ ಸರಕಾರವು ಖಾಸಗಿ ಬ್ಯಾಂಕ್‌ಗಳಿಗೆ ಅವಕಾಶ ನೀಡಿದ ಮೇಲೆ 1994 ರ ನಂತರ ತನ್ನ ಕಾರ್ಯವನ್ನು ಶುರು ಮಾಡಿತು.ಆ್ಯಕ್ಸಿಸ್ ಬ್ಯಾಂಕ್ ಒಂದು ಅತೀ ದೊಡ್ಡ ವ್ಯಾವಹಾರಿಕ ಬ್ಯಾಂಕ್ ಮತ್ತು ಉತ್ತಮ ಆಡಳಿತ ಹೊಂದಿರುವ ಬ್ಯಾಂಕ್ ಎಂಬ ಬಿರುದನ್ನು ಹೊಂದಿದೆ.ಬ್ಯಾಂಕ್ ಶುರು ಮಾಡುವಾಗ 115 ಕೋಟಿ ಬಂಡವಾಳದೊಂದಿಗೆ ಪ್ರಾರಂಭಗೊಂಡಿದೆ.ಇತರೆ ಕಂಪನಿಗಳ ಶೇರುಗಳನ್ನು ಕ್ರೋಢೀಕರಿಸಿ ಇಷ್ಟು ಮೊತ್ತವನ್ನು ಕಲೆಹಾಕಿದೆ.

ಆ್ಯಕ್ಸಿಸ್ ಬ್ಯಾಂಕ್‌ನ ಮುಖ್ಯವಾಗಿ ಚಿಲ್ಲರೆ ಮತ್ತು ಕೈಗಾರಿಕೆಗಳೊಂದಿಗೆ ವ್ಯಾವಹಾರಿಕ ಸಂಬಂಧವನ್ನು ಹೊಂದಿದೆ.ಅಲ್ಲದೇ ಸುಧಾರಿತ ಯೋಜನೆಗಳಿಂದಲಾಗಿ ಅಂತರಾಷ್ಟ್ರೀಯ ಮಟ್ಟದಲ್ಲಿ ಕೈಗಾರಿಕೆಗಳಿಗೆ ಸಹಾಯವನ್ನು ಮಾಡುತ್ತಲಿದೆ.

ಬ್ಯಾಂಕ್ ಸೇವೆಗಳು

- ವೈಯಕ್ತಿಕ ಬ್ಯಾಂಕಿಂಗ್
- ಕೈಗಾರಿಕಾ ಬ್ಯಾಂಕಿಂಗ್
- ಅನಿವಾಸಿ ಭಾರತೀಯ ಬ್ಯಾಂಕಿಂಗ್
- ಆದ್ಯತೆಯ ಬ್ಯಾಂಕಿಂಗ್
- ಕ್ರೆಡಿಟ್ ಕಾರ್ಡ್
- ಡೆಬಿಟ್ ಕಾರ್ಡ್

ಆ್ಯಕ್ಸಿಸ್ ಬ್ಯಾಂಕ್ ಲಿಮಿಟೆಡ್ ಭಾರತ ದೇಶದ ಮೂರನೇ ಅತೀ ದೊಡ್ಡ ಖಾಸಗಿ ಬ್ಯಾಂಕ್ ಆಗಿದೆ.ಈ ಬ್ಯಾಂಕ್‌ನ ಶೇರ್ ಕೊಳ್ಳುವವರು ಕೇವಲ ಭಾರತದವರಲ್ಲದೇ ವಿದೇಶೀಯರೂ ಶೇರ್ ಅನ್ನು ಕೊಂಡುಕೊಳ್ಳುತ್ತಾರೆ.ಡಿಸೆಂಬರ್ 31, 21013 ರಲ್ಲಿ 43% ವಿದೇಶೀಯ ಬಂಡವಾಳ ಹೀಡಿಕೆಯಾಗಿದೆ.34% ಶೇರ್ ಅನ್ನು ಭಾರತ ಸರಕಾರವು ಕೊಂಡುಕೊಂಡಿದ್ದು ಅದನ್ನು ತಾನೇ ನೋಡಿಕೊಳ್ಳುತ್ತಲಿದೆ.ಇನ್ನು ಉಳಿದ 23% ಶೇರನ್ನು ಇತರ ಕೈಗಾರಿಕಾ ಸಂಸ್ಥೆಗಳು, ವ್ಯಾವಹಾರಿಕ ಸಂಸ್ಥೆಗಳು ಮತ್ತು ವೈಯಕ್ತಿಕ ಬಂಡವಾಳಶಾಹಿಗಳು ಹೊಂದಿರುತ್ತಾರೆ.

ಆ್ಯಕ್ಸಿಸ್ ಬ್ಯಾಂಕ್ ತನ್ನ ಸೇವೆಯು ಗ್ರಾಹಕ ಸ್ನೇಹಿಯಾಗಿದ್ದು, ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ಹಾಗೂ ಚಿಕ್ಕ ಸಂಸ್ಥೆಗಳಿಗೂ, ಕೃಷಿಗಾಗಿಯೂ ಮತ್ತು ಚಿಲ್ಲರೆ ವ್ಯಾಪಾರಕ್ಕೂ ಸೇವೆಯನ್ನು ಒದಗಿಸುತ್ತದೆ.

ಭಾರತದಲ್ಲಿ ವ್ಯವಹಾರ

ಎಪ್ರಿಲ್ 22, 2016 ರ ಪ್ರಕಾರ ಆ್ಯಕ್ಸಿಸ್ ಬ್ಯಾಂಕ್ ಭಾರತದಲ್ಲಿ ಒಟ್ಟು 3062 ಶಾಖೆಗಳನ್ನು ಹೊಂದಿದ್ದು ಇನ್ನೂ ಹೆಚ್ಚಿನ ಶಾಖೆಗಳನ್ನು ನಿರ್ಮಿಸುವುದರಲ್ಲಿದೆ.12922 ಎ.ಟಿ.ಎಂ.ಕೇಂದ್ರಗಳನ್ನು ಇದು ಹೊಂದಿದೆ.ಆ್ಯಕ್ಸಿಸ್ ಬ್ಯಾಂಕ್‌ನ ಎ.ಟಿ.ಎಂ.ಖಾಸಗೀ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅತೀ ಹೆಚ್ಚು ಎ.ಟಿ.ಎಂ. ಹೊಂದಿರುವ ಏಕೈಕ ಬ್ಯಾಂಕ್ ಇದಾಗಿದೆ.

ಅಂತರಾಷ್ಟ್ರೀಯ ವ್ಯವಹಾರ

ಆ್ಯಕ್ಸಿಸ್ ಬ್ಯಾಂಕ್ ಕೇವಲ ಭಾರತದಲ್ಲಿ ಮಾತ್ರವಲ್ಲದೇ ಅಂತರಾಷ್ಟ್ರೀಯ ಮಟ್ಟದಲ್ಲಿಯೂ ವ್ಯವಹಾರ ನಡೆಸುತ್ತಿದೆ.ಸಿಂಗಾಪುರ, ಹೊಂಗಕಾಂಗ್, ದುಬಾಯಿ, ಶಂಗ್ಯಾ, ಕೊಲೊಂಬೋಗಳಲ್ಲಿ ತನ್ನ ಶಾಖೆಗಳನ್ನು ಹೊಂದಿದೆ.

ಸೇವೆಗಳು

ಆ್ಯಕ್ಸಿಸ್ ಬ್ಯಾಂಕ್ ಒಟ್ಟು ನಾಲ್ಕು ಭಾಗಗಳಾಗಿ ಸೇವೆಯನ್ನು ನೀಡುತ್ತಿದೆ.

1. ಖಜಾನೆ ವ್ಯವಹಾರ
2. ಚಿಲ್ಲರೆ ವ್ಯವಹಾರ
3. ಕೈಗಾರಿಕಾ ವ್ಯವಹಾರ
4. ಸಗಟು ವ್ಯವಹಾರ

1. ಖಜಾನೆ ವ್ಯವಹಾರ

ಬ್ಯಾಂಕ್‌ನ ಖಜಾನೆ ವ್ಯವಹಾರದಲ್ಲಿ ಸಾಲ ಸೌಲಭ್ಯಗಳಿಗಾಗಿ ಪಡೆದ ಅಡವಿನ ರಕ್ಷಣೆ ಮಾಡುವಂತಹದ್ದು, ಉದ್ದಿಮೆಗಳ ಬಂಡವಾಳವನ್ನು ಜೋಪಾನ ಮಾಡುವಂತಹದ್ದು, ಇತರೆ ವ್ಯವಹಾರ ಉತ್ಪತ್ತಿಗಳನ್ನು ಕೂಡಿಟ್ಟುಕೊಳ್ಳುವಂತಹ ಕೆಲಸವನ್ನು ಅಂತರಾಷ್ಟ್ರೀಯ ವರ್ಗಾವಣೆ ಹಾಗೂ ಇನ್ನಿತರ ವ್ಯವಹಾರಗಳನ್ನು ಗ್ರಾಹಕರಿಗಾಗಿ, ಬಂಡವಾಳ ಹೂಡುವವರಿಗಾಗಿ ನಡೆಸಲಾಗುತ್ತದೆ.

2. ಚಿಲ್ಲರೆ ವ್ಯವಹಾರ

ಬ್ಯಾಂಕ್ ಕೇವಲ ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ಮಾತ್ರವಲ್ಲದೆ ಚಿಕ್ಕ ಪುಟ್ಟ ವ್ಯಾಪಾರಸ್ತರಿಗೂ ಮತ್ತು ಸಾಮಾನ್ಯರಿಗೂ ತನ್ನ ಸೇವೆಯನ್ನು ನೀಡುತ್ತಾ ಬಂದಿದೆ.ಎ.ಟಿ.ಎಂ. ವ್ಯವಸ್ಥೆ, ಉಳಿತಾಯ ಖಾತೆ, ಠೇವಣಿ ಖಾತೆ, ಹೀಗೆ ಅನೇಕ ಸೇವೆಗಳನ್ನು ಆ್ಯಕ್ಸಿಸ್ ಬ್ಯಾಂಕ್ ಒದಗಿಸುತ್ತದೆ.

3. ಕೈಗಾರಿಕಾ / ಸಗಟು ವ್ಯವಹಾರ

ಆ್ಯಕ್ಸಿಸ್ ಬ್ಯಾಂಕ್ ತನ್ನ ವ್ಯಾವಹಾರಿಕ ಸೇವೆಯಲ್ಲಿ ಕೈಗಾರಿಕೆ ಮತ್ತು ಸಗಟು ವ್ಯಾಪಾರಸ್ತರಿಗೆ ಅನೇಕ ಯೋಜನೆಗಳಿಂದ ಹೆಚ್ಚಿನ ಲಾಭವನ್ನು ತಂದುಕೊಡುತ್ತಿದೆ.ಇನ್ನು ಸಲಹೆಗಲನ್ನು ನೀಡುವುದು ಸ್ಥಳಾವಕಾಶದ ವ್ಯವಸ್ಥೆ ಹೀಗೆ ಅನೇಕ ಸೇವೆಗಳನ್ನು ನೀಡುತ್ತದೆ.

ಅನಿವಾಸಿ ಭಾರತೀಯ ಸೇವೆ

ಯೋಜನೆ ಮತ್ತು ಸೇವೆಗಳು ಹಾಗೂ ಬಂಡವಾಳ ಹೂಡಿಕೆಗಳನ್ನು ಕೇವಲ ಅನಿವಾಸಿ ಭಾರತೀಯರಿಗಾಗಿಯೇ ಪ್ರತ್ಯೇಕ ಯೋಜನೆಗಳಿವೆ.

ವ್ಯಾವಹಾರಿಕ ಬ್ಯಾಂಕಿಂಗ್ ವ್ಯವಸ್ಥೆ

ಆ್ಯಕ್ಸಿಸ್ ಬ್ಯಾಂಕ್ ತನ್ನ ಅಧೀನ 214 ಶಾಖೆಗಳಿಂದ ಮತ್ತು 137 ಪ್ರದೇಶಗಳಿಂದ ಆದಾಯ ಮತ್ತು ಆದಾಯ ತೆರಿಗೆಗಳನ್ನು ಸಂಗ್ರಹಿಸುತ್ತದೆ.

ಸಾಮಾಜಿಕ ಜವಾಬ್ದಾರಿಗಳು

ಆ್ಯಕ್ಸಿಸ್ ಬ್ಯಾಂಕ್ ಪ್ರತಿಷ್ಠಾನ

ಆ್ಯಕ್ಸಿಸ್ ಬ್ಯಾಂಕ್ 2006 ರಲ್ಲಿ ತನ್ನ ಸಾಮಾಜಿಕ ಕಾರ್ಯಗಳನ್ನು ನಡೆಸಲೆಂದೇ ಒಂದು ಪ್ರತಿಷ್ಠಾನವನ್ನು ಪ್ರಾರಂಭಿಸಿ ಅದರ ಮೂಲಕ ವಿದ್ಯಾರ್ಥಿಗಳಿಗೆ ಸಹಾಯ ಹಸ್ತವನ್ನು ನೀಡುತ್ತಲಿದೆ.2011–12 ನೇ ಸಾಲಿನಲ್ಲಿ ಪ್ರತಿಷ್ಠಾನವು 36 ಸಾಮಾಜಿಕ ಹೋಆಟಗಳೊಂದಿಗೆ ಸೇರಿ 13 ರಾಜ್ಯಗಳ 1 ಲಕ್ಷಕ್ಕೂ ಅಧಿಕ ಅಂಗವಿಕಲ ಮತ್ತು ವಿಶೇಷ ಮಕ್ಕಳಿಗೆ ಸಹಾಯ ಮಾಡಿದೆ.

ಹಸಿರು ಬ್ಯಾಂಕಿಂಗ್

ಮರು ಬಳಕೆ ವಸ್ತುಗಳನ್ನು ಉಪಯೋಗಿಸುವುದರೊಂದಿಗೆ ಹಸಿರು ಬ್ಯಾಂಕಿಂಗ್ ಎಂಬ ಒಂದು ಪರಸಿರ ಸ್ನೇಹಿ ಯೋಜನೆಯನ್ನು ಆ್ಯಕ್ಸಿಸ್ ಬ್ಯಾಂಕ್ ಪ್ರಾರಂಭಿಸಿದೆ ಮತ್ತು 21572 ಕೆ.ಜೊ.ರದ್ಧಿಯನ್ನು ಮರು ಬಳಕೆ ಮಾಡಿದೆ. ಅಲ್ಲದೆ ಮುಂಬೈನಲ್ಲಿ ಪರಿಸರ ಸ್ನೇಹಿ ಕಟ್ಟಡವನ್ನು ಕೂಡ ಆ್ಯಕ್ಸಿಸ್ ಬ್ಯಾಂಕ್ ಹೊಂದಿದೆ.

ಬ್ಯಾಂಕ್ ಸಾಲ

ಪೀಠಿಕೆ

ಕೈಗಾರಿಕೆಗಳಿಗೆ, ವ್ಯವಹಾರಸ್ಥರಿಗೆ, ಮನೆ ಕಟ್ಟುವವರಿಗೆ, ವಾಹನ ಖರೀದಿಸುವವರಿಗೆ, ಉನ್ನತ ಶಿಕ್ಷಣ ಪಡೆಯುವಂತಹವರಿಗೆ ಬೇಕಾದ ಹಣವನ್ನು ಬ್ಯಾಂಕ್ ನೀಡುವುದಕ್ಕೆ ಬ್ಯಾಂಕ್ ಸಾಲ ಎನ್ನುತ್ತಾರೆ.ಬ್ಯಾಂಕ್‌ನ ಎಲ್ಲಾ ತರಹದ ಸೇವೆ ಅಥವಾ ಕಾರ್ಯಗಳಲ್ಲಿಯೂ ಪ್ರಮುಖ ಸೇವೆ ಸಾಲ ನೀಡುವುದಾಗಿದೆ.

ಹೀಗೆ ಇತರೆ ವ್ಯವಹಾರದವರು, ಕೈಗಾರಿಕೆಯವರು ಲಾಭಾಂಶ ದೊರಕುವ ಉದ್ದೇಶದಿಂದ ತಮ್ಮ ಕೆಲಸ ನಡೆಸುವರೋ ಅದೇ ರೀತಿ ಬ್ಯಾಂಕ್‌ನವರು ಸಾಲ ನೀಡಿ ಅದರಿಂದ ಸಿಗುವ ಬಡ್ಡಿಯಿಂದ ಲಾಭವನ್ನು ಗಳಿಸುವ ಉದ್ದೇಶದಿಂದಲೇ ಸಾಲವನ್ನು ಕೊಡುತ್ತಾರೆ.

ಸಾಲದಲ್ಲಿ ಎರಡು ವ್ಯಕ್ತಿಗಳು ಬರುತ್ತಾರೆ.ಒಬ್ಬರು ಸಾಲವನ್ನು ನೀಡುವವರು, ಮತ್ತೊಬ್ಬರು ಸಾಲವನ್ನು ಪಡೆಯುವವರು.ಇಲ್ಲಿ ಮುಖ್ಯವಾಗಿ ಇಬ್ಬರ ಒಪ್ಪಿಗೆಯೂ ಬೇಕಾಗುತ್ತದೆ.ಸಾಲ ಕೊಡುವವನದ್ದು ಮತ್ತು ಪಡೆಯುವವರ ಇಬ್ಬರ ಒಪ್ಪಿಗೆ ಇದ್ದರೆ ಮಾತ್ರ ಸಾಲ ಮಂಜೂರಾಗುತ್ತದೆ.ಯಾರು ಸಾಲ ಪಡೆಯುವರೋ ಅವರು ಹಣವನ್ನು ಹಿಂತಿರುಗಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.ಸಾಲ ಮರುಪಾವತಿಸಲು ನೀಡಿದ ಸಮಯದೊಳಗೆ, ಸ್ವಲ್ಪ ಸ್ವಲ್ಪ ಹಣ ಪಾವತಿಸುತ್ತಾ ಮತ್ತು ಬಡ್ಡಿಯನ್ನು ನೀಡುತ್ತಾ ಸಾಲವನ್ನು ಹಿಂತಿರುಗಿಸಬೇಕು.

ಬ್ಯಾಂಕ್ ಸಾಲದ ಕೆಲವು ನಿಯಮಗಳು

ಬ್ಯಾಂಕ್ ಸಾಲದ ಮುಖ್ಯವಾದ ನಿಯಮಗಳೆಂದರೆ –

1. ಸುರಕ್ಷತೆ, 2. ದ್ರವೀಕರಣ, 3. ಲಾಭದಾಯಕ, ಹೀಗೆ ಈ ಮೂರು ವಿಚಾರಗಳ ಬಗೆಗೆ ಹೆಚ್ಚಿನ ಗಮನ ಹರಿಸುತ್ತದೆ.

1. ಸುರಕ್ಷತೆ

ಬ್ಯಾಂಕ್ ತಾನು ನೀಡುವ ಸಾಲದ ಬಗೆಗೆ ಹೆಚ್ಚಿನ ಸುರಕ್ಷತೆಯ ಕ್ರಮಗಳನ್ನು ಕೈಗೊಂಡು ನಂತರ ಸಾಲವನ್ನು ನೀಡುತ್ತದೆ.

2. ದ್ರವೀಕರಣ

ಬ್ಯಾಂಕ್ ತನ್ನಲ್ಲಿ ಒಟ್ಟಾದ ಹಣವನ್ನು ಹಾಗೇ ಇಟ್ಟು ಕೊಳ್ಳದೆ ಇತರರಿಗೆ ಸಾಲದ ರೂಪದಲ್ಲಿ ನೀಡುವುದರಿಂದ ಹಣ ಚಲಾವಣೆಗೊಳ್ಳುವುದರೊಂದಿಗೆ ಬ್ಯಾಂಕಿಗೆ ಹೆಚ್ಚಿನ ವ್ಯವಹಾರಿಕ ಒತ್ತಡವನ್ನು ತಡೆದುಕೊಳ್ಳಲು ಸಾಧ್ಯವಾಗುತ್ತದೆ.

3. ಲಾಭದಾಯಕ

ಬ್ಯಾಂಕ್‌ನ ಮುಖ್ಯ ಆದಾಯವೆಂದರೆ ಬಡ್ಡಿಯನ್ನು ಪಡೆಯುವದರಿಂದಲಾಗಿದೆ ಮತ್ತು ಸೇವಾ ಶುಲ್ಕವನ್ನು ಪಡೆಯುವುದರಿಂದ ಬ್ಯಾಂಕ್ ನೀಡುವ ಸಾಲಕ್ಕೆ ಬಡ್ಡಿಯನ್ನು ಹೆಚ್ಚು ಮಾಡಿ ತಾನು ಪಡೆಯುವ ಠೇವಣಿಗಳಿಗೆ ಬಡ್ಡಿ ಕಡಿಮೆ ಇಟ್ಟು ಅಲ್ಲಿ ಆದ ಲಾಭದಿಂದ ಇತರೆ ಖರ್ಚು, ಸಂಬಳ ಹೀಗೆ ಅನೇಕ ಖರ್ಚುಗಳನ್ನು ನಿಭಾಯಿಸುತ್ತದೆ.ಆದುದರಿಂದ ಬ್ಯಾಂಕ್‌ಗೆ ಲಾಭಾಂಶ ಬೇಕೇ ಬೇಕಾಗುತ್ತದೆ.

4. ***ಸಾಲ ಪಡೆಯಲು ಕಾರಣ***

ಬ್ಯಾಂಕ್ ತನ್ನ ಬಳಿ ಬಂದ ಗ್ರಾಹಕರಲ್ಲಿ ಯಾವ ಉದ್ದೇಶಕ್ಕಾಗಿ ಸಾಲ ಪಡೆಯುತ್ತಿದ್ದಾರೆ ಎಂಬ ಬಗ್ಗೆ ಸ್ಪಷ್ಟವಾದ ಮಾಹಿತಿಯನ್ನು ಕಲೆಹಾಕಿ ನಂತರ ಸಾಲ ನೀಡಬೇಕೋ ಬೇಡವೋ ಎಂಬ ನಿರ್ಧಾರ ಕೈಗೊಳ್ಳುತ್ತದೆ.

5. ***ಭದ್ರತೆ ಮತ್ತು ಮರುಪಾವತಿ***

ಬ್ಯಾಂಕ್ ತಾನು ಕೊಡುವ ಸಾಲಕ್ಕೆ ಗ್ರಾಹಕರಿಂದ ಭದ್ರತೆಯನ್ನು ಪಡೆಯುತ್ತದೆ.ಕಟ್ಟಡಗಳ ಪತ್ರ, ಆಸ್ತಿ ಮತ್ತು ವಸ್ತುಗಳು, ಚಿನ್ನ ಇತ್ಯಾದಿ ವಸ್ತುಗಳನ್ನು ಭದ್ರತೆಯಾಗಿ ಇರಿಸಿಕೊಂಡು ಸಾಲವನ್ನು ಕೊಡುತ್ತದೆ.

ಬ್ಯಾಂಕ್ ತನ್ನ ಗ್ರಾಹಕ ಪಡೆಯುವ ಸಾಲವನ್ನೂ ಮರುಪಾವತಿಸುವ ಶಕ್ತಿ ಗ್ರಾಹಕರೊಂದಿಗೆ ಇದೆಯೋ ಇಲ್ಲವೋ ಎನ್ನುವುದನ್ನು ಬ್ಯಾಂಕ್ ಸೂಕ್ಷ್ಮವಾಗಿ ಗಮನಿಸುತ್ತದೆ.

ಬ್ಯಾಂಕ್ ಸಾಲದ ವಿಧಗಳು

1. ***ಸುರಕ್ಷಿತ ಸಾಲ***

ಸುರಕ್ಷಿತ ಸಾಲ ಎಂದರೆ ಬ್ಯಾಂಕ್ ತಾನು ಕೊಡುವ ಸಾಲಕ್ಕೆ ಭದ್ರತೆಯನ್ನು ಪಡೆದು ಸಾಲವನ್ನು ನೀಡುವುದಾಗಿದೆ.ಇದರಿಂದಲಾಗಿ ಬ್ಯಾಂಕ್ ನೀಡಿದ ಸಾಲವು ಒಂದು ವೇಳೆ ಮರುಪಾವತಿ ಆಗದಿದ್ದಲ್ಲಿ ತನ್ನಲ್ಲಿರುವ ಭದ್ರತೆಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಅಧಿಕಾರ ಬ್ಯಾಂಕ್‌ಗೆ ಇರುತ್ತದೆ.

2. ***ಅಸುರಕ್ಷಿತ ಸಾಲ***

ಅಸುರಕ್ಷಿತ ಸಾಲ ಎಂದರೆ ಬ್ಯಾಂಕ್ ತಾನು ನೀಡುವ ಸಾಲಕ್ಕೆ ಯಾವುದೇ ಭದ್ರತೆಯನ್ನು ಪಡೆದಿರುವುದಿಲ್ಲ. ಉದಾ: ಕ್ರೆಡಿಟ್ ಕಾರ್ಡ್ ಬಳಸಿ ಪಡೆಯುವ ಸವಲತ್ತುಗಳು, ವೈಯಕ್ತಿಕ ಸಾಲ, ಮುಂಗಡವಾಗಿ ಪಡೆಯುವ ಹಣ ಇತ್ಯಾದಿ.

ಕೆನರಾ ಬ್ಯಾಂಕ್‌ನ ಶಿಕ್ಷಣ ಸಾಲ ಯೋಜನೆ

ವಿದ್ಯಾಸಾಗರ ಶಿಕ್ಷಣ ಸಾಲ ಯೋಜನೆ

ಉದ್ದೇಶ

ಕೆನರಾ ಬ್ಯಾಂಕ್‌ನ ವಿದ್ಯಾಸಾಗರ ಶಿಕ್ಷಣ ಸಾಲ ಯೋಜನೆಯ ಮುಖ್ಯ ಉದ್ದೇಶ ವಿದ್ಯಾರ್ಥಿಗಳ ಉನ್ನತ ಶಿಕ್ಷಣ ಪಡೆಯುವ ಕನಸನ್ನು ನನಸಾಗಿಸುವುದಾಗಿದೆ. ಬಡವರು ಮತ್ತು ಶಿಕ್ಷಣ ಪಡೆಯಲು ಹಣಕಾಸಿನ ಸಮಸ್ಯೆಯನ್ನು ಅನುಭವಿಸುವವರಿಗೆ ಕಡಿಮೆ ಬಡ್ಡಿದರ ಮತ್ತು ಕಡಿಮೆ ಖರ್ಚಿನಲ್ಲಿ ಸಾಲ ಮಂಜೂರು

ಮಾಡಿ ಅವರ ಉನ್ನತ ಶಿಕ್ಷಣ ಕನಸನ್ನು ಭಾರತದಲ್ಲಿ ಅಥವಾ ಹೊರ ದೇಶದಲ್ಲಿ ಓದಿ ತಮ್ಮ ಜೀವನದಲ್ಲಿ ಉನ್ನತ ಸ್ಥಾನಮಾನ ಪಡೆಯುವಂತಾಗಲಿ ಎಂಬ ಆಶಯದೊಂದಿಗೆ ಈ ಸಾಲ ಯೋಜನೆಯನ್ನು ಪ್ರಾರಂಭಿಸಲಾಗಿದೆ.

- ಬಡವರು ಮತ್ತು ಮಾಧ್ಯಮ ವರ್ಗದವರಿಗೆ ಪ್ರಾಥಮಿಕ ಶಿಕ್ಷಣ ಪಡೆಯಲು ಸಹಕರಿಸುವುದು.
- ಪ್ರತಿಭಾವಂತ ಶಿಕ್ಷಣ ಪಡೆಯಲು ಸಹಕರಿಸುವುದು.
- ಉತ್ತೀರ್ಣರಾದ ವಿದ್ಯಾರ್ಥಿಗೆ ಮುಂದಿನ ಶಿಕ್ಷಣ ಪಡೆಯಲು ಪ್ರವೇಶ ಪರೀಕ್ಷೆ ಪಾಸಾಗುವುದರ ಮುಖೇನ ಅಂಕದ ಹೊರತಾಗಿ ಆ ವಿದ್ಯಾರ್ಥಿಯ ಪೋಷಕರ ಅಥವಾ ಹೆತ್ತವರ ಆದಾಯದ ಮೇರೆಗೂ ಸಹ ಸಾಲವನ್ನು ಈ ಯೋಜನೆಯಿಂದ ಪಡೆಯಬಹುದಾಗಿದೆ.

ಸಾಲ ಪಡೆಯಲು ಅರ್ಹತೆ

ಕೆನರಾ ಬ್ಯಾಂಕಿನಲ್ಲಿ ಶಿಕ್ಷಣ ಸಾಲ ಪಡೆಯಲು ವಿದ್ಯಾರ್ಥಿಗೆ ಈ ಕೆಳಗಿನ ಅರ್ಹತೆಯು ಬೇಕು.

- ಅವನು / ಅವಳು ಭಾರತೀಯ ನಾಗರೀಕರಾಗಿರಬೇಕು.
- ವಿದ್ಯಾರ್ಥಿಯು ಕಿರಿಯ ವಯಸ್ಸಿನವರಾದಲ್ಲಿ ಪೋಷಕರನ್ನು ಪ್ರತಿನಿಧಿಯಾಗಿ ಸಾಲ ಮಂಜೂರು ಮಾಡಲಾಗುವುದು.
- ಪ್ರಾಪ್ತ ವಯಸ್ಕ ವಿದ್ಯಾರ್ಥಿಯನ್ನು ಹೆತ್ತವರೊಂದಿಗೆ ಕೂಡಿಸಿಕೊಂಡು ಸಾಲ ಮಂಜೂರು ಮಾಡಲಾಗುವುದು.
- ವಿದ್ಯಾರ್ಥಿಯು ಮುಂದಿನ ವಿದ್ಯಾಭ್ಯಾಸಕ್ಕಾಗಿ ಭಾರತದಲ್ಲಿ ಅಥವಾ ವಿದೇಶದಲ್ಲಿ ಪ್ರವೇಶ ಪರೀಕ್ಷೆ ಪಾಸಾಗಿದ್ದಲ್ಲಿ ಅಂತಹ ವಿದ್ಯಾರ್ಥಿಯು ಶಿಕ್ಷಣ ಸಾಲ ಪಡೆಯಲು ಅರ್ಹನಾಗಿರುತ್ತಾನೆ.
- ವಿದೇಶೀ ಶಿಕ್ಷಣ ಸಂಸ್ಥೆಯಲ್ಲಿ ಪ್ರವೇಶ ಪಡೆದರೂ ಸಹ ಆ ವಿದ್ಯಾರ್ಥಿ ಅರ್ಹನಾಗಿರುತ್ತಾನೆ.
- ಶಿಕ್ಷಣ ಸಾಲ ಪಡೆಯಲು ವೈದ್ಯ ಪದವಿ ವಿದ್ಯಾರ್ಥಿ ಕೂಡ ಅರ್ಹನಾಗಿರುತ್ತಾನೆ. ಆದರೆ ಕೆಲವು ಷರತ್ತುಗಳಲ್ಲಿ ಆ ವಿದ್ಯಾರ್ಥಿ ಅರ್ಹನಾಗಬೇಕಾಗುತ್ತದೆ.
- ಕೆನರಾ ಬ್ಯಾಂಕ್ ಉದ್ಯೋಗಿಯು ಕೂಡ ಭಾರತದಲ್ಲಿ ಮತ್ತು ವಿದೇಶದಲ್ಲಿ ತನ್ನ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಲು ಈ ಯೋಜನೆಯ ಲಾಭ ಪಡೆಯಬಹುದು.

ಅರ್ಹ ದೇಶೀಯ ಶಿಕ್ಷಣ ಸಂಸ್ಥೆಗಳು

ಈ ಕೆಳಗಿನ ಕೋರ್ಸ್‌ಗಳನ್ನು ಭಾರತದಲ್ಲಿ ಈ ಸಾಲ ಯೋಜನೆಯ ಮುಖೇನ ಪಡೆಯ ಬಹುದಾಗಿದೆ. ಅವುಗಳೆಂದರೆ –

- ಪದವಿ ಶಿಕ್ಷಣ: ಬಿ.ಎ., ಬಿ.ಕಾಂ., ಬಿ.ಎಸ್ಸಿ. ಇತ್ಯಾದಿ
- ಸ್ನಾತಕೋತ್ತರ ಶಿಕ್ಷಣ: ಸ್ನಾತಕೋತ್ತರ ಪದವಿ ಮತ್ತು ಪಿ.ಎಚ್.ಡಿ.
- ವೃತ್ತಿ ಶಿಕ್ಷಣ: ತಾಂತ್ರಿಕ ಶಿಕ್ಷಣ, ವೈದ್ಯಕೀಯ, ಕೃಷಿ, ಪಶು ವೈದ್ಯಕೀಯ, ನ್ಯಾಯವಾದಿ, ದಂತ ವೈದ್ಯ, ಕಂಪ್ಯೂಟರ್, ಆಡಳಿತ ನಿರ್ವಹಣಾ ಶಿಕ್ಷಣ, ಇತ್ಯಾದಿ.
- ಕಂಪ್ಯೂಟರ್ ಶಿಕ್ಷಣಗಳು
- ವಿಧಿಬದ್ಧವಾದ ಶಿಕ್ಷಣ / ಡಿಪ್ಲೊಮಾ, ಮಾನ್ಯತೆ ಪಡೆದ ವಿಮಾನ ಸಂಬಂಧಿ ಕೋರ್ಸ್‌ಗಳು, ಹಡಗಿಗೆ ಸಂಬಂಧಪಟ್ಟ ಕೋರ್ಸ್‌ಗಳು ಶಿಕ್ಷಣ ಸಾಲ ಯೋಜನೆಗೆ ಅರ್ಹವಾಗಿದೆ.
- ವಿದೇಶೀ ವಿಶ್ವ ವಿದ್ಯಾಲಯದ ಭಾರತದಲ್ಲಿ ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ನಡೆಸುವ ವಿದ್ಯಾರ್ಥಿಯು ಅರ್ಹನಾಗಿರುತ್ತಾನೆ.
- ಅರ್ಹತೆ ಪಡೆದ ಸಂಧ್ಯಾ ಕಾಲೇಜುಗಳು.
- ಆಕಾಶಯಾನ, ಪ್ರವಾಸೀ ಶಿಕ್ಷಣ, ಆರೋಗ್ಯ ಸಂಬಂಧಿ ಶಿಕ್ಷಣ ಸಂಸ್ಥೆಗಳು, ಜೈವ ತಂತ್ರಜ್ಞಾನ, ತೈಲ ಶೋಧಿಸುವಿಕೆಯ ಶಿಕ್ಷಣ, ಅಧ್ಯಾಪಕ ತರಬೇತಿ ಶಿಕ್ಷಣಗಳು ಅರ್ಹವಾಗಿದೆ.

ವಿದೇಶೀ ಶಿಕ್ಷಣ

- ಪದವಿ ಶಿಕ್ಷಣ: ವೃತ್ತಿಗೆ ಸಂಬಂಧಿಸಿದ ಅಥವಾ ತಂತ್ರಜ್ಞಾನ ಶಿಕ್ಷಣ
- ಪ್ರಖ್ಯಾತ ವಿಶ್ವ ವಿದ್ಯಾಲಯಗಳು ಪ್ರಸ್ತಾಪಿಸುವ ಶಿಕ್ಷಣ
- ಸ್ನಾತಕೋತ್ತರ ಶಿಕ್ಷಣ: ಎಂ.ಬಿ.ಎ., ಎಂ.ಸಿ.ಎ., ಎಂ.ಎಸ್.ಸಿ.
- ಶಿಕ್ಷಣ ನಡೆಸುತ್ತಿರುವ ಸಿ.ಐ.ಎಂ.ಎ. ಲಂಡನ್, ಸ್.ಪಿ.ಎ. ಯು.ಎಸ್.ಎ. ಇತ್ಯಾದಿ
- ವಿದೇಶೀ ವಿಶ್ವ ವಿದ್ಯಾಲಯಗಳಲ್ಲಿ ವೈದ್ಯಕೀಯ ಶಿಕ್ಷಣ

ಸಾಲ ನೀಡಲು ಶುಲ್ಕದ ಮಾನ್ಯತೆ

- ಶಾಲಾ ಕಾಲೇಜಿನ ಶುಲ್ಕ ಮತ್ತು ವಸತಿ ಶುಲ್ಕ

- ಪರೀಕ್ಷಾ / ಗ್ರಂಥಾಲಯ / ಪ್ರಯೋಗಾಲಯ ಶುಲ್ಕ
- ಸಮವಸ್ತ್ರ / ಪುಸ್ತಕ / ಲೇಖನ ಸಾಮಗ್ರಿ ಇತ್ಯಾದಿ ಖರೀದಿ ಶುಲ್ಕ
- ಸಂಚಾರದ ಖರ್ಚು ವಿದೇಶದಲ್ಲಿ ಅಧ್ಯಯನ ಮಾಡಲು
- ಅಗತ್ಯವಿದ್ದಲ್ಲಿ ಕಂಪ್ಯೂಟರ್ ಖರೀದಿಸಿದ್ದಲ್ಲಿ ಅದರ ಖರ್ಚು
- ಇತರೆ ಖರ್ಚು ವೆಚ್ಚಗಳು ಅಂದರೆ, ಶೈಕ್ಷಣಿಕ ಪ್ರವಾಸ ಇತ್ಯಾದಿಗಳನ್ನು

ಭದ್ರತೆ

ಕೆನರಾ ಬ್ಯಾಂಕ್‌ನಲ್ಲಿ ಶಿಕ್ಷಣ ಸಾಲ ಪಡೆಯಲು ಈ ಕೆಳಗಿನ ಭದ್ರತೆಯನ್ನು ಮಾನ್ಯ ಮಾಡಲಾಗುವುದು.

❖ **ರೂ. 4 ಲಕ್ಷದ ವರೆಗೆ**

- ಭದ್ರತೆ ಬೇಡ
- ವಿದ್ಯಾರ್ಥಿಯ ಭವಿಷ್ಯದ ಆದಾಯವನ್ನು ಹಂಚಿಕೆಯಾಗಬೇಕು.
- ಶಿಕ್ಷಣ ಸಾಲವನ್ನು ವಿದ್ಯಾರ್ಥಿಗೆ ತನ್ನ ಹೆತ್ತವರೊಂದಿಗೆ ಜೋಡಣೆ ಮಾಡಲಾಗಿರುತ್ತದೆ.

❖ **ರೂ. 7.50 ಲಕ್ಷಕ್ಕಿಂತ ಹೆಚ್ಚಾಗಿದ್ದಲ್ಲಿ**

- ವಿದ್ಯಾರ್ಥಿಯ ಭವಿಷ್ಯದ ಆದಾಯವನ್ನು ಹಂಚಿಕೆ ಮಾಡಲಾಗುತ್ತದೆ.
- ಶಿಕ್ಷಣ ಸಾಲವನ್ನು ವಿದ್ಯಾರ್ಥಿಗೆ ತನ್ನ ಹೆತ್ತವರೊಂದಿಗೆ ಜೋಡಣೆ ಮಾಡಲಾಗಿರುತ್ತದೆ.
- ಶಿಕ್ಷಣ ಸಾಲ ಪತ್ರದಲ್ಲಿ ಹೆತ್ತವರ ಮತ್ತು ವಿದ್ಯಾರ್ಥಿಗಳನ್ನು ಜೋಡಿಸಲಾಗುತ್ತದೆ. ಒಂದು ವೇಳೆ ಮದುವೆ ಆಗಿದ್ದರೆ ಹುಡುಗನ ತಂದೆ ತಾಯಿ ಅಥವಾ ಹುಡುಗಿಯ ಹೆತ್ತವರನ್ನು ಸಹ ಜೋಡಿಸಲಾಗುತ್ತದೆ.

❖ ವಿದ್ಯಾರ್ಥಿಯ ಅಜ್ಜ ಅಜ್ಜಿಯನ್ನು ಕೂಡ ಜೊತೆ ಖಾತೆ ಸಾಲ ಪಡೆದವರೆಂದು ಕೂಡ ಮಾಡಿ ಸಾಲ ಮಂಜೂರು ಮಾಡುವ ಯೋಜನೆಯು ಇದೆ.

ಭದ್ರತೆಯ ಸ್ವರೂಪ	**ಪಾರ್ಶ್ವ (ಂಅರ್ಗಿನ್)**
ಆಸ್ತಿ ಮತ್ತು ಕಟ್ಟಡ	ಶೂನ್ಯ
ಶೇರ್‌ನ ಮಾರುಕಟ್ಟೆ ಬೆಲೆ	50%
ಶೇರ್ ಮತ್ತು ಕರಾರು ಪತ್ರದ ಮಾರುಕಟ್ಟೆ ಬೆಲೆ	50%

ಅನುಮೋದಿಸಿದ ಒಂದು ಅನ್ಯೋನ್ಯ	50%
ಸರಕಾರಿ ಕೈ ಪತ್ರ / ಒಪ್ಪಿಸಿದ ವಿಮಾ ಪಾಲಿಸಿ	ಶೂನ್ಯ
ಎನ್.ಎಸ್.ಸಿ. / ಕಿಸಾನ ವಿಕಾಸ್ ಪತ್ರ	ಶೂನ್ಯ
ಕಾಲಾವಧಿ ಠೇವಣಿ	ಶೂನ್ಯ
ಚಿನ್ನ	ಕ್ರಯ ನಿರ್ಣಯದ 20%

ಬಡ್ಡಿದರ

	4 ಲಕ್ಷ ತನಕ	4 ಲಕ್ಷದಿಂದ 7.5 ಲಕ್ಷ ವರೆಗೆ	7.5 ಲಕ್ಷದಿಂದ 20 ಲಕ್ಷ ತನಕ	15 ಲಕ್ಷದಿಂದ 20 ಲಕ್ಷ
ಬಡ್ಡಿದರ	11% ಬಡ್ಡಿ	12% ಬಡ್ಡಿ	9.75% ಬಡ್ಡಿ	9.75% ಬಡ್ಡಿ

ಸಾಲ ಮರು ಪಾವತಿ

- ಸಾಲ ಮರುಪಾವತಿಸಲು ಶಿಕ್ಷಣ ಅವಧಿ ಮುಗಿದ ಒಂದು ವರ್ಷ ಅಥವಾ ಶಿಕ್ಷಣ ಮುಗಿಸಿ ಕೆಲಸ ಸಿಕ್ಕಿದ 6 ತಿಂಗಳು, ಇದರಲ್ಲಿ ಯಾವುದು ಮೊದಲೋ ಅದನ್ನು ತೆಗೆದುಕೊಂಡು.
- ಸಾಲ ಮರುಪಾವತಿ ಅವಧಿಯು 5 ರಿಂದ 7 ವರ್ಷವಾಗಿದ್ದು ಒಂದು ವೇಳೆ ವಿದ್ಯಾರ್ಥಿಯು ಅನುತ್ತೀರ್ಣವಾದಲ್ಲಿ 2 ವರ್ಷ ಹೆಚ್ಚಿನ ಸಮಯವನ್ನು ನೀಡಲಾಗುತ್ತದೆ.
- ಸಾಲ ಮರುಪಾವತಿಯನ್ನು ಪ್ರತಿ ತಿಂಗಳಿಗೊಮ್ಮೆ ಬಡ್ಡಿ ಸಮೇತ ಪಾವತಿಸ ಬೇಕಾಗುತ್ತದೆ.
- ಒಂದು ವೇಳೆ ಸಾಲ ಮರುಪಾವತಿಯ ದಿನ ಮೀರಿದಲ್ಲಿ ದಂಡವನ್ನು ಸಹ ಕಟ್ಟಬೇಕು.
- ಬ್ಯಾಂಕ್‌ನವರು ಅವಧಿ ಮುಗಿಯುವ ಸಮಯದಲ್ಲಿ ಸಾಲ ಮರುಪಾವತಿಯ ಬಗ್ಗೆ ಜ್ಞಾಪಕ ಮಾಡುತ್ತಾರೆ.
- ವಿದ್ಯಾರ್ಥಿ ಪದವಿ ಪಡೆಯಲು ಈಗಾಗಲೇ ಶಿಕ್ಷಣ ಸಾಲ ಪಡೆದಿದ್ದು ಪುನಃ ಉನ್ನತ ಶಿಕ್ಷಣ ಪಡೆಯಲು ಸಾಲ ಯೋಜನೆ ಪಡೆಯಲು ಇಚ್ಛಿಸಿದರೆ ಆಗ ಆ ಹಳೆಯ ಶಿಕ್ಷಣ ಸಾಲವನ್ನೇ ಮುಂದುವರಿಸಲಾಗುವುದು. ಆದರೆ ವಿದ್ಯಾರ್ಥಿಯು ಹೆಚ್ಚಿನ ದಾಖಲೆಗಳನ್ನು ನೀಡಬೇಕಾಗುತ್ತದೆ ಮತ್ತು ಉನ್ನತ ಶಿಕ್ಷಣ ಪ್ರವೇಶಾತಿ ದಾಖಲೆಗಳನ್ನು ಸಮರ್ಪಿಸಬೇಕಾಗುತ್ತದೆ.

ಕಾಗದ ಪತ್ರಗಳು

ಭಾರತದಲ್ಲಿ ವಿದ್ಯಾಭ್ಯಾಸ ಮಾಡಲು ಕೆನರಾ ಬ್ಯಾಂಕ್‌ನಿಂದ ಶಿಕ್ಷಣ ಸಾಲ ಪಡೆಯಲು ಈ ಕೆಳಗಿನ ಕಾಗದ ಪತ್ರಗಳ ಉಪಯೋಗ ಇದೆ.

- ಅರ್ಜಿ ನಮೂನೆ ಸಲ್ಲಿಸುವಿಕೆ.
- ಹೆತ್ತವರ, ಪೋಷಕರ ದಾಖಲೆ ಪತ್ರಗಳು, ವೇತನ ಪತ್ರಗಳು, ಕೃಷಿ ಸಂಬಂಧಿ ಪತ್ರಗಳು, ಜಮೀನಿನ ಪತ್ರ, ಇತ್ಯಾದಿ.
- ಶಿಕ್ಷಣ ಸಾಲ ಒಪ್ಪಿಗೆ ಪತ್ರ.
- ವಿದ್ಯಾರ್ಥಿ ಪ್ರಾಪ್ತ ವಯಸ್ಕನಾದಲ್ಲಿ ಹೆತ್ತವರ / ಪೋಷಕರು ಕೂಡಿ ಖಾತೆ ತೆರೆಯುವುದು.
- ವಿದ್ಯಾರ್ಥಿ ಕಿರಿಯ ವಯಸ್ಸಿನವನಾದಲ್ಲಿ ವಿದ್ಯಾರ್ಥಿಯ ಪರವಾಗಿ ಪೋಷಕರ / ಹೆತ್ತವರ ಖಾತೆ ತೆರೆದು ಸಾಲ ಮಂಜೂರು ಮಾಡಲಾಗುವುದು.
- ಸಾಲ ಕೊಡಲು ಜಾಮೀನ್ ಅನ್ನು ಕೂಡ ಪಡೆಯಲಾಗುತ್ತದೆ.
- ಮಾದರಿ ಸಹಿಯನ್ನು ಪಡೆಯಲಾಗುವುದು.
- ವರದಿ / ಪ್ರಕಟಣೆ / ಋಣಭಾರದ ಬಗ್ಗೆ ಒಂದು ಪತ್ರವನ್ನು ಜಾಮೀನುದಾರರಿಂದ ಪಡೆಯಲಾಗುತ್ತದೆ.
- ಸಾಲ ಪಡೆದವರ 3 ಭಾವ ಚಿತ್ರ.
- 4 ಲಕ್ಷಕ್ಕಿಂತ ಹೆಚ್ಚಿನ ಸಾಲ ನೀಡುವಾಗ ಬ್ಯಾಂಕ್‌ನವರು ಅ ಸಾಲದ ರಕ್ಷಣೆಗಾಗಿ ಅಷ್ಟೇ ಮೊತ್ತಕ್ಕೆ ಸಮನಾದ ನಗದಿನ ಅಥವಾ ಜಾಗದ ಪತ್ರವನ್ನು ಅಡವಿಡಿಸುತ್ತಾರೆ.

ವಿದೇಶದಲ್ಲಿ ವಿದ್ಯಾಭ್ಯಾಸ ಮಾಡಲು ಕಾಗದ ಪತ್ರ

ವಿದೇಶದಲ್ಲಿ ವಿದ್ಯಾಭ್ಯಾಸ ಮಾಡಲು ಬ್ಯಾಂಕ್‌ಗೆ ಈ ಕೆಳಗಿನ ಕಾಗದ ಪತ್ರ ಬೇಕು.

- ಪಾಸ್‌ಪೋರ್ಟ್‌ನ ನಕಲು, ಪ್ರವೇಶ ಪತ್ರ
- ವಿಶ್ವ ವಿದ್ಯಾಲಯ ನೀಡಿದ ನಮೂನೆ 1 ರಿಂದ 20 ಇವಿಷ್ಟನ್ನು ಬ್ಯಾಂಕ್‌ಗೆ ಹಾಜರು ಪಡಿಸಬೇಕು.

ಆ್ಯಕ್ಸಿಸ್ ಬ್ಯಾಂಕ್‌ನ ಶಿಕ್ಷಣ ಸಾಲ ಯೋಜನೆ

ಅರ್ಹತೆ

ವಿದ್ಯಾರ್ಥಿಯು ಪ್ರತಿಭಾವಂತನಾಗಿದ್ದು ಪದವಿ ಮತ್ತು ಉನ್ನತ ಶಿಕ್ಷಣವನ್ನು ಭಾರತದಲ್ಲಿ ಅಥವಾ ವಿದೇಶದಲ್ಲಿ ಪಡೆಯಲು ಆ್ಯಕ್ಸಿಸ್ ಬ್ಯಾಂಕ್‌ನಿಂದ ಶಿಕ್ಷಣ ಸಾಲ ಪಡೆಯಲು ಅರ್ಹನಾಗಿರುತ್ತಾನೆ.

ಶಿಕ್ಷಣ ಸಾಲ ಪಡೆಯಲು ವಿದ್ಯಾರ್ಥಿಗೆ ವೃತ್ತಿ ಶಿಕ್ಷಣ ಅಥವಾ ಉನ್ನತ ಶಿಕ್ಷಣ. ಉದಾ: ವೈದ್ಯಕೀಯ, ತಾಂತ್ರಿಕ ಶಿಕ್ಷಣ, ವ್ಯವಹಾರ ಇತ್ಯಾದಿ ಶಿಕ್ಷಣ ಪಡೆಯಲು ಪ್ರವೇಶ ಪಡೆದಲ್ಲಿ ಅಂತಹ ವಿದ್ಯಾರ್ಥಿಯು ಅರ್ಹನಾಗಿರುತ್ತಾನೆ.

ಸಾಲದ ವಿವರ

ಮಿತಿ: ಬ್ಯಾಂಕ್‌ನ ಶಿಕ್ಷಣ ಸಾಲ ಪಡೆಯಲು ಸಾಲದ ಮಿತಿ 10 ಲಕ್ಷ ರೂಪಾಯಿ. ಭಾರತದಲ್ಲಿ ಓದಲು ಮತ್ತು 20 ಲಕ್ಷ ರೂಪಾಯಿ ವಿದೇಶದಲ್ಲಿ ವಿದ್ಯಾಭ್ಯಾಸ ಪಡೆಯಲು ನೀಡಲಾಗುವುದು.ಅತೀ ಕಡಿಮೆ ಎಂದರೆ 50,000 ರೂಪಾಯಿಗಳನ್ನು ಈ ಯೋಜನೆಯಲ್ಲಿ ಸಾಲ ನೀಡಲಾಗುತ್ತದೆ.

ಪಾರ್ಶ್ವ (Margin)

- 4 ಲಕ್ಷದವರೆಗೆ ಸಾಲ ಪಡೆಯಲು ಯಾವುದೇ ಪಾರ್ಶ್ವವಿಲ್ಲ.
- 4 ಲಕ್ಷಕ್ಕಿಂತ ಅಧಿಕ ಸಾಲ ಪಡೆದು ಭಾರತದಲ್ಲಿ ವಿದ್ಯಾಭ್ಯಾಸ ನಡೆಸಲು 5% ಪಾರ್ಶ್ವ, ಉನ್ನತ ಶಿಕ್ಷಣ ಅಭ್ಯಸಿಸಲು 15% ಪಾರ್ಶ್ವ.

ಕಾಗದ ಪತ್ರಗಳು

ಆ್ಯಕ್ಸಿಸ್ ಬ್ಯಾಂಕ್‌ನಲ್ಲಿ ಸಾಲ ಪಡೆಯಲು ವಿದ್ಯಾರ್ಥಿಗೆ ಮತ್ತು ಹೆತ್ತವರ ಕೆಲವು ಕಾಗದ ಪತ್ರಗಳ ಅವಶ್ಯಕತೆ ಇರುತ್ತದೆ. ಅವುಗಳೆಂದರೆ –

- ವಿದ್ಯಾರ್ಥಿಯ ಮತ್ತು ಹೆತ್ತವರ ಕಾಗದ ಪತ್ರಗಳು.
- ಗುರುತು ಚೀಟಿ: ಪಾಸ್‌ಪೋರ್ಟ್ ನಕಲು, ವಾಹನ ಚಲಾವಣಾ ಪರವಾನಗಿ ನಕಲು, ಚುನಾವಣಾ ಗುರುತು ಚೀಟಿ, ಪಾನ್ ಕಾರ್ಡ್, ಇತ್ಯಾದಿ.
- ನಿವೇಶನ ದಾಖಲೆ: ಪಾಸ್‌ಪೋರ್ಟ್ ನಕಲು, ಚಾಲನಾ ಪರವಾನಗಿ, ಜನನ ಪ್ರಮಾಣ ಪತ್ರ.
- ವಯಸ್ಸಿನ ದಾಖಲೆ: ಪಾಸ್‌ಪೋರ್ಟ್ ನಕಲು, ಚಾಲನಾ ಪರವಾನಗಿ, ಜನನ ಪ್ರಮಾಣ ಪತ್ರ.
- ಸಹಿ ತಾಳೆ ನೋಡುವುದು
- ಒಂದು ಸಹಿಯ ಭಾವಚಿತ್ರ

ವಿದೇಶದಲ್ಲಿ ವಿದ್ಯಾಭ್ಯಾಸ ನಡೆಸುವ ವಿದ್ಯಾರ್ಥಿಯ ದಾಖಲೆಗಳು

- ಪ್ರವೇಶ ಪತ್ರ ನಕಲು, ವಿಶ್ವ ವಿದ್ಯಾಲಯದ ಪತ್ರ
- ಶಿಕ್ಷಣ ಶುಲ್ಕದ ಪತ್ರ
- ಕೊನೆಯ ಪರೀಕ್ಷೆಯ ಅಂಕಪಟ್ಟಿ ನಕಲು
- ಪಾಸ್‌ಪೋರ್ಟ್‌ನ ನಕಲು

ಆ್ಯಕ್ಸಿಸ್ ಬ್ಯಾಂಕ್‌ನ ಬಡ್ಡಿದರ

ಶಿಕ್ಷಣ ಸಾಲ	**ಸಾಲದ ಮೊತ್ತ**	**ಬಡ್ಡಿದರ**
ವಿದ್ಯಾರ್ಥಿಗಳಿಗೆ	4 ಲಕ್ಷ ತನಕ	9.95 + 7%
	4 ಲಕ್ಷ ದಿಂದ 7.5 ಲಕ್ಷ ತನಕ	9.95 + 8%
	7.5 ಲಕ್ಷ ಕ್ಕಿಂತ ಹೆಚ್ಚು	9.95 + 6%
ವಿದ್ಯಾರ್ಥಿನಿಯರಿಗೆ	4 ಲಕ್ಷ ತನಕ	9.95 + 6.5%
	4 ಲಕ್ಷ ದಿಂದ 7.5 ಲಕ್ಷ ತನಕ	9.95 + 7.5%
	7.5 ಲಕ್ಷ ಕ್ಕಿಂತ ಹೆಚ್ಚು	9.95 + 5.5%

9.95% ಎಂಬುದು ಮೂಲ ದರವಾಗಿದ್ದು ಇದು ನಿರಖು ಮೊತ್ತವಾಗಿದೆ.

ಶಿಕ್ಷಣ ಸಾಲವನ್ನು ಕೊಡುವ ಭಾರತದ ಬ್ಯಾಂಕ್‌ಗಳು ಈ ಕೆಳಗಿನಂತಿವೆ.

ಬ್ಯಾಂಕ್ / ವಸ್ತುವಿನ ಹೆಸರು	ಬಡ್ಡಿದರದ ವಿಧಾನ	ಸಾಲದ ಹಣಕ್ಕೆ ಬಡ್ಡಿದರ		
		4 ಲಕ್ಷದ ವರೆಗೆ	4-7.5ಲಕ್ಷ	7.5 ಲಕ್ಷಕ್ಕಿಂತ ಹೆಚ್ಚು
ಕ್ರೆಡಿಲಾ ಎಡುಕೇಶನ್ ಲೋನ್ ಸರ್ವಿಸ್	ಸ್ಥಿರ	10.5	10.5	10.5
ಎಸ್.ಬಿ.ಐ. – ಇಂಡಿಯಾ	ಸ್ಥಿರ	11.25	12.75	11.75
ಬ್ಯಾಂಕ್ ಆಫ್ ಬರೋಡಾ – ಇಂಡಿಯಾ	ಸ್ಥಿರ	10.0	12.0	12.0
ಆ್ಯಕ್ಸಿಸ್ ಬ್ಯಾಂಕ್ – ಇಂಡಿಯಾ	ಸ್ಥಿರ	15.75	15.75	15.75
ಹೆಚ್.ಡಿ.ಎಫ್.ಸಿ. ಬ್ಯಾಂಕ್ – ಇಂಡಿಯಾ	ಚರ	12.0 - 14.0	12.0 - 14.0	12.0 - 14.0
ಐ.ಡಿ.ಬಿ.ಐ. ಬ್ಯಾಂಕ್ – ಇಂಡಿಯಾ	ಸ್ಥಿರ	11.75	12.75	12.75
ಅಲಹಾಬಾದ್ ಬ್ಯಾಂಕ್ – ಇಂಡಿಯಾ	ಸ್ಥಿರ	11.25	11.0	11.0
ಆಂಧ್ರ ಬ್ಯಾಂಕ್ – ಇಂಡಿಯಾ	ಚರ	11.0	12.75	12.75
ಬ್ಯಾಂಕ್ ಆಫ್ ಇಂಡಿಯಾ – ಇಂಡಿಯಾ	ಸ್ಥಿರ	9.5	10.0	10.75
ಬ್ಯಾಂಕ್ ಆಫ್ ಮಹಾರಾಷ್ಟ್ರ – ಇಂಡಿಯಾ	ಸ್ಥಿರ	10.25	11.0	11.0
ಕೆನರಾ ಬ್ಯಾಂಕ್ – ಇಂಡಿಯಾ	ಸ್ಥಿರ	11.0	12.0	9.75
ಕ್ಯಾಥೊಲಿಕ್ ಸಿರಿಯನ್ ಬ್ಯಾಂಕ್ – ಇಂಡಿಯಾ	ಚರ	14.25	14.75	14.75
ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ – ಇಂಡಿಯಾ	ಸ್ಥಿರ	10.0	10.0	10.0
ದೇನಾ ಬ್ಯಾಂಕ್ – ಇಂಡಿಯಾ	ಸ್ಥಿರ	9.5	12.5	12.5
ಫೆಡರಲ್ ಬ್ಯಾಂಕ್ – ಇಂಡಿಯಾ	ಚರ	13.25	14.75	14.75
ಇಂಡಿಯನ್ ಬ್ಯಾಂಕ್ – ಇಂಡಿಯಾ	ಸ್ಥಿರ	12.0	12.0	12.25
ಇಂಡಿಯನ್ ಓವರ್‌ಸೀಸ್ ಬ್ಯಾಂಕ್ – ಇಂಡಿಯಾ	ಚರ	10.25	11.5	11.5
ಕರ್ನಾಟಕ ಬ್ಯಾಂಕ್ – ಇಂಡಿಯಾ	ಚರ	12.25	13.25	13.25
ಓರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ್ – ಇಂಡಿಯಾ	ಸ್ಥಿರ	10.75	11.5	11.5
ಪಂಜಾಬ್ ನ್ಯಾಷನಲ್ ಬ್ಯಾಂಕ್ – ಇಂಡಿಯಾ	ಸ್ಥಿರ	10.5	11.25	11.25
ಸ್ಟೇಟ್ ಬ್ಯಾಂಕ್ ಆಫ್ ಮೈಸೂರು – ಇಂಡಿಯಾ	ಸ್ಥಿರ	12.5	13.25	13.25
ಯೂಕೋ ಬ್ಯಾಂಕ್ – ಇಂಡಿಯಾ	ಸ್ಥಿರ	11.25	11.75	11.75
ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ – ಇಂಡಿಯಾ	ಚರ	11.75	12.5	12.0
ವಿಜಯಾ ಬ್ಯಾಂಕ್ – ಇಂಡಿಯಾ	ಸ್ಥಿರ	11.0	11.0	11.0
ಸಿಟಿ ಯೂನಿಯನ್ ಬ್ಯಾಂಕ್ – ಇಂಡಿಯಾ	ಚರ	14.75	15.75	15.75
ಪಂಜಾಬ್ & ಸಿಂದ್ ಬ್ಯಾಂಕ್ – ಇಂಡಿಯಾ	ಸ್ಥಿರ	12.5	13.0	NA
ಸ್ಟೇಟ್ ಬ್ಯಾಂಕ್ ಆಫ್ ಬಿಕಾನೆರ್ & ಜೈಪುರ್ – ಇಂಡಿಯಾ	ಸ್ಥಿರ	10.25	11.75	11.75
ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್ – ಇಂಡಿಯಾ	ಸ್ಥಿರ	11.25	12.5	12.5

ಸ್ಟೇಟ್ ಬ್ಯಾಂಕ್ ಆಫ್ ಇಂದೋರ್ – ಇಂಡಿಯಾ	ಸ್ಥಿರ	13.0	13.0	12.0
ಸ್ಟೇಟ್ ಬ್ಯಾಂಕ್ ಆಫ್ ಪಾಟಿಯಾಲ – ಇಂಡಿಯಾ	ಸ್ಥಿರ	11.75	13.25	13.25
ಜೆ. & ಕೆ. ಬ್ಯಾಂಕ್ – ಇಂಡಿಯಾ	ಸ್ಥಿರ	10.0	11.0	11.0
ಸ್ಟೇಟ್ ಬ್ಯಾಂಕ್ ಆಫ್ ಟ್ರಾವಂಕೂರ್ – ಇಂಡಿಯಾ	ಸ್ಥಿರ	12.25	12.25	12.25
ಸಿಂಡಿಕೇಟ್ ಬ್ಯಾಂಕ್ – ಇಂಡಿಯಾ	ಸ್ಥಿರ	10.0	10.0	9.5
ಯೂನೈಟೆಡ್ ಬ್ಯಾಂಕ್ ಆಫ್ ಇಂಡಿಯಾ – ಇಂಡಿಯಾ	ಸ್ಥಿರ	10.25	11.0	NA
ತಮಿಳ್‌ನಾಡ್ ಮರ್‌ಕೆಂಟೈಲ್ ಬ್ಯಾಂಕ್ ಲಿ. – ಇಂಡಿಯಾ	ಸ್ಥಿರ	13.25	14.75	NA
ಲಕ್ಷ್ಮಿ ವಿಲಾಸ್ ಬ್ಯಾಂಕ್ – ಇಂಡಿಯಾ	ಸ್ಥಿರ	11.5	12.5	10.25
ಅಭ್ಯುದಯ್ ಕೋ ಓಪರೇಟಿವ್ ಬ್ಯಾಂಕ್ ಲಿ. – ಇಂಡಿಯಾ	ಸ್ಥಿರ	10.5	10.5	10.5
ಕರೂರು ವೈಶ್ಯ ಬ್ಯಾಂಕ್ – ಇಂಡಿಯಾ	ಸ್ಥಿರ	12.0	12.0	12.5
ಅಪ್ನಾ ಸಹಕಾರಿ ಬ್ಯಾಂಕ್ ಲಿ. – ಇಂಡಿಯಾ	ಚರ	11.0	NA	NA
ದ ರತ್ನಾಕರ್ ಬ್ಯಾಂಕ್ – ಇಂಡಿಯಾ	ಚರ	13.0	NA	NA
ಧನಲಕ್ಷ್ಮಿ ಬ್ಯಾಂಕ್ ಲಿ. – ಇಂಡಿಯಾ	ಸ್ಥಿರ	13.0	13.5	13.5
ಕಾರ್ಪೊರೇಷನ್ ಬ್ಯಾಂಕ್ – ಇಂಡಿಯಾ	ಚರ	11.0	12.0	NA
ಸಾರಸ್ವತ್ ಬ್ಯಾಂಕ್ – ಇಂಡಿಯಾ	ಚರ	12.5	12.5	12.5

ಅಧ್ಯಾಯ –೪

ಚರ್ಚೆ ಮತ್ತು ದತ್ತಾಂಶ ವಿಶ್ಲೇಷಣೆ

ಅಧ್ಯಾಯ ೪

ಚರ್ಚೆ ಮತ್ತು ದತ್ತಾಂಶ ವಿಶ್ಲೇಷಣೆ

ಮಾಹಿತಿದಾರರ ವಯಸ್ಸು

ಮಾಹಿತಿದಾರರ ವಯಸ್ಸನ್ನು ತಿಳಿಯುವುದರ ಉದ್ದೇಶವೆಂದರೆ ಯಾವ ವಯಸ್ಸಿನಲ್ಲಿ ಶಿಕ್ಷಣ ಸಾಲ ಯೋಜನೆಯನ್ನು ಅವರು ಪಡೆದಿದ್ದಾರೆ ಎಂದು ತಿಳಿಯುವುದಕ್ಕಾಗಿ ಅಧ್ಯಯನ ವರದಿಯಲ್ಲಿ ಮಾಹಿತಿದಾರರ ವಯಸ್ಸಿನ ಸಮೀಕ್ಷೆಯ ಫಲಿತಾಂಶವನ್ನು ಈ ಕೆಳಗಿನಂತೆ ನೀಡಲಾಗಿದೆ.


ಕೋಷ್ಟಕ 1

ಮಾಹಿತಿದಾರರ ವಯಸ್ಸಿನ ವಿವರ(Age group of Respondents)

ಮಾಹಿತಿದಾರರ ವಯಸ್ಸು	ಮಾಹಿತಿದಾರರ ಸಂಖ್ಯೆ	ಪ್ರತಿಶತ
15 – 20	25	31.00
20 – 25	35	44.00
25 – 30	12	15.00
30 ಕ್ಕಿಂತ ಹೆಚ್ಚು	08	10.00
ಒಟ್ಟು	**80**	**100.00**

ನಕ್ಷೆ 1

ಮಾಹಿತಿದಾರರ ವಯಸ್ಸು



ಈ ಮೇಲಿನ ನಕ್ಷೆಯ ಪ್ರಕಾರ ಒಟ್ಟು 80 ಮಾಹಿತಿದಾರರಲ್ಲಿ 25 ಜನರು 15 ರಿಂದ 20 ರ ನಡುವೆ ಇದ್ದಾರೆ, ಅಂದರೆ 31%; ಇನ್ನು 35 ಜನರ ವಯಸ್ಸು 20 ರಿಂದ 25 ರ ನಡುವೆ ಬರುತ್ತದೆ, ಅಂದರೆ 44%; ಇನ್ನು 12 ಜನರು 25 ರಿಂದ 30 ರ ನಡುವೆ ಇದ್ದಾರೆ, ಅವರು 15%; ಇನ್ನು 8 ಜನರು 30 ವರ್ಷಕ್ಕೆ ಮೇಲ್ಪಟ್ಟವರಾಗಿದ್ದಾರೆ, ಅಂದರೆ 10%. ಇದರ ಪ್ರಕಾರ ಹೆಚ್ಚು ಸಂಖ್ಯೆ ಇರುವ ಮಾಹಿತಿದಾರರು 20 ರಿಂದ 25 ವರ್ಷದೊಳಗಿನವರು ಎಂದು ತಿಳಿಯಬಹುದು.

ಮಾಹಿತಿದಾರರ ಲಿಂಗ

ಮಾಹಿತಿದಾರರ ಲಿಂಗವನ್ನು ತಿಳಿಯುವುದರ ಉದ್ದೇಶವೇನೆಂದರೆ ಎಷ್ಟು ಜನ ಪುರುಷರು ಮತ್ತು ಎಷ್ಟು ಸ್ತ್ರೀಯರು ಶಿಕ್ಷಣ ಸಾಲವನ್ನು ಪಡೆದಿದ್ದಾರೆ ಎನ್ನುವುದನ್ನು ಅಧ್ಯಯನ ಮಾಡುವ ಸಲುವಾಗಿಯಾಗಿದೆ.ನಾವು ಮಾಡಿದ ಸಮೀಕ್ಷೆಯಲ್ಲಿ ಲಿಂಗಾನುಪಾತದ ವರದಿಯನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.


ಕೋಷ್ಟಕ 2

ಮಾಹಿತಿದಾರರ ಲಿಂಗಾನುಪಾತ

ಲಿಂಗ	ಮಾಹಿತಿದಾರರ ಸಂಖ್ಯೆ	ಪ್ರತಿಶತ
ಪುರುಷ	50	63.00
ಸ್ತ್ರೀ	30	37.00
ಒಟ್ಟು	**80**	**100.00**

ನಕ್ಷೆ 2

ಮಾಹಿತಿದಾರರ ಲಿಂಗ



ಮೇಲಿನ ನಕ್ಷೆಯ ಪ್ರಕಾರ ನಾವು ನಡೆಸಿದ ಸಮೀಕ್ಷೆಯಲ್ಲಿ ಒಟ್ಟು 80 ಜನರಿದ್ದು ಅದರಲ್ಲಿ ಹೆಚ್ಚಿನ 50 ಜನ ಪುರುಷರು ಅಂದರೆ ಶೇಕಡಾ 63, ಮತ್ತು 30 ಜನ ಸ್ತ್ರೀಯರು ಅಂದರೆ ಶೇಕಡಾ 37 ಜನರಿದ್ದರು.ಈ ಅಧ್ಯಯನ ಪ್ರಕಾರ ಸ್ತ್ರೀಯರಿಗಿಂತ ಪುರುಷರೇ ಹೆಚ್ಚು ಶಿಕ್ಷಣ ಸಾಲ ಸೌಲಭ್ಯಗಳನ್ನು ಪಡೆಯುತ್ತಾರೆ ಎಂದು ತಿಳಿಯಬಹುದು.

ಮಾಹಿತಿದಾರರ ಶಿಕ್ಷಣಾ ವಿಷಯ

ಮಾಹಿತಿದಾರರು ಶಿಕ್ಷಣಾವಿಷಯದ ಬಗ್ಗೆ ತಿಳಿಯುವುದರಿಂದ ಅವರ ಶಿಕ್ಷಣ ಸಾಲ ಪಡೆದ ಉದ್ದೇಶವನ್ನು ತಿಳಿಯಲು ಸಹಕಾರಿಯಾಗುತ್ತದೆ.ಈ ಕೆಳಗಿನ ಕೋಷ್ಟಕದಲ್ಲಿ ಕಂಡುಬರುವಂತೆ.


ಕೋಷ್ಟಕ 3

ಮಾಹಿತಿದಾರರ ಶಿಕ್ಷಣಾ ವಿಷಯದ ವಿವರ

ಆಯ್ದ ವಿಷಯ	ಮಾಹಿತಿದಾರರ ಸಂಖ್ಯೆ	ಪ್ರತಿಶತ
ಎಂ.ಬಿ.ಎ.	30	37.00
ತಾಂತ್ರಿಕ ಶಿಕ್ಷಣ	20	25.00
ದಾದಿ ಶಿಕ್ಷಣ	16	20.00
ಡಿಪ್ಲೊಮಾ	14	18.00
ಒಟ್ಟು	**80**	**100.00**

ನಕ್ಷೆ 3

ಮಾಹಿತಿದಾರರ ಶಿಕ್ಷಣಾ ವಿಷಯ



ಈ ಮೇಲಿನ ಕೋಷ್ಟಕದ ಪ್ರಕಾರ ಒಟ್ಟು 80 ಮಾಹಿತಿದಾರರಲ್ಲಿ ಎಂ.ಬಿ.ಎ. ವಿಷಯವನ್ನು ಆಯ್ಕೆ ಮಾಡಿಕೊಂಡವರು 30 ಮಂದಿ, ಎಂದರೆ 37% ಜನರು; ತಾಂತ್ರಿಕ ಶಿಕ್ಷಣ ಆಯ್ಕೆ ಮಾಡಿಕೊಂಡವರು 20 ಮಂದಿ, ಎಂದರೆ 25% ಜನರು; ದಾದಿ ಶಿಕ್ಷಣವನ್ನು 16 ಮಂದಿ ಆಯ್ಕೆ ಮಾಡಿಕೊಂಡರೆ ಅವರ ಶೇಕಡಾವಾರು ಪ್ರತಿಶತ 20. ಇನ್ನು ಡಿಪ್ಲೊಮಾ 14 ಮಂದಿ ಎಂದರೆ 18% ಜನರು.ಬಹುಸಂಖ್ಯಾತ ಮಾಹಿತಿದಾರರು ಸ್ನಾತಕೋತ್ತರ ಮತ್ತು ತಾಂತ್ರಿಕ ಶಿಕ್ಷಣಕ್ಕೆ ಶೈಕ್ಷಣಿಕ ಸಾಲ ಪಡೆದಿರುವುದು ಈ ಅಧ್ಯಯನದಿಂದ ತಿಳಿಯಬಹುದು.

ಶಿಕ್ಷಣ ಸಾಲ ಪಡೆದ ಮೊತ್ತ

ಶಿಕ್ಷಣ ಸಾಲ ಪಡೆದ ಫಲಾನುಭವಿಗಳಲ್ಲಿ ಶಿಕ್ಷಣ ಸಾಲ ಪಡೆದ ವಿಚಾರವನ್ನು ಕೇಳುವುದರಿಂದ ಎಷ್ಟು ಹಣವನ್ನು ಶಿಕ್ಷಣ ಸಾಲವಾಗಿ ಜನರು ಪಡೆಯುತ್ತಾರೆಂಬ ಮಾಹಿತಿಯನ್ನು ಸಂಗ್ರಹಿಸುವ ಉದ್ದೇಷವಾಗಿದೆ.

ಕೋಷ್ಟಕ 4


ಶಿಕ್ಷಣ ಸಾಲ ಪಡೆದ ಮೊತ್ತ

ಸಾಲ ಪಡೆದ ಮೊತ್ತ (ಲಕ್ಷದಲ್ಲಿ)	ಮಾಹಿತಿದಾರರ ಸಂಖ್ಯೆ	ಪ್ರತಿಶತ
2 ಲಕ್ಷಕ್ಕಿಂತ ಕಡಿಮೆ	18	22.00
2 ರಿಂದ 5	30	38.00
5 ರಿಂದ 7	20	25.00
7 ಲಕ್ಷಕ್ಕಿಂತ ಹೆಚ್ಚು	12	15.00
ಒಟ್ಟು	**80**	**100.00**

ಆಕರ: ಪ್ರಾಥಮಿಕ ಸಮೀಕ್ಷೆ

ನಕ್ಷೆ 4

ಶಿಕ್ಷಣ ಸಾಲ ಪಡೆದ ಮೊತ್ತ



ಈ ಮೇಲಿನ ಕೋಷ್ಟಕ ಮತ್ತು ನಕ್ಷೆಯಿಂದ ನಮಗೆ ತಿಳಿಯುವುದೇನೆಂದರೆ ಒಟ್ಟು 80 ಜನರಲ್ಲಿ 2 ಲಕ್ಷಕ್ಕಿಂತ ಕಡಿಮೆ ಶಿಕ್ಷಣ ಸಾಲ ಪಡೆದ ಜನರು 18 ಅಂದರೆ 22%, 2 ರಿಂದ 5 ಲಕ್ಷ ಪಡೆದವರು 38% ಜನರು, 5 ರಿಂದ 7 ಲಕ್ಷಕ್ಕಿಂತ ಹೆಚ್ಚು 15% ಜನರು ಮಾತ್ರ.

ಕುಟುಂಬದ ಒಟ್ಟು ಆದಾಯ

ಕುಟುಂಬ ಸದಸ್ಯನ ಒಟ್ಟು ಆದಾಯವನ್ನು ತಿಳಿದುಕೊಳ್ಳುವ ಉದ್ದೇಶದಿಂದ ಮತ್ತು ಎಷ್ಟು ಆದಾಯವಿದ್ದರೆ ಬ್ಯಾಂಕ್‌ನವರು ಸಾಲವನ್ನು ಕೊಡುತ್ತಾರೆ ಎಂಬ ವಿಚಾರವನ್ನು ಅಧ್ಯಯನ ಮಾಡುವ ಉದ್ದೇಶದಿಂದ ಕುಟುಂಬದ ಒಟ್ಟು ಆದಾಯ ಎಷ್ಟು ಎಂಬ ಪ್ರಶ್ನೆಯನ್ನು ಮಾಹಿತಿದಾರರಿಗೆ ಕೇಳಲಾಗಿದೆ. ಈ ಕೆಳಗಿನ ಕೋಷ್ಟಕದಿಂದ ಕುಟುಂಬದ ಒಟ್ಟು ಆದಾಯವನ್ನು ತಿಳಿಯಬಹುದಾಗಿದೆ.

ಕೋಷ್ಟಕ 5


ಮಾಹಿತಿದಾರರ ಕುಟುಂಬದ ಒಟ್ಟು ಆದಾಯ

ವಾರ್ಷಿಕ ಆದಾಯ	ಮಾಹಿತಿದಾರರ ಸಂಖ್ಯೆ	ಪ್ರತಿಶತ
50,000ಕ್ಕಿಂತ ಕಡಿಮೆ	18	23.00
50,000 ದಿಂದ 1,00,000	30	37.00
1,50,000 ದಿಂದ 2,00,000	22	28.00
2,00,000 ದಿಂದ ಹೆಚ್ಚು	10	12.00
ಒಟ್ಟು	**80**	**100.00**

ಆಕರ: ಪ್ರಾಥಮಿಕ ಸಮೀಕ್ಷೆ

ನಕ್ಷೆ 5

ಮಾಹಿತಿದಾರರ ಕುಟುಂಬದ ಒಟ್ಟು ಆದಾಯ



ಈ ಮೇಲಿನ ಕೋಷ್ಟಕದ ಪ್ರಕಾರ 80 ಜನರ ಮಾಹಿತಿಯನ್ನು ಪಡೆಯಲಾಗಿದ್ದು, ಅದರಲ್ಲಿ 18 ಜನರು 50,000 ಕ್ಕಿಂತ ಕಡಿಮೆ ವಾರ್ಷಿಕ ಆದಾಯವನ್ನು ಹೊಂದಿದ್ದಾರೆ.ಇವರು 23 ಪ್ರತಿಶತ ಆದಾಯ ಹೊಂದಿದ್ದಾರೆ.ಇನ್ನು 30 ಜನರ ಆದಾಯ 50,000 ದಿಂದ 1 ಲಕ್ಷದ ಒಳಗೆ ಹೊಂದಿದ್ದಾರೆ.ಇವರು 37 ಪ್ರತಿಶತ ಜನರಿದ್ದಾರೆ.ಇನ್ನು 22 ಜನರು 1.5 ಲಕ್ಷ ದಿಂದ 2 ಲಕ್ಷದ ಒಳಗೆ ಆದಾಯವನ್ನು ಹೊಂದಿದ್ದು, 28 ಪ್ರತಿಶತ ಜನರಿದ್ದಾರೆ. ಇನ್ನು 10 ಜನ 2,00,000 ಕ್ಕಿಂತ ಹೆಚ್ಚಿನ ಆದಾಯ ಹೊಂದಿದ್ದು 12 ಪ್ರತಿಶತ ಜನರಿದ್ದಾರೆ. ಈ ಅಧ್ಯಯನದ ಪ್ರಕಾರ 50,000 ದಿಂದ 1 ಲಕ್ಷ ಆದಾಯ ಹೊಂದಿದವರ ಸಂಖ್ಯೆ ಬಹಳವಾಗಿದೆ ಎಂದು ತಿಳಿಯಬಹುದು.

ಮಾಹಿತಿದಾರರು ಶಿಕ್ಷಣ ಸಾಲ ಯೋಜನೆಗಳ ಬಗ್ಗೆ ಮಾಹಿತಿ ಪಡೆದ ರೀತಿ

ಯಾವ ಯಾವ ಮೂಲಗಳಿಂದ ಮಾಹಿತಿದಾರರು ಶಿಕ್ಷಣ ಸಾಲ ಯೋಜನೆಗಳ ಮಾಹಿತಿಯನ್ನು ಪಡೆದಿದ್ದಾರೆ ಎಂಬ ಕುರಿತು ಅಧ್ಯಯನ ಮಾಡಲು ಈ ಪ್ರಶ್ನೆಯು ಸಹಕಾರಿಯಾಗಿದೆ.

ಕೆಳಗಿನ ಕೋಷ್ಟಕದಿಂದ ಮಾಹಿತಿದಾರರು ಯಾವ ಯಾವ ಮೂಲಗಳಿಂದ ಮಾಹಿತಿ ಪಡೆದಿದ್ದಾರೆಂಬ ವಿಷಯವನ್ನು ತಿಳಿಯಬಹುದು.

ಕೋಷ್ಟಕ 6


ಶಿಕ್ಷಣ ಸಾಲ ಯೋಜನೆಗಳ ಬಗ್ಗೆ ಮಾಹಿತಿ ಪಡೆದ ಬಗೆ

ಮಾಹಿತಿ ಪಡೆದ ರೀತಿ	ಮಾಹಿತಿದಾರರ ಸಂಖ್ಯೆ	ಪ್ರತಿಶತ
ಗೆಳೆಯರು ಮತ್ತು ಸಂಬಂಧಿಕರು	28	35.00
ಜಾಹೀರಾತಿನ ಮೂಲಕ	20	25.00
ಬ್ಯಾಂಕ್ ಸಿಬಂಧಿಗಳಿಂದ	18	23.00
ಇತರೆ	14	17.00
ಒಟ್ಟು	**80**	**100.00**

ಆಕರ: ಪ್ರಾಥಮಿಕ ಸಮೀಕ್ಷೆ

ನಕ್ಷೆ 6

ಶಿಕ್ಷಣ ಸಾಲ ಯೋಜನೆಗಳ ಬಗ್ಗೆ ಮಾಹಿತಿ ಪಡೆದ ಬಗೆ



ಈ ಮೇಲಿನ ಕೋಷ್ಟಕದಿಂದ ನಮಗೆ ತಿಳಿಯುವುದೇನೆಂದರೆ ಒಟ್ಟು 80 ಜನ ಮಾಹಿತಿದಾರರಲ್ಲಿ 28 ಜನರು ಅಂದರೆ 35 ಪ್ರತಿಶತ ಜನರು ಗೆಳೆಯರು ಮತ್ತು ಸಂಬಂಧಿಕರಿಂದ ಬ್ಯಾಂಕ್‌ಗಳ ಯೋಜನೆಗಳ ಬಗ್ಗೆ ಮಾಹಿತಿ ಪಡೆದಿದ್ದಾರೆ.ಇನ್ನು 20 ಜನರು ಎಂದರೆ 25 ಪ್ರತಿಶತ ಜನರು ಜಾಹೀರಾತಿನ ಮೂಲಕ ತಿಳಿದಿದ್ದಾರೆ.18 ಜನರು ಎಂದರೆ 23 ಪ್ರತಿಶತ ಜನರು ಬ್ಯಾಂಕ್ ಸಿಬ್ಬಂದಿಗಳಿಂದ ಮಾಹಿತಿ ಪಡೆದಿದ್ದಾರೆ.ಉಳಿದ 14, 17 ಪ್ರತಿಶತ ಜನರು ಇತರ ಮೂಲಗಳಿಂದ ಮಾಹಿತಿಯನ್ನು ಪಡೆದಿದ್ದಾರೆ.ಬಹು ಸಂಖ್ಯೆಯ ಜನರು ತಮ್ಮ ಮಿತ್ರರು ಮತ್ತು ಸಂಬಂಧಿಕರಿಂದ ಶಿಕ್ಷಣ ಸಾಲ ಸೌಲಭ್ಯಗಳ ಮಾಹಿತಿ ಪಡೆದಿದ್ದಾರೆ ಎಂದು ತಿಳಿಯಬಹುದು.

ಮಾಹಿತಿದಾರರಿಗೆ ಶಿಕ್ಷಣ ಸಾಲ ಪಡೆಯಲು ಪ್ರೇರಕವಾದ ವಿಚಾರ

ಶಿಕ್ಷಣ ಸಾಲ ಪಡೆಯಲು ಮಾಹಿತಿದಾರರಿಗೆ ಆಸಕ್ತಿಯನ್ನು ತಂದ ವಿಚಾರದ ಕುರಿತು ಅಧ್ಯಯನ ಮಾಡಲು ಮಾಹಿತಿದಾರರಲ್ಲಿ ಅವರು ಯಾವ ವಿಚಾರಕ್ಕೆ ಶಿಕ್ಷಣ ಸಾಲ ಪಡೆದಿದ್ದಾರೆ ಎಂಬ ವಿಚಾರವನ್ನು ಕೇಳಲಾಗಿದೆ.

ಕೋಷ್ಠಕ 7


ಪ್ರೇರಕವಾದ ವಿಷಯ

ಪ್ರೇರಕ ಅಂಶಗಳು	ಮಾಹಿತಿದಾರರ ಸಂಖ್ಯೆ	ಪ್ರತಿಶತ
ಸ್ಪರ್ಧಾತ್ಮಕ ಬಡ್ಡಿದರ	22	28.00
ಬ್ಯಾಂಕ್‌ನ ಉತ್ತಮ ಸಂಬಂಧ	30	37.00
ಮನೆಗೆ ಅತಿ ಸನಿಹವಾದ ಬ್ಯಾಂಕ್	18	23.00
ಸ್ನೇಹಿತರ ಮತ್ತು ಸಂಬಂಧಿಕರ ಶಿಫಾರಸ್ಸಿನ ಮೇರೆಗೆ	10	22.00
ಒಟ್ಟು	**80**	**100.00**

ಆಕರ: ಪ್ರಾಥಮಿಕ ಸಮೀಕ್ಷೆ

ನಕ್ಷೆ 7

ಪ್ರೇರಕವಾದ ವಿಷಯ



ಈ ಮೇಲಿನ ಕೋಷ್ಠಕದ ಪ್ರಕಾರ ಒಟ್ಟು 80 ಜನ ಮಾಹಿತಿಯನ್ನು ಪಡೆಯಲಾಗಿದ್ದು ಮಾಹಿತಿದಾರರಿಗೆ ಪ್ರೇರಕವಾದ ವಿಚಾರವನ್ನು ಕೇಳಿದಾಗ 22 ಜನರು ಸ್ಪರ್ಧಾತ್ಮಕ ಬಡ್ಡಿದರದಿಂದ ಪ್ರೇರಣೆಗೊಂಡಿದ್ದಾರೆ, ಅಂದರೆ 28 ಪ್ರತಿಶತ ಜನರು.ಇನ್ನು 30 ಮಂದಿ ಬ್ಯಾಂಕ್‌ನ ಉತ್ತಮ ಸಂಬಂಧದಿಂದ ಪ್ರೇರಣೆಗೊಂಡಿದ್ದಾರೆ.ಅಂದರೆ 37 ಪ್ರತಿಶತ ಜನರು.ಇನ್ನು 18 ಜನರು ಅಂದರೆ 23 ಪ್ರತಿಶತ ಜನರು ಮನೆಗೆ ಅತಿ ಸನಿಹದಲ್ಲಿ ಬ್ಯಾಂಕ್‌ಯಿದೆ ಎಂಬ ಕಾರಣಕ್ಕೆ ಬ್ಯಾಂಕ್‌ನಿಂದ ಸಾಲ ಪಡೆಯುತ್ತಾರೆ.ಇನ್ನು 10 ಜನರು ಎಂದರೆ 12 ಪ್ರತಿಶತ ಜನರು ಸ್ನೇಹಿತರ ಮತ್ತು ಸಂಬಂಧಿಕರ ಶಿಫಾರಸ್ಸಿನ ಮೇರೆಗೆ ಬ್ಯಾಂಕ್‌ನಿಂದ ಸಾಲ ಪಡೆಯುತ್ತಾರೆ.

ಬ್ಯಾಂಕ್‌ನ ಬಡ್ಡಿದರದ ಬಗ್ಗೆ ಅಭಿಪ್ರಾಯ

ಮಾಹಿತಿದಾರರಲ್ಲಿ ಬ್ಯಾಂಕ್‌ನಿಂದ ಸಾಲ ಪಡೆಯಲು ಪ್ರೇರಕವಾದ ಬಡ್ಡಿದರದ ಬಗ್ಗೆ ಕೇಳಿದಾಗ ಅವರು ನೀಡಿದ ಅಭಿಪ್ರಾಯವನ್ನು ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ.

ಕೋಷ್ಟಕ 8


ಬ್ಯಾಂಕ್‌ನ ಬಡ್ಡಿದರದ ಬಗ್ಗೆ ಅಭಿಪ್ರಾಯ

ಬಡ್ಡಿದರದ ಬಗ್ಗೆ ಅಭಿಪ್ರಾಯ	ಮಾಹಿತಿದಾರರ ಸಂಖ್ಯೆ	ಪ್ರತಿಶತ
ಹೆಚ್ಚು	20	25.00
ಕಡಿಮೆ	30	37.00
ಸಾಮಾನ್ಯ	30	38.00
ಒಟ್ಟು	**80**	**100.00**

ಆಕರ: ಪ್ರಾಥಮಿಕ ಸಮೀಕ್ಷೆ

ನಕ್ಷೆ 8

ಬ್ಯಾಂಕ್‌ನ ಬಡ್ಡಿದರದ ಬಗ್ಗೆ ಅಭಿಪ್ರಾಯ



ಈ ಮೇಲಿನ ಕೋಷ್ಟಕದ ಪ್ರಕಾರ 80 ಜನ ಮಾಹಿತಿದಾರರಿದ್ದು ಅವರಲ್ಲಿ 20 ಜನರು ಅಂದರೆ 25 ಪ್ರತಿಶತ ಜನರು ಹೆಚ್ಚು ಬಡ್ಡಿದರ ಎಂದು ಅಭಿಪ್ರಾಯ ನೀಡಿದ್ದಾರೆ.ಇನ್ನು 30 ಜನರು ಅಂದರೆ 37 ಪ್ರತಿಶತ ಜನರು ಕಡಿಮೆ ಬಡ್ಡಿದರ ಎಂದರೆ ಇನ್ನು 30 ಜನರು ಎಂದರೆ 38 ಪ್ರತಿಶತ ಜನರು ಸಾಮಾನ್ಯ ಬಡ್ಡಿದರ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಮಾಹಿತಿದಾರರ ಸಂತೃಪ್ತತೆಯ ಕುರಿತು ಮಾಹಿತಿ

ಶಿಕ್ಷಣ ಸಾಲ ಯೋಜನೆಯನ್ನು ಪಡೆದಿರುವ ಗ್ರಾಹಕರು ತಾನು ಪಡೆದಿರುವ ಸಾಲ ಯೋಜನೆಯ ಬಡ್ಡಿದರದಿಂದ ಸಂತೃಪ್ತಿ ಹೊಂದಿದ್ದಾರೆಂಬ ಬಗ್ಗೆ ಅಧ್ಯಯನ ನಡೆಸಿದಾಗ ಸಿಕ್ಕ ಮಾಹಿತಿಯನ್ನು ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ.


ಕೋಷ್ಟಕ 9

ಬ್ಯಾಂಕ್‌ನ ಬಡ್ಡಿದರದ ಬಗ್ಗೆ ಮಾಹಿತಿದಾರರ ಸಂತೃಪ್ತಿ

ಅಭಿಪ್ರಾಯ	ಮಾಹಿತಿದಾರರ ಸಂಖ್ಯೆ	ಪ್ರತಿಶತ
ಹೌದು	45	56.00
ಇಲ್ಲ	35	44.00
ಒಟ್ಟು	**80**	**100.00**

ನಕ್ಷೆ 9

ಬ್ಯಾಂಕ್‌ನ ಬಡ್ಡಿದರದ ಬಗ್ಗೆ ಮಾಹಿತಿದಾರರ ಸಂತೃಪ್ತಿ



ಮೇಲಿನ ಕೋಷ್ಟಕದ ಪ್ರಕಾರ 80 ಜನ ಮಾಹಿತಿದಾರರಿದ್ದು ಅವರಲ್ಲಿ 45 ಜನರು ಎಂದರೆ 56 ಪ್ರತಿಶತ ಜನರು ಸಂತೃಪ್ತಿ ಭಾವವನ್ನು ಹೊಂದಿದ್ದಾರೆ.ಇನ್ನುಳಿದ 35 ಜನರು ಎಂದರೆ 44 ಪ್ರತಿಶತ ಜನರು ಸಂತೃಪ್ತಿ ಹೊಂದಿಲ್ಲ ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.ಈ ಅಧ್ಯಯನದಿಂದ ಬಹುಸಂಖ್ಯಾತ ಮಾಹಿತಿದಾರರು ಸಂತೃಪ್ತಿ ಹೊಂದಿದ್ದಾರೆ ಎಂದು ತಿಳಿಯಬರುತ್ತದೆ.

ಸಾಲ ಪಡೆಯುವಲ್ಲಿನ ತೊಂದರೆ / ಅಡಚಣೆಗಳು

ಶಿಕ್ಷಣ ಸಾಲ ಪಡೆಯುವಲ್ಲಿ ಗ್ರಾಹಕರು ಯಾವುದಾದರೂ ತೊಂದರೆಗಳನ್ನು ಅನುಭವಿಸಿದ್ದಾರೆಯೇ ಎಂಬ ಬಗ್ಗೆ ಅಧ್ಯಯನ ನಡೆಸಿ ಅದರ ಮಾಹಿತಿಯನ್ನು ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ.


ಕೋಷ್ಟಕ 10

ಸಾಲ ಪಡೆಯುವಲ್ಲಿ ಅನುಭವಿಸಿದ ತೊಂದರೆಗಳ ಮಾಹಿತಿ

ತೊಂದರೆಗಳು	ಮಾಹಿತಿದಾರರ ಸಂಖ್ಯೆ	ಪ್ರತಿಶತ
ಬಹಳ ಉದ್ದನೆಯ ಕಾರ್ಯವಿಧಾನ	20	25.00
ಗ್ರಾಹಕರೊಂದಿಗೆ ಅಸಡ್ಡೆಯ ಭಾವ	15	19.00
ಇತರೆ	45	56.00
ಒಟ್ಟು	**80**	**100.00**

ನಕ್ಷೆ 10

ಸಾಲ ಪಡೆಯುವಲ್ಲಿ ಅನುಭವಿಸಿದ ತೊಂದರೆಗಳ ಮಾಹಿತಿ



ಮೇಲಿನ ಕೋಷ್ಟಕದಲ್ಲಿ ಒಟ್ಟು 80 ಮಾಹಿತಿದಾರರನ್ನು ತೆಗೆದುಕೊಂಡಿದ್ದು ಅದರಲ್ಲಿ 20 ಜನರು ಎಂದರೆ 25 ಪ್ರತಿಶತ ಜನರು ಶಿಕ್ಷಣ ಸಾಲ ಯೋಜನೆಯ ಕಾರ್ಯವಿಧಾನ ಬಹಳ ದೀರ್ಘವಾಗಿದೆ ಎಂದರೆ ಮತ್ತೆ 15 ಜನರು ಎಂದರೆ 19 ಪ್ರತಿಶತ ಜನರು ಬ್ಯಾಂಕ್‌ನವರದ್ದು ಗ್ರಾಹಕರೊಂದಿಗೆ ಅಸಡ್ಡೆಯ ಭಾವ ಎಂದರೆ ಇನ್ನುಳಿದ 45 ಜನರು ಎಂದರೆ 56 ಪ್ರತಿಶತ ಜನರು ಇತರೆ ತೊಂದರೆಗಳೆಂದು ತಿಳಿಸಿದ್ದಾರೆ.

ಬ್ಯಾಂಕ್‌ನ ಸಿಬ್ಬಂದಿಗಳು ತೊಂದರೆಗಳಿಗೆ ಸ್ಪಂದಿಸಿದ ರೀತಿ

ಮಾಹಿತಿದಾರರು ಅನುಭವಿಸಿದ ತೊಂದರೆಗಳಿಗೆ ಬ್ಯಾಂಕ್‌ನ ಸಿಬ್ಬಂದಿಯವ ಯಾವ ರೀತಿಯಲ್ಲಿ ಸ್ಪಂದಿಸಿದ್ದಾರೆ ಎಂದು ಅಧ್ಯಯನ ನಡೆಸಲು ಕೇಳಿದ ಪ್ರಶ್ನೆಗೆ ಕೆಳಗಿನ ಕೋಷ್ಟಕದಲ್ಲಿ ಮಾಹಿತಿದಾರರು ನೀಡಿದ ವಿವರವನ್ನು ತೋರಿಸಲಾಗಿದೆ.

ಕೋಷ್ಟಕ 11

ಬ್ಯಾಂಕ್‌ನ ಸಿಬ್ಬಂದಿಗಳು ತೊಂದರೆಗಳಿಗೆ ಸ್ಪಂದಿಸಿದ ರೀತಿ

ಬ್ಯಾಂಕ್‌ನವರ ಸ್ಪಂದನೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
ಉತ್ತಮವಾಗಿ	50	63.00
ಒಟ್ಟಾರೆ	30	37.00
ಒಟ್ಟು	**80**	**100.00**

ಆಕರ: ಪ್ರಾಥಮಿಕ ಸಮೀಕ್ಷೆ

ನಕ್ಷೆ 11

ಬ್ಯಾಂಕ್‌ನ ಸಿಬ್ಬಂದಿಗಳು ತೊಂದರೆಗಳಿಗೆ ಸ್ಪಂದಿಸಿದ ರೀತಿ



ಈ ಮೇಲಿನ ಕೋಷ್ಟಕದ ಪ್ರಕಾರ ಒಟ್ಟು 80 ಮಂದಿ ಮಾಹಿತಿದಾರರಲ್ಲಿ 50 ಜನರು ಉತ್ತಮವಾಗಿ ಬ್ಯಾಂಕ್‌ನ ಸಿಬ್ಬಂದಿಗಳು ತೊಂದರೆಗಳನ್ನು ನಿವಾರಿಸಿದ್ದಾರೆ ಎಂದರೆ ಇನ್ನುಳಿದ 30 ಜನರು ಬ್ಯಾಂಕ್‌ನ ಸಿಬ್ಬಂದಿಗಳು ಒಟ್ಟಾರೆಯಾಗಿ ಸ್ಪಂದಿಸಿದ್ದಾರೆಂದು ತಮ್ಮ ಅಸಮಾಧಾನವನ್ನು ಹೊರಹಾಕಿದ್ದಾರೆ.

ಪರಿಶೀಲನ ನಿಯತಕಾಲಿಕ

ಶಿಕ್ಷಣ ಸಾಲ ಪಡೆದ ಗ್ರಾಹಕರಿಗೆ ತಾವು ಸಾಲವನ್ನು ಹಂತ ಹಂತವಾಗಿ ಮರುಪಾವತಿಸಲು ಮತ್ತು ಎಷ್ಟು ಸಾಲ ಕಟ್ಟಿ ಆಗಿದೆ ಮತ್ತು ಇನ್ನು ಎಷ್ಟು ಬಾಕಿ ಇದೆ ಎಂಬ ವಿಚಾರವನ್ನು ತಿಳಿಸಲು ಆಗಾಗ ಪರಿಶೀಲನ ನಿಯತಕಾಲಿಕವನ್ನು ಬ್ಯಾಂಕ್‌ನವರು ಕಳಿಸುವರೇ ಎಂಬ ಬಗೆಗೆ ಅಧ್ಯಯನ ನಡೆಸಿದಾಗ ಮಾಹಿತಿದಾರರು ನೀಡಿದ ಅನಿಸಿಕೆಯನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.


ಕೋಷ್ಟಕ 12

ಪರಿಶೀಲನ ನಿಯತಕಾಲಿಕೆ

ಸಾಲ ಮರುಪಾವತಿಗೆ ಪರಿಶೀಲನಾ ನಿಯತಕಾಲಿಕೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
ಹೌದು	55	69.00
ಇಲ್ಲ	25	31.00
ಒಟ್ಟು	**80**	**100.00**

ನಕ್ಷೆ 12

ಪರಿಶೀಲನ ನಿಯತಕಾಲಿಕೆ



ಈ ಮೇಲಿನ ಕೋಷ್ಟಕದ ಪ್ರಕಾರ ಒಟ್ಟು 80 ಮಾಹಿತಿದಾರರಲ್ಲಿ 55 ಜನರು ಎಂದರೆ 69 ಪ್ರತಿಶತ ಜನರು ಹೌದು ಪರಿಶೀಲನ ನಿಯತಕಾಲಿಕೆ ಕಳುಹಿಸುತ್ತಾರೆ ಎಂದು ಹೇಳಿದರೆ ಇನ್ನುಳಿದ 25 ಜನರು ಎಂದರೆ 31 ಪ್ರತಿಶತ ಜನರು ಪರಿಶೀಲನ ನಿಯತಕಾಲಿಕೆ ಕಳುಹಿಸುತ್ತಿಲ್ಲ ಎಂಬ ಉತ್ತರವನ್ನು ನೀಡಿದ್ದಾರೆ.

ಹಣದುಬ್ಬರದ ಭಾದೆ

ಸಾಲ ಮರು ಪಾವತಿಸುವಲ್ಲಿ ಮಾಹಿತಿದಾರರಿಗೆ ಹಣದುಬ್ಬರದ ಭಾದೆ ಎದುರಾಗಿದೆಯೇ ಎಂಬ ಬಗ್ಗೆ ಪರಿಶೀಲನೆ ನಡೆಸಲು ಈ ಪ್ರಶ್ನೆ ಕೇಳಲಾಗಿದ್ದು ಮಾಹಿತಿದಾರರು ನೀಡಿದ ವಿವರವನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.


ಕೋಷ್ಟಕ 13

ಹಣದುಬ್ಬರದ ಭಾದೆ

ಹಣದುಬ್ಬರದ ಭಾದೆ	ಮಾಹಿತಿದಾರರ ಸಂಖ್ಯೆ	ಪ್ರತಿಶತ
ಹೌದು	42	53.00
ಇಲ್ಲ	38	47.00
ಒಟ್ಟು	**80**	**100.00**

ನಕ್ಷೆ 13

ಹಣದುಬ್ಬರದ ಭಾದೆ



ಈ ಮೇಲಿನ ಕೋಷ್ಟಕದ ಪ್ರಕಾರ ಒಟ್ಟು 80 ಜನ ಮಾಹಿತಿದಾರರಿದ್ದು ಅವರಲ್ಲಿ 42 ಜನರು ಎಂದರೆ 53 ಪ್ರತಿಶತ ಜನರು ಹಣದುಬ್ಬರದಿಂದ ಬ್ಯಾಂಕ್‌ನ ಬಡ್ಡಿದರದಲ್ಲಿ ಏರಿಳಿತ ಆಯಿತು ಎಂದು ಹೇಳಿದರೆ ಇನ್ನುಳಿದ 38 ಜನ ಎಂದರೆ 47 ಪ್ರತಿಶತ ಜನರು ಹಾಗೇನು ತೊಂದರೆ ಆಗಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಶಿಕ್ಷಣ ಸಾಲ ಯೋಜನೆಯನ್ನು ಪಡೆದ ಆವೃತ್ತಿ

ಶಿಕ್ಷಣ ಸಾಲ ಯೋಜನೆಯಿಂದ ಈಗ ಪಡೆದಿರುವ ಶಿಕ್ಷಣ ಸಾಲದ ಹೊರತಾಗಿ ಇದರ ಮೊದಲೇನಾದರು ಶಿಕ್ಷಣ ಸಾಲ ಯೋಜನೆಯನ್ನೇನಾದರೂ ಪಡೆದಿದ್ದಾರೆಯೇ ಎಂದು ಅಧ್ಯಯನ ಮಾಡುವ ಸಲುವಾಗಿ ಈ ಪ್ರಶ್ನೆಯನ್ನು ಕೇಳಲಾಗಿದ್ದು ಮಾಹಿತಿದಾರರು ಹೇಳಿದ ಉತ್ತರವನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.


ಕೋಷ್ಠಕ 14

ಶಿಕ್ಷಣ ಸಾಲ ಪಡೆದ ಅವೃತ್ತಿ

ಈ ಮೊದಲು ಶಿಕ್ಷಣ ಸಾಲ ಪಡೆದಿರುವಿರೇ	ಮಾಹಿತಿದಾರರ ಸಂಖ್ಯೆ	ಪ್ರತಿಶತ
ಹೌದು	14	18.00
ಇಲ್ಲ	66	88.00
ಒಟ್ಟು	**80**	**100.00**

ನಕ್ಷೆ 14

ಶಿಕ್ಷಣ ಸಾಲ ಪಡೆದ ಅವೃತ್ತಿ



ಈ ಮೇಲಿನ ಕೋಷ್ಠಕದ ಪ್ರಕಾರ 80 ಮಾಹಿತಿದಾರನ್ನೊಳಗೊಂಡಿದ್ದು ಅವರಲ್ಲಿ 14 ಜನರು ಎಂದರೆ 18 ಪ್ರತಿಶತ ಜನರು ಈ ಮೊದಲು ಶಿಕ್ಷಣ ಸಾಲ ಯೋಜನೆಯನ್ನು ಪಡೆದಿದ್ದಾರೆಂದು ಮಾಹಿತಿ ನೀಡಿದರೆ ಇನ್ನುಳಿದ 66 ಜನರು ಇದೇ ಮೊದಲ ಬಾರಿಗೆ ಶಿಕ್ಷಣ ಸಾಲ ಪಡೆದುರುವುದಾಗಿ ಮಾಹಿತಿ ನೀಡಿದ್ದಾರೆ.

ಬ್ಯಾಂಕ್‌ಗಳ ಶಿಕ್ಷಣ ಸಾಲ ಯೋಜನೆಯ ಗುಣಮಟ್ಟ

ಬ್ಯಾಂಕ್‌ಗಳ ಶಿಕ್ಷಣ ಸಾಲಯೋಜನೆಯ ಗುಣಮಟ್ಟ ಹೇಗಿದೆ ಎಂದು ತಿಳಿಯಲು ಮಾಹಿತಿದಾರರಿಂದ ಅಭಿಪ್ರಾಯವನ್ನು ಸಂಗ್ರಹಿಸಲಾಗಿದ್ದು ಅವರು ನೀಡಿದ ಮಾಹಿತಿಯನ್ನು ಈ ಕೆಳಗಿನಂತೆ ಕೋಷ್ಟಕದಲ್ಲಿ ತೋರಿಸಲಾಗಿದೆ.

ಕೋಷ್ಟಕ 15


ಬ್ಯಾಂಕ್‌ಗಳ ಶಿಕ್ಷಣ ಸಾಲ ಯೋಜನೆಯ ಗುಣಮಟ್ಟ

ಸೇವೆಗಳು	ಮಾಹಿತಿದಾರರ ಸಂಖ್ಯೆ	ಪ್ರತಿಶತ
ಕಳಪೆ	10	12.00
ಸಾಮಾನ್ಯ	20	25.00
ಉತ್ತಮ	32	40.00
ಒಟ್ಟು	**80**	**100.00**

ಆಕರ: ಪ್ರಾಥಮಿಕ ಸಮೀಕ್ಷೆ

ನಕ್ಷೆ 15

ಬ್ಯಾಂಕ್‌ಗಳ ಶಿಕ್ಷಣ ಸಾಲ ಯೋಜನೆಯ ಗುಣಮಟ್ಟ



ಈ ಮೇಲಿನ ಕೋಷ್ಟಕದ ಪ್ರಕಾರ ಒಟ್ಟು 80 ಮಾಹಿದಾರರಿದ್ದು ಅವರಲ್ಲಿ 10 ಜನರು ಅಂದರೆ12% ಜನರು ಬ್ಯಾಂಕ್‌ನ ಸೇವೆಯು ಕಳಪೆ ಮಟ್ಟದಲ್ಲಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.ಮತ್ತೆ 20 ಜನರು ಎಂದರೆ 25% ಜನರು ಸಾಮಾನ್ಯ ಸೇವೆ ಎಂದು ಹೇಳಿದ್ದಾರೆ.ಮತ್ತೆ 32 ಜನರು ಎಂದರೆ 40 ಪ್ರತಿಶತ ಜನರು ಉತ್ತಮ ಎಂದಿದ್ದಾರೆ.ಇನ್ನು ಉಳಿದ 18 ಜನರು ಅಂದರೆ 23 ಪ್ರತಿಶತ ಜನರು ಅತ್ಯುತ್ತಮ ಸೇವೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಸಾಲಕೊಡುವ ಮೊದಲು ಬ್ಯಾಂಕ್‌ನವರು ನೀಡುವ ಮಾಹಿತಿ

ಗ್ರಾಹಕರು ಶಿಕ್ಷಣ ಸಾಲ ಪಡೆಯಲು ಬ್ಯಾಂಕ್‌ಗೆ ಹೋದಾಗ ಅಲ್ಲಿನ ಸಿಬ್ಬಂದಿ ಗ್ರಾಹಕರಿಗೆ ಸರಿಯಾದ ಮಾಹಿತಿಯನ್ನು ನೀಡಿರುವರೇ ಎಂದು ತಿಳಿಯುವ ಉದ್ದೇಶದಿಂದ ಈ ಪ್ರಶ್ನೆಯನ್ನು ಕೇಳಲಾಗಿದೆ.ಮಾಹಿತಿದಾರರ ಹೇಳಿಕೆಯನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.


ಕೋಷ್ಟಕ 16

ಸಾಲಕೊಡುವ ಮೊದಲು ಬ್ಯಾಂಕ್‌ನವರು ಸರಿಯಾಗಿ ಮಾಹಿತಿ ನೀಡಿರುವರೇ

ಮಾಹಿತಿ	ಮಾಹಿತಿದಾರರ ಸಂಖ್ಯೆ	ಪ್ರತಿಶತ
ಹೌದು	55	69.00
ಇಲ್ಲ	25	31.00
ಒಟ್ಟು	**80**	**100.00**

ನಕ್ಷೆ 16

ಸಾಲಕೊಡುವ ಮೊದಲು ಬ್ಯಾಂಕ್‌ನವರು ಸರಿಯಾಗಿ ಮಾಹಿತಿ ನೀಡಿರುವರೇ



ಈ ಮೇಲಿನ ಕೋಷ್ಟಕದ ಪ್ರಕಾರ 80 ಮಾಹಿತಿದಾರರಿದ್ದು ಅವರಲ್ಲಿ 55 ಜನರು ಬ್ಯಾಂಕ್‌ನವರು ಸರಿಯಾದ ಮಾಹಿತಿ ನೀಡಿದ್ದಾರೆ ಎಂದು ಹೇಳಿದರೆ, ಇನ್ನುಳಿದ 25 ಜನ ಬ್ಯಾಂಕ್‌ನವರು ಸರಿಯಾದ ಮಾಹಿತಿ ನೀಡಿಲ್ಲ ಎಂಬ ಅಭಿಪ್ರಾಯ ಹಂಚಿಕೊಂಡಿರುತ್ತಾರೆ.

ಬ್ಯಾಂಕ್‌ನ ಸೇವೆಯ ಬಗ್ಗೆ ಮಾಹಿತಿದಾರನ ಅಭಿಪ್ರಾಯ

ಶಿಕ್ಷಣ ಸಾಲ ಮತ್ತು ಇತರೆ ಬ್ಯಾಂಕ್‌ನ ಸೇವೆಗಳ ಬಗ್ಗೆ ಮಾಹಿತಿದಾರನ ಮನಸ್ಥಿತಿಯನ್ನು ಅರಿಯುವ ಉದ್ದೇಶದಿಂದ ಈ ಪ್ರಶ್ನೆಯನ್ನುಕೇಳಲಾಗಿದ್ದು ಮಾಹಿತಿದಾರನ ಅಭಿಪ್ರಾಯವನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

ಕೋಷ್ಟಕ 17


ಸೇವೆಯ ಬಗ್ಗೆ ಮಾಹಿತಿದಾರನ ಅಭಿಪ್ರಾಯ

ಒಟ್ಟಾರೆ ಸೇವೆಯ ಬಗೆಗೆ ತೃಪ್ತಿ	ಮಾಹಿತಿದಾರರ ಸಂಖ್ಯೆ	ಪ್ರತಿಶತ
ತೃಪ್ತಿಕರ	70	88.00
ತೃಪ್ತಿಕರವಲ್ಲ	10	12.00
ಒಟ್ಟು	**80**	**100.00**

ಆಕರ: ಪ್ರಾಥಮಿಕ ಸಮೀಕ್ಷೆ

ನಕ್ಷೆ 17

ಸೇವೆಯ ಬಗ್ಗೆ ಮಾಹಿತಿದಾರನ ಅಭಿಪ್ರಾಯ



ಈ ಮೇಲಿನ ಕೋಷ್ಟಕದ ಪ್ರಕಾರ 80 ಜನ ಮಾಹಿತಿದಾರರಲ್ಲಿ 70 ಜನ ಬ್ಯಾಂಕ್‌ನ ಒಟ್ಟಾರೆ ಸೇವಯನ್ನು ಮೆಚ್ಚಿದರೆ ಇನ್ನುಳಿದ 10 ಜನ ಅತೃಪ್ತಿಯನ್ನು ತೋರ್ಪಡಿಸಿದ್ದಾರೆ.

ಇತರರಿಗೆ ಬ್ಯಾಂಕ್‌ನ ಶಿಕ್ಷಣ ಸಾಲ ಯೋಜನೆಯ ಬಗೆಗೆ ತಿಳಿಸುವ ಇಚ್ಛೆ

ಶಿಕ್ಷಣ ಸಾಲದ ಫಲಾನುಭವಿಗಳ ತೃಪ್ತಿ ಮತ್ತು ಅವರು ಪಡೆದ ಸಹಾಯದಿಂದ ಅವರಲ್ಲಿರುವ ಸಂತೋಷವನ್ನು ಹಾಗೂ ಇತರರೂ ಈ ಪ್ರಯೋಜನ ಪಡೆಯಲೀ ಎಂಬ ಆಶೆ ಹೊಂದಿರುವರೇ ಅಥವಾ ಈ ಯೋಜನೆ ಅಷ್ಟು ಪ್ರಯೋಜನ ನೀಡಿಲ್ಲವೇ ಎಂಬ ಬಗ್ಗೆ ತಿಳಿಯುವ ಕುತೂಹಲದಿಂದ ಈ ಪ್ರಶ್ನೆ ಕೇಳಲಾಗಿದ್ದು ಮಾಹಿತಿದಾರರ ಉತ್ತರವನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

ಕೋಷ್ಟಕ 18


ಮಾಹಿತಿದಾರರು ಇತರರಿಗೆ ಈ ಹೋಜನೆಯನ್ನು ತಿಳಿಸಲು ಬಯಸುವರೇ

ಶಿಫಾರಸ್ಸು ಮಾಡುವಿರೇ	ಮಾಹಿತಿದಾರರ ಸಂಖ್ಯೆ	ಪ್ರತಿಶತ
ಹೌದು	50	63.00
ಇಲ್ಲ	30	37.00
ಒಟ್ಟು	**80**	**100.00**

ಆಕರ: ಪ್ರಾಥಮಿಕ ಸಮೀಕ್ಷೆ

ನಕ್ಷೆ 18

ಮಾಹಿತಿದಾರರು ಇತರರಿಗೆ ಈ ಹೋಜನೆಯನ್ನು ತಿಳಿಸಲು ಬಯಸುವರೇ



ಈ ಮೇಲಿನ ಕೋಷ್ಟಕದ ಪ್ರಕಾರ 80 ಜನ ಮಾಹಿತಿದಾರರಲ್ಲಿ 50 ಜನರು ಬೇರೆಯವರಿಗೆ ನಾವು ಬ್ಯಾಂಕ್ ಶಿಕ್ಷಣ ಸಾಲವನ್ನು ಶಿಫಾರಸ್ಸು ಮಾಡುತ್ತೇವೆ ಎಂದು ಹೇಳಿದರೆ ಇನ್ನುಳಿದ 30 ಮಂದಿ ತಾವು ಇತರರಿಗೆ ಶಿಫಾರಸ್ಸು ಮಾಡುವುದಿಲ್ಲ ಎಂದು ಹೇಳಿದ್ದಾರೆ.

ಸಾಲ ಮರುಪಾವತಿಯ ಅವಧಿ

ಮಾಹಿತಿದಾರರು ಪಡೆದ ಶಿಕ್ಷಣ ಸಾಲವನ್ನು ಮರುಪಾವತಿಸಲು ನಿಗದಿ ಪಡಿಸಿದ ಅವಧಿಯ ಬಗ್ಗೆ ಅವರ ಅಭಿಪ್ರಾಯ ಸಂಗ್ರಹಿಸುವ ನಿಟ್ಟಿನಲ್ಲಿ ಈ ಪ್ರಶ್ನೆಯನ್ನು ಕೇಳಲಾಗಿದ್ದು ಇದಕ್ಕೆ ಅವರು ಕೊಟ್ಟ ಉತ್ತರವನ್ನು ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ.

ಕೋಷ್ಟಕ 19


ಸಾಲ ಮರುಪಾವತಿಸುವ ಅವಧಿಯ ಬಗ್ಗೆ ಅಭಿಪ್ರಾಯ

ಮರುಪಾವತಿಸುವ ಅವಧಿ	ಮಾಹಿತಿದಾರರ ಸಂಖ್ಯೆ	ಪ್ರತಿಶತ
ತುಂಬಾ ಜಾಸ್ತಿ	10	12.00
ಕಡಿಮೆ	20	25.00
ಸಾಕಾಗುವಷ್ಟು ಅವಕಾಶ	50	63.00
ಒಟ್ಟು	**80**	**100.00**

ಆಕರ: ಪ್ರಾಥಮಿಕ ಸಮೀಕ್ಷೆ

ನಕ್ಷೆ 19

ಸಾಲ ಮರುಪಾವತಿಸುವ ಅವಧಿಯ ಬಗ್ಗೆ ಅಭಿಪ್ರಾಯ



ಈ ಮೇಲಿನ ಕೋಷ್ಟಕದ ಪ್ರಕಾರ ಒಟ್ಟು 80 ಜನ ಮಾಹಿತಿದರರಿದ್ದು ಅವರಲ್ಲಿ 10 ಜನ ಸಾಲ ಮರುಪಾವತಿಸುವ ಅವಧಿ ತುಂಬಾ ಜಾಸ್ತಿ ಆಯಿತು ಎಂದು ಅಭಿಪ್ರಾಯ ಪಟ್ಟರೆ 20 ಜನರು ಕಡಿಮೆಯಾಯಿತು ಎಂಬ ಅಭಿಪ್ರಾಯ ಪಟ್ಟಿದ್ದಾರೆ.ಇನ್ನುಳಿದ 50 ಜನರು ಸಾಕಾಗುವಷ್ಟು ಕಾಲಾವಕಾಶ ಇದೆ ಎಂಬ ಅಭಿಪ್ರಾಯವನ್ನು ನೀಡಿದ್ದಾರೆ.

ಶಿಕ್ಷಣ ಸಾಲ ಪಡೆದಿರುವುದರಿಂದ ಆದ ಅನುಕೂಲಗಳು

ಶಿಕ್ಷಣ ಸಾಲ ಯೋಜನೆಯಿಂದಲಾಗಿ ಮಾಹಿತಿದಾರರಿಗೆ ಆದ ಅನುಕೂಲಗಳ ಬಗ್ಗೆ ತಿಳಿಯುವ ಉದ್ದೇಶದಿಂದ ಈ ಪ್ರಶ್ನೆಯನ್ನು ಕೇಳಲಾಗಿದ್ದು ಅವರ ಅಭಿಪ್ರಾಯವನ್ನು ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ.


ಕೋಷ್ಟಕ 20

ಶಿಕ್ಷಣ ಸಾಲ ಪಡೆದಿರುವುದರಿಂದ ಆದ ಅನುಕೂಲಗಳು

ಅನುಕೂಲಗಳು	ಮಾಹಿತಿದಾರರ ಸಂಖ್ಯೆ	ಪ್ರತಿಶತ
1. ಸ್ವತಂತ್ರವಾಗಿ ಪದವಿ ಪಡೆಯಲು ಅನುಕೂಲವಾಯಿತು	18	22.00
2. ಮುಂದಿನ ಶಿಕ್ಷಣಕ್ಕೆ ಅನುಕೂಲವಾಯಿತು	13	16.00
3. ಬೇಗನೇ ಉದ್ಯೋಗ ಪಡೆಯಲು ಅನುಕೂಲವಾಯಿತು	15	19.00
4. ಮನೆಯ ಅಭಿವೃದ್ಧಿಯಾಯಿತು	23	29.00
5. ಆಧಾರ ತೆರಿಗೆಗೆ ಸಹಕಾರಿಯಾಯಿತು	03	04.00
6. ಮನೆಯಲ್ಲಿ ಇತರರಿಗೆ ಶಿಕ್ಷಣ ನೀಡಲು ಸಹಕಾರಿಯಯಿತು	08	10.00
ಒಟ್ಟು	**80**	**100.00**

ನಕ್ಷೆ 20

ಶಿಕ್ಷಣ ಸಾಲ ಪಡೆದಿರುವುದರಿಂದ ಆದ ಅನುಕೂಲಗಳು



ಈ ಮೇಲಿನ ಕೋಷ್ಟಕದ ಪ್ರಕಾರ 80 ಜನ ಮಾಹಿತಿದಾರರಲ್ಲಿ 18 ಜನರು ಸ್ವತಂತ್ರವಾಗಿ ಶಿಕ್ಷಣ ಪಡೆಯಲು ಶಿಕ್ಷಣ ಸಾಲದಿಂದ ಅನುಕೂಲವಾಯಿತು ಎಂದರೆ, 13 ಜನರು ಮುಂದಿನ ಶಿಕ್ಷಣಕ್ಕೆ ಅನುಕೂಲವಾಯಿತು ಎಂದು ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ.15 ಜನರು ಬೇಗನೇ ಉದ್ಯೋಗ ಪಡೆಯಲು ಅನುಕೂಲವಾಯಿತು ಎಂಬ ಅಭಿಪ್ರಾಯ ನೀಡಿದ್ದಾರೆ.23 ಜನರು ಮನೆಯ ಅಭಿವೃದ್ಧಿಯಾಯಿತು ಎಂಬ ಒಂದು ಉತ್ತಮ ಅಭಿಪ್ರಾಯವನ್ನು ನೀಡಿದ್ದಾರೆ.3 ಜನರು ಆದಾಯ ತೆರಿಗೆಗೆ ಅನುಕೂಲವಾಯಿತು ಎಂದರೆ ಇನ್ನುಳಿದ 8 ಮಂದಿ ಮನೆಯಲ್ಲಿ ಇತರರಿಗೆ ಶಿಕ್ಷಣ ನೀಡಲು ಸಹಕಾರಿಯಾಯಿತು ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಶಿಕ್ಷಣ ಸಾಲ ಯೋಜನೆಯನ್ನು ಇನ್ನೂ ಉತ್ತಮಗೊಳಿಸಲು ಮಾಹಿತಿದಾರರು ನೀಡಿದ ಸಲಹೆ

ಶಿಕ್ಷಣ ಸಾಲ ಯೋಜನೆಯಿಂದ ವಿದ್ಯಾರ್ಥಿಗಳ ಭವಿಷ್ಯ ಉಜ್ವಲವಾಗಿದ್ದು ಇದರಿಂದ ತಮ್ಮ ತಮ್ಮ ಮನೆಗಳ ಅಭಿವೃದ್ಧಿಯಾಗಿದೆ ಮತ್ತು ಆರ್ಥಿಕವಾಗಿ ಸದೃಢಗೊಂಡಿದ್ದೇವೆ ಎಂದು ಮಾಹಿತಿದಾರರು ತಮ್ಮ ಅನಿಸಿಕೆಯನ್ನು ಹಂಚಿಕೊಂಡಿದ್ದಾರೆ.

ಶಿಕ್ಷಣ ಸಾಲ ಯೋಜನೆಯಲ್ಲಾಗಬೇಕಾದ ಬದಲಾವಣೆಗಳ ಬಗ್ಗೆ ಅಭಿಪ್ರಾಯ ಕೇಳಿದಾಗ 80 ಜನ ಮಾಹಿತಿದಾರರಲ್ಲಿ 30 ಜನ ಈಗ ಇರುವ ಯೋಜನೆಯು ಉತ್ತಮವಾಗಿದೆ.ಯಾವ ಹೆಚ್ಚಿನ ಮಾರ್ಪಾಡಿನ ಅಗತ್ಯ ಇಲ್ಲ. ಸ್ವಲ್ಪ ಬಡ್ಡಿದರ ಇಳಿದರೆ ಚೆನ್ನಾಗಿರುತ್ತಿತ್ತು ಎಂಬ ಅಭಿಪ್ರಾಯ ಅವರಲ್ಲಿತ್ತು.ಇನ್ನುಳಿದ 50 ಮಂದಿ ಬ್ಯಾಂಕ್‌ನ ಶಿಕ್ಷಣ ಸಾಲ ಯೋಜನೆ ಪ್ರತಿಯೊಬ್ಬ ವಿದ್ಯಾರ್ಥಿಗೆ ಸಿಗುವಂತಾಗಬೇಕು.ಬಡ್ಡಿದರ ಕಡಿಮೆಯಾಗಬೇಕು. ಬ್ಯಾಂಕ್‌ನವರು ಹೆಚ್ಚಿನ ಪ್ರೋತ್ಸಾಹವನ್ನು ಮಕ್ಕಳಿಗೆ ನೀಡಿದಲ್ಲಿ ವಿದ್ಯಾರ್ಥಿಗಳು ಚೆನ್ನಾಗಿ ಓದುತ್ತಾರೆ ಮತ್ತು ತಮ್ಮ ಹಣಕಾಸಿನ ಸಮಸ್ಯೆಯಿಂದ ಶಿಕ್ಷಣ ಮೊಟಕುಗೊಳಿಸುವವರ ಸಂಖ್ಯೆ ಕಡಿಮೆ ಮಾಡಲು ಸಾಧ್ಯ ಅಲ್ಲದೇ ವಿದ್ಯಾರ್ಥಿಗಳು ಆತ್ಮಹತ್ಯೆಯಂತಹ ಭೇದ ಭಾವನೆಯನ್ನು ತೊರೆದು ಉತ್ತಮ ಜೀವನ ನಿರ್ವಹಿಸುವಂತಹ ಯೋಚನೆ ಮಾಡುತ್ತಾರೆ ಎಂಬಂತಹ ಉತ್ತಮ ಸಲಹೆ ಸೂಚನೆಯನ್ನು ನೀಡಿದ್ದಾರೆ.

ಅಧ್ಯಾಯ – ೫

ಸಾರಾಂಶ, ಉಪಸಂಹಾರ ಮತ್ತು
ಮುಂದಿನ ಅಧ್ಯಯನಕ್ಕೆ ಸಲಹೆಗಳು

ಅಧ್ಯಾಯ ೫

ಸಾರಾಂಶ, ಉಪಸಂಹಾರ ಮತ್ತು ಮುಂದಿನ ಅಧ್ಯಯನಕ್ಕೆ ಸಲಹೆಗಳು

ಪ್ರಸ್ತುತ ಕೈಗೊಂಡ ಉನ್ನತ ಶಿಕ್ಷಣ ಸಾಲ ಸೌಲಭ್ಯಗಳ ಅಧ್ಯಯನಕ್ಕಾಗಿ ಗ್ರಂಥಗಳು, ಲೇಖನಗಳು, ವರದಿಗಳು, ಗುಂಪು ಚರ್ಚೆಗಳು, ಅವಲೋಕನ ಮತ್ತು ಪೂರ್ವಾಧ್ಯಾಯ ಪರಾಮರ್ಶೆಯ ಮೂಲಕ ವಿಶ್ಲೇಷಣೆ ಮಾಡುವುದರ ಜೊತೆಗೆ ಕ್ಷೇತ್ರ ಕಾರ್ಯಾಧಾರಿತ ಅಧ್ಯಯನವನ್ನು ಮಾಡಲಾಗಿದೆ.ಪ್ರಸ್ತುತ ಭಾಗ ಅಧ್ಯಯನದ ಕೊನೆಯ ಅಧ್ಯಾಯವಾಗಿರುವುದರಿಂದ ಅಧ್ಯಯನದ ಫಲಿತಗಳು, ಉಪಸಂಹಾರ ಹಾಗೂ ಮುಂದಿನ ಅಧ್ಯಯನಕ್ಕಾಗಿ ಸಲಹೆಗಳನ್ನು ಒಳಗೊಂಡಿದೆ.

- ಅಂಕಿ ಅಂಶಗಳನ್ನು ಗಮನಿಸಿದಾಗ ಶೇಕಡಾ 44% ರಷ್ಟು ಮಾಹಿತಿದಾರರು 20–25 ವಯೋಮಾನದ ಗುಂಪಿಗೆ ಸೇರಿದವರಾಗಿದ್ದಾರೆ.

- ಈ ಅಧ್ಯಯನದಲ್ಲಿ ಒಟ್ಟು ಮಾಹಿತಿದಾರರಲ್ಲಿ ಶೇಕಡಾ 63% ರಷ್ಟು ಮಾಹಿತಿದಾರರು ಪುರುಷರಾಗಿದ್ದಾರೆ.

- ಒಟ್ಟು 80 ಜನ ಮಾಹಿತಿದಾರರಲ್ಲಿ 37% ಜನರು ಎಂ.ಬಿ.ಎ. ಪದವಿ ಪಡೆಯುವ ಉದ್ದೇಶದಿಂದ ಶಿಕ್ಷಣ ಸಾಲವನ್ನು ಪಡೆದರೆ, 25% ಜನರು ತಾಂತ್ರಿಕ ಶಿಕ್ಷಣ ಪದವಿ ಪಡೆಯಲು ಸಾಲ ಪಡೆದಿದ್ದಾರೆ. ಇನ್ನು 20% ಜನರು ದಾದಿ ಶಿಕ್ಷಣ ಪಡೆಯಲು ಹಾಗೂ 18% ಜನರು ಡಿಪ್ಲೊಮಾ ಪದವಿ ಪಡೆಯಲು ಶಿಕ್ಷಣ ಸಾಲ ಪಡೆದಿದ್ದಾರೆ. ಇದರಿಂದ ನಮಗೆ ತಿಳಿಯುವುದೇನೆಂದರೆ ಸ್ನಾತಕೋತ್ತರ ಮತ್ತು ವೃತ್ತಿಪರ ಶಿಕ್ಷಣ ಪಡೆಯಲು ಹೆಚ್ಚು ಜನರು ಶಿಕ್ಷಣ ಸಾಲ ಯೋಜನೆಯನ್ನು ಪಡೆಯುತ್ತಾರೆಂದು ಈ ಅಧ್ಯಯನದಿಂದ ಕಂಡುಕೊಳ್ಳಬಹುದು.

- ಶಿಕ್ಷಣ ಸಾಲ ಪಡೆದ ಮೊತ್ತವನ್ನು ಗಮನಿಸುವುದಾದರೆ ಒಟ್ಟು 80 ಜನ ಮಾಹಿತಿದಾರರಲ್ಲಿ 22% ಜನರು 2 ಲಕ್ಷಕ್ಕಿಂತ ಕಡಿಮೆ ಸಾಲ ಪಡೆದಿದ್ದಾರೆ, ಇನ್ನುಳಿದಂತೆ 38% ಜನರು 2 ರಿಂದ 5 ಲಕ್ಷದ ಒಳಗೆ ಸಾಲ ಪಡೆದರೆ, 25% ಜನರು 5 ರಿಂದ 7 ಲಕ್ಷದೊಳಗೆ ಸಾಲ ಪಡೆದಿದ್ದಾರೆ. 15% ಜನ 7 ಲಕ್ಷಕ್ಕಿಂತ ಹೆಚ್ಚು ಸಾಲ ಪಡೆದಿದ್ದಾರೆ. ಇದರಿಂದ ನಮಗೆ ತಿಳಿಯುವ ವಿಚಾರ 2 ರಿಂದ 5 ಲಕ್ಷದ ಒಳಗೆ ಶಿಕ್ಷಣ ಸಾಲದ ಮೊತ್ತವನ್ನು ಹೆಚ್ಚು ಜನರು ಪಡೆದಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ.

- ಮಾಹಿತಿದಾರ ಕುಟುಂಬದ ಒಟ್ಟು ಆದಾಯದ ಬಗ್ಗೆ ತಿಳಿಯುವುದಾದರೆ ಒಟ್ಟು 80 ಜನ ಮಾಹಿತಿದಾರರಲ್ಲಿ 23% ಜನರ ಆದಾಯವು 50 ಸಾವಿರಕ್ಕಿಂತ ಕಡಿಮೆ ಇದೆ. 37% ಜನರ ಆದಾಯವು 50 ಸಾವಿರದಿಂದ 1 ಲಕ್ಷದ ವರೆಗೆ ಇದೆ, 28% ಜನರ ಆದಾಯವು 1 ಲಕ್ಷದ 50

ಸಾವಿರದಿಂದ 2 ಲಕ್ಷದ ನಡುವೆ ಇದೆ. ಇನ್ನು 12% ಜನರ ಅದಾಯವು 2 ಲಕ್ಷವನ್ನು ಮೀರಿದೆ. ಇಲ್ಲಿ 50 ಸಾವಿರದಿಂದ 1 ಲಕ್ಷ ಆದಾಯ ಹೊಂದಿದವರ ಸಂಖ್ಯೆಯು ಹೆಚ್ಚಾಗಿರುವುದನ್ನು ನಾವು ನೋಡಬಹುದಾಗಿದೆ.

- ಶಿಕ್ಷಣ ಸಾಲ ಯೋಜನೆಗಳ ಬಗ್ಗೆ ಮಾಹಿತಿದಾರರು ತಿಳಿದುಕೊಂಡ ಬಗೆಯನ್ನು ಗಮನಿಸುವುದಾದರೆ 80 ಜನರಲ್ಲಿ 35% ಜನರು ತಮ್ಮ ಗೆಳೆಯರು ಮತ್ತು ಸಂಬಂಧಿಕರಿಂದ ಮಾಹಿತಿ ಪಡೆದಿದ್ದಾರೆ. 25% ಜನರು ಜಾಹೀರಾತಿನ ಮುಖೇನ ಮಾಹಿತಿ ಪಡೆದಿದ್ದಾರೆ. 23% ಜನರು ಬ್ಯಾಂಕ್ ಸಿಂಬ್ಬಂಧಿಗಳ ಮುಖೇನ ಮಾಹಿತಿ ಸಂಗ್ರಹಿಸಿದ್ದಾರೆ. ಇನ್ನುಳಿದ 17% ಜನರು ಇತರೆ ಮೂಲಗಳಿಂದ ಮಾಹಿತಿ ಪಡೆದಿದ್ದಾರೆ. ಈ ವಿಚಾರದಲ್ಲಿ ಮಾಹಿತಿದಾರರು ಹೆಚ್ಚಾಗಿ ತಮ್ಮ ಬಂಧು ಬಳಗದ ಮುಖೇನ ಮಾಹಿತಿಯನ್ನು ಪಡೆದಿದ್ದಾರೆಂಬುದು ಸ್ಪಷ್ಟವಾಗುತ್ತದೆ.

- ಶಿಕ್ಷಣ ಸಾಲ ಪಡೆಯಲು ಮುಖ್ಯವಾಗಿ ಪ್ರೇರಣೆ ಅಥವಾ ಆಸಕ್ತಿ ಬಹು ಮುಖ್ಯವಾಗಿರುತ್ತಾದೆ. ಈ ಅಧ್ಯಯನದಲ್ಲಿ ಕಂಡುಬಂದಂತೆ 80 ಜನ ಮಾಹಿತಿದಾರರಲ್ಲಿ 28% ಜನರು ಸ್ಪರ್ಧಾತ್ಮಕ ಬಡ್ಡಿದರದಿಂದಾಗಿ ಪ್ರೇರಣೆ ಹೊಂದಿರುವುದಾಗಿ ಹೇಳಿದರೆ, 37% ಜನರು ಬ್ಯಾಂಕ್‌ನೊಂದಿಗಿನ ಉತ್ತಮ ಸಂಬಂಧದಿಂದಲಾಗಿ ಸಾಲ ಪಡೆಯಲು ಆಸಕ್ತಿ ಮೂಡಿತು ಎಂದಿದ್ದಾರೆ. 23% ಜನರು ಬ್ಯಾಂಕ್‌ನ ಶಾಖೆಯು ಮನೆಯ ಸಮೀಪ ಇರುವುದರಿಂದ ಹೆಚ್ಚು ಆಸಕ್ತಿ ತೋರಿರುವುದಾಗಿ ಅಭಿಪ್ರಾಯ ಪಟ್ಟರೆ 12% ಜನರು ಸ್ನೇಹಿತರ ಮತ್ತು ಸಂಬಂಧಿಕರ ಸಿಫಾರಸ್ಸಿನ ಮೇಲೆ ಸಾಲ ಪಡೆಯುವ ಆಸಕ್ತಿ ಬಂದಿತು ಎಂದಿದ್ದಾರೆ. ಇಲ್ಲಿ 37% ಜನರು ಬ್ಯಾಂಕ್‌ನೊಂದಿಗಿನ ಉತ್ತಮ ಸಂಬಂಧದಿಂದಲಾಗಿ ಸಾಲ ಪಡೆಯಲು ಪ್ರೇರಣೆ ಸಿಕ್ಕಿತು ಎಂಬುದಾಗಿ ಹೇಳಿರುವುದು ಅತೀ ಹೆಚ್ಚಿನ ಮಾಹಿತಿದಾರರಾಗಿದ್ದಾರೆ.

- ಬ್ಯಾಂಕ್‌ನ ಬಡ್ಡಿದರದ ಬಗ್ಗೆ ಮಾಹಿತಿದಾರರು ಈ ರೀತಿ ಅಭಿಪ್ರಾಯ ನೀಡಿದ್ದಾರೆ. 25% ಜನರು ಬಡ್ಡಿದರ ಹೆಚ್ಚು ಎಂದಿದ್ದಾರೆ. 37% ಜನರು ಬಡ್ಡಿದರ ಕಡಿಮೆ ಎಂದರೆ 38% ಜನರು ಸಾಮಾನ್ಯ ಎಂಬ ಮಾಹಿತಿ ನೀಡಿರುತ್ತಾರೆ. ಇಲ್ಲಿ ಸಾಮಾನ್ಯ ಮತ್ತು ಕಡಿಮೆ ಎಂಬ ಅಭಿಪ್ರಾಯ ಮಾಹಿತಿದಾರರಲ್ಲಿ ಹೆಚ್ಚಾಗಿ ಕಂಡು ಬಂದಿದೆ.

- ಮಾಹಿತಿದಾರರು ಸಂತೃಪ್ತಿ ಹೊಂದಿದ್ದಾರೆಯೇ ಎಂದು ತಿಳಿಯಲು 80 ಜನ ಮಾಹಿತಿದಾರರನ್ನು ವಿಚಾರಿಸಿದಾಗ 56% ಜನರು ಹೌದು ಎಂಬ ಮಾಹಿತಿ ನೀಡಿದರೆ 44% ಜನರು ಇಲ್ಲ ಎಂದಿದ್ದಾರೆ. ಇಲ್ಲಿ ಸಂತೃಪ್ತಿ ಹೊಂದಿದ್ದೇವೆ ಎಂಬ ಅಭಿಪ್ರಾಯ ನೀಡಿದ ಮಾಹಿತಿದಾರರು ಹೆಚ್ಚು ಜನ ಕಂಡುಬರುತ್ತಿದ್ದಾರೆ.

- ಸಾಲ ಪಡೆಯುವಲ್ಲಿನ ಅಡಚಣೆಗಳ ಬಗ್ಗೆ ತಿಳಿಯಲು 80 ಜನ ಮಾಹಿತಿದಾರರನ್ನು ಸಂದರ್ಶಿಸಿದಾಗ ಅವರಲ್ಲಿ 25% ಜನರು ತುಂಬಾ ಉದ್ದನೆಯ ಕಾರ್ಯ ವಿಧಾನ ಎಂದು

ಅಭಿಪ್ರಾಯ ಪಟ್ಟರೆ, 19% ಜನರು ಸಿಬ್ಬಂಧಿಗಳ ಅಹಿತ ಮನೋಧರ್ಮದಿಂದ ಬೇಸರ ವ್ಯಕ್ತಪಡಿಸಿದರೆ ಇನ್ನುಳಿದ 56% ಜನ ಇತರೆ ಅಡಚಣೆಗಳು ಎಂದು ತಮ್ಮ ಅಭಿಪ್ರಾಯ ತಿಳಿಸಿದ್ದಾರೆ. ಇಲ್ಲಿ ಹೆಚ್ಚಿನ ಮಾಹಿತಿದಾರರಿಗೆ ಇತರೆ ಅಡಚಣೆಗಳು ಹೆಚ್ಚಾಗಿ ಕಂಡುಬಂದಿದ್ದು ಯಾವುದೇ ನಿಖರ ಮಾಹಿತಿಯನ್ನು ಒದಗಿಸಿಲ್ಲ.

- ಬ್ಯಾಂಕ್‌ನ ಸಿಬ್ಬಂಧಿಗಳು, ಮಾಹಿತಿದಾರರು ಶಿಕ್ಷಣ ಸಾಲ ಪಡೆಯಲು ಹೊದಾಗ ಅವರು ಸ್ಪಂಧಿಸಿದ ರೀತಿಯ ಬಗೆಗೆ ಕೇಳಿದಾಗ 80 ಜನ ಮಾಹಿತಿದಾರರಲ್ಲಿ 63% ಜನರು ಉತ್ತಮವಾಗಿ ಸ್ಪಂದಿಸಿದ್ದಾರೆ ಎಂದು ಅಭಿಪ್ರಾಯ ತಿಳಿಸಿದರೆ 37% ಜನರು ಉತ್ತಮವಾಗಿಲ್ಲ ಎಂದು ತಿಳಿಸಿದ್ದಾರೆ. ಇಲ್ಲಿ ಹೆಚ್ಚಿನ ಜನರು ಉತ್ತಮವಾದ ಸೇವೆಯನ್ನು ಪಡೆದಿರುವುದಾಗಿ ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ.

- ಬ್ಯಾಂಕ್‌ನಿಂದ ಪರಿಶೀಲನಾ ನಿಯತಕಾಲಿಕೆಯು ತಮಗೆ ಬರುತ್ತದೆಯೇ ಎಂದು ಮಾಹಿತಿದಾರರಲ್ಲಿ ಪ್ರಶ್ನಿಸಿದಾಗ ಒಟ್ಟಾರೆ 80 ಜನ ಮಾಹಿತಿದಾರರಲ್ಲಿ 69% ಜನರು ಹೌದು ಎಂದು ನಕಾರಾತ್ಮಕವಾಗಿ ಉತ್ತರಿಸಿದರೆ, ಇನ್ನುಳಿದ 31% ಜನರು ಪರಿಶೀಲನಾ ನಿಯತಕಾಲಿಕೆಯು ಬರುವುದಿಲ್ಲ ಎಂಬ ಮಾಹಿತಿ ನೀಡಿದ್ದಾರೆ. ಆದರೆ ಇಲ್ಲಿ ನಿಯತಕಾಲಿಕೆ ಬರುತ್ತದೆ ಎಂದು ಹೇಳಿದವರ ಸಂಖ್ಯೆಯು ಇಲ್ಲ ಅಂದವರಿಗಿಂತ ಎರಡು ಪಟ್ಟು ಹೆಚ್ಚಿದೆ.

- ಮಾಹಿತಿದಾರರಲ್ಲಿ ಹಣದುಬ್ಬರದ ಭಾದೆಯು ತಮಗೂ ತಟ್ಟಿದೆಯೇ ಎಂದು ಕೇಳಿದಾಗ 53% ಜನರು ಹೌದು ಎಂದು ಉತ್ತರಿಸಿದರೆ 47% ಜನರು ಇಲ್ಲ ಎಂಬ ಉತ್ತರವನ್ನು ನೀಡಿದ್ದು ಇದರಿಂದ ನಾವು ತಿಳಿಯುವುದೇನೆಂದರೆ ಹಣದುಬ್ಬರದ ಭಾಷೆಯು ಮಾಹಿತಿದಾರರಿಗೆ ತಟ್ಟಿದೆ ಎಂದು ಹೌದು ಎಂಬ ಉತ್ತರ ಕೊಟ್ಟವರ ಸಂಖ್ಯೆಯ ಮೇರೆಗೆ ತಿಳಿಯಬಹುದಾಗಿದೆ.

- ಶಿಕ್ಷಣ ಸಾಲ ಪಡೆದ ಆವೃತ್ತಿಯ ಬಗ್ಗೆ 80 ಜನ ಮಾಹಿತಿದಾರರ ಬಳಿ ಕೇಳಿದಾಗ ಅವರಲ್ಲಿ 18% ಜನರು ಹೌದು ನಾವು ಈ ಮೊದಲು ಶಿಕ್ಷಣ ಸಾಲ ಸೌಲಭ್ಯವನ್ನು ಪಡೆದಿದ್ದೆವು ಎಂದು ಉತ್ತರಿಸಿದರೆ, 88% ಜನರು ಇಲ್ಲ ಇದೇ ಮೊದಲ ಬಾರಿಗೆ ಶಿಕ್ಷಣ ಸಾಲ ಪಡೆಯುತ್ತಿದ್ದೇವೆ ಎಂದು ತಿಳಿಸಿದ್ದಾರೆ. ಇದರಿಂದ ನಮಗೆ ತಿಳಿಯುವುದೇನೆಂದರೆ ಜನರು ಹೆಚ್ಚಾಗಿ ಒಮ್ಮೆ ಮಾತ್ರ ಉನ್ನತ ಶಿಕ್ಷಣಕ್ಕಾಗಿ ಶಿಕ್ಷಣ ಸಾಲ ಸೌಲಭ್ಯದ ಮೊರೆ ಹೋಗುತ್ತಾರೆ. ಪದೇ ಪದೇ ಹೋಗುವುದಿಲ್ಲ ಎಂದೂ ಈ ಅಧ್ಯಯನದಿಂದ ಕಾಣಬಹುದು.

- ಹಾಗೆಯೇ ಬ್ಯಾಂಕ್‌ಗಳ ಶಿಕ್ಷಣ ಸಾಲ ಯೋಜನೆಯ ಗುಣಮಟ್ಟದ ಬಗ್ಗೆ ಮಾಹಿತಿದಾರರಲ್ಲಿ ಕೇಳಿದಾಗ ಒಟ್ಟು 80 ಜನರಲ್ಲಿ 12% ಜನರು ಕಳಪೆ ಎಂಬ ಅಭಿಪ್ರಾಯ ಕೊಟ್ಟರೆ, 25% ಜನರು ಸಾಮಾನ್ಯ ಎಂಬ ಅಭಿಪ್ರಾಯ ಹೊಂದಿದ್ದಾರೆ. ಇನ್ನು 40% ಜನರು ಉತ್ತಮ ಗುಣಮಟ್ಟ ಹೊಂದಿದೆ ಎಂದರೆ, ಇನ್ನುಳಿದ 23% ಜನರು ಅತ್ಯುತ್ತಮ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಇಲ್ಲಿ ನಾವು ಕಂಡುಕೊಳ್ಳುವುದೇನೆಂದರೆ 80 ಜನರಲ್ಲಿ 40% ಜನರು ಬ್ಯಾಂಕ್‌ನ ಶಿಕ್ಷಣ ಸಾಲ ಸೌಲಭ್ಯ ಯೋಜನೆಯ ಗುಣಮಟ್ಟ ಉತ್ತಮವಾಗಿದೆ ಎಂಬ ಅಭಿಪ್ರಾಯಕ್ಕೆ ಬಂದ ಕಾರಣ ನಾವು ಕೂಡ ಬ್ಯಾಂಕ್‌ನ ಶಿಕ್ಷಣ ಸಾಲ ಸೌಲಭ್ಯ ಉತ್ತಮವಾಗಿದೆ ಎಂದು ಹೇಳಬಹುದಾಗಿದೆ.

- ಸಾಲ ಕೊಡುವ ಮೊದಲು ಬ್ಯಾಂಕ್‌ನವರು ಮಾಹಿತಿ ನೀಡಿರುವರೇ ಎಂಬ ಪ್ರಶ್ನೆಗೆ 69% ಜನರು ಹೌದು ಎಂಬ ಉತ್ತರ ನೀಡಿದರೆ ಉಳಿದ 31% ಜನರು ಇಲ್ಲ ಎಂದು ಉತ್ತರಿಸಿದ್ದು ಇಲ್ಲಿ ಹೆಚ್ಚಿನವರು ಹೇಳುವ ಅಭಿಪ್ರಾಯ ಸಾಲ ಕೊಡುವ ಮೊದಲು ಬ್ಯಾಂಕ್‌ನವರು ಯೋಜನೆಯ ಬಗ್ಗೆ ಸ್ಪಷ್ಟವಾದ ಮಾಹಿತಿ ನೀಡುತ್ತಾರೆ ಎಂಬುವುದಾಗಿದೆ.

- ಬ್ಯಾಂಕ್‌ನ ಸೇವೆಯ ಬಗ್ಗೆ ಮಾಹಿತಿದಾರರಲ್ಲಿ ಕೇಳಿದಾಗ 80 ಜನ ಮಾಹಿತಿದಾರರಲ್ಲಿ 88% ಜನರು ತೃಪ್ತಿಕರ ಎಂಬ ಉತ್ತರ ನೀಡಿದರೆ 12% ಜನರು ತೃಪ್ತಿಕರವಲ್ಲ ಎಂಬ ಉತ್ತರ ನೀಡಿದ್ದು, ಈ ಅಧ್ಯಯನದ ಪ್ರಕಾರ ಹೆಚ್ಚಿನ ಮಾಹಿತಿದಾರರು ಬ್ಯಾಂಕ್‌ನ ಸೇವೆಯ ಬಗ್ಗೆ ತೃಪ್ತಿಯನ್ನು ಹೊಂದಿದ್ದಾರೆ.

- ಮಾಹಿತಿದಾರರಲ್ಲಿ ತಾವು ಈ ಯೋಜನೆಯ ಬಗ್ಗೆ ಇತರರಿಗೆ ತಿಳಿಸುವ ಇಚ್ಛೆಯ ಬಗೆಗೆ ಕೇಳಿದಾಗ 80 ಜನ ಮಾಹಿತಿದಾರರಲ್ಲಿ 63% ಜನರು ಹೌದು ಎಂಬ ಅಭಿಪ್ರಾಯ ಹಂಚಿಕೊಂಡರೆ ಇನ್ನುಳಿದ 37% ಜನರು ತಾವು ಇತರರಿಗೆ ತಿಳಿಸುವುದಿಲ್ಲ ಎಂದು ಉತ್ತರಿಸಿದ್ದಾರೆ. ಈ ಅಧ್ಯಯನದ ಪ್ರಕಾರ ಹೆಚ್ಚಿನ ಮಾಹಿತಿದಾರರು ಇತರರಿಗೆ ಸ್ವ ಇಚ್ಛೆಯಿಂದ ಶಿಕ್ಷಣ ಸಾಲ ಸೌಲಭ್ಯಗಳ ಬಗೆಗೆ ತಿಳಿಸುವ ಇಂಗಿತ ವ್ಯಕ್ತಪಡಿಸಿದ್ದಾರೆ ಎಂದು ತಿಳಿದುಬರುತ್ತದೆ.

- ಮಾಹಿತಿದಾರರಿಗೆ ಸಾಲ ಮರು ಪಾವತಿ ಮಾಡುವ ಅವಧಿಯ ಬಗೆಗೆ ಈ ಅಧ್ಯಯನಕ್ಕಾಗಿ ಕೇಳಿದಾಗ 80 ಜನ ಮಾಹಿತಿದಾರರಲ್ಲಿ 12% ಜನರು ಹೆಚ್ಚು ಅವಧಿ ಎಂಬ ಅಭಿಪ್ರಾಯ ನೀಡಿದರೆ 25% ಜನರು ಕಡಿಮೆ ಎಂಬ ಅಭಿಪ್ರಾಯ ಪಟ್ಟರೆ 63% ಜನರು ಬೇಕಾಗುವಷ್ಟು ಅವಕಾಶವಿದೆ ಎಂಬ ಅಭಿಪ್ರಾಯ ತಿಳಿಸಿದ್ದಾರೆ. ಈ ಅಧ್ಯಯನದಿಂದ ನಮಗೆ ತಿಳಿಯುವುದೇನೆಂದರೆ 80 ಜನ ಮಾಹಿತಿದಾರರಲ್ಲಿ 63% ಜನರು ಬೇಕಾದಷ್ಟು ಸಮಯಾವಕಾಶವಿದೆ ಎಂಬ ಮಾಹಿತಿಯನ್ನು ಕೊಟ್ಟಿದ್ದಾರೆ.

- ಶಿಕ್ಷಣ ಸಾಲ ಪಡೆದಿರುವುದರಿಂದಲಾದ ಅನುಕೂಲತೆಗಳ ಬಗೆಗೆ ಮಾಹಿತಿದಾರರಲ್ಲಿ ಪ್ರಶ್ನಿಸಿದಾಗ ಒಟ್ಟು 80 ಜನ ಮಾಹಿತಿದಾರರಲ್ಲಿ 22% ಜನರು ಸ್ವತ್ಂತ್ರವಾಗಿ ಪದವಿ ಪಡೆಯಲು ಅನುಕೂಲವಾಯಿತು. ಎಂದರೆ, 16% ಜನರು ಮುಂದಿನ ಶಿಕ್ಷಣಕ್ಕೆ ಅನುಕೂಲವಾಯಿತು ಎಂದು ತಿಳಿಸಿದ್ದಾರೆ. 19% ಜನರು ಬೇಗನೇ ಉದ್ಯೋಗ ಪಡೆಯಲು ಅನುಕೂಲವಾಯಿತು ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇನ್ನು 4% ಜನರು ಆದಾಯ ತೆರಿಗೆ ಸಹಕಾರಿಯಾಯಿತು ಎಂದರೆ 10% ಜನರು ಮನೆಯ ಇತರರಿಗೆ ಶಿಕ್ಷಣ ನೀಡಲು ಸಹಕಾರಿಯಾಯಿತು ಎಂದಿದ್ದಾರೆ.

ಈ ಅಧ್ಯಯನದಿಂದ ನಮಗೆ ಸ್ಪಷ್ಟವಾಗುವುದೆಂದರೆ ಅತೀ ಹೆಚ್ಚು ಜನರು ಮನೆಯ ಅಭಿವೃದ್ಧಿಯಾಯಿತು ಎಂಬ ಅಭಿಪ್ರಾಯವನ್ನು ಹಂಚಿಕೊಂಡಿರುವುದು ಕಂಡು ಬಂದಿದೆ.

- ಶಿಕ್ಷಣ ಸಾಲ ಯೋಜನೆಯನ್ನು ಇನ್ನೂ ಉತ್ತಮಗೊಳಿಸಲು ಮಾಹಿತಿದಾರರು ನೀಡಿದ ಸಲಹೆಗಳನ್ನು ನೋಡುವುದಾದರೆ 80 ಜನ ಮಾಹಿತಿದಾರರಲ್ಲಿ ಪ್ರತಿಯೊಬ್ಬರಲ್ಲಿಯೂ ಭಿನ್ನ ಭಿನ್ನವಾದ ಅಭಿಪ್ರಾಯಗಳು ಹೊರಬಂದಿದೆ. ಪ್ರಮುಖವಾಗಿ ಬಡ್ಡಿದರವನ್ನು ಕಡಿಮೆ ಮಾಡಬೇಕು, ಹೆಚ್ಚಿನ ಪ್ರೋತ್ಸಾಹವನ್ನು ಹಳ್ಳಿಯ ಮಕ್ಕಳಿಗೆ ನೀಡಬೇಕು, ವಿದ್ಯಾರ್ಥಿಗಳಿಗೆ ಓದಲು ಮನಸ್ಸು ಬರಬೇಕಾದರೆ ಅವರ ಮನೆಯ ಆರ್ಥಿಕ ಸ್ಥಿತಿ ಉತ್ತಮವಾಗಿರಬೇಕು. ಅದಿಲ್ಲವಾದಲ್ಲಿ ಮಕ್ಕಳು ಶಿಕ್ಷಣ ಶುಲ್ಕ ಪಾವತಿಸಲಾಗದೆ ಉದ್ಯೋಗದತ್ತ ಸಾಗುತ್ತಾರೆ. ಆದರೆ ಬ್ಯಾಂಕುಗಳು ಹೆಚ್ಚಿನ ವಿದ್ಯಾರ್ಥಿಗಳಿಗೆ ಈ ಶಿಕ್ಷಣ ಸಾಲ ಯೋಜನೆಯ ಲಾಭ ಒದಗಿಸಿದಲ್ಲಿ ಎಲ್ಲಾ ವಿದ್ಯಾರ್ಥಿಗಳು ತಮ್ಮ ಉನ್ನತ ಶಿಕ್ಷಣ ಪಡೆಯುವ ಕನಸು ನನಸಾಗಿಸಿಕೊಳ್ಳಲು ಸಾಧ್ಯ ಎಂಬ ಅಭಿಪ್ರಾಯ ಈ ಅಧ್ಯಯನದಿಂದ ತಿಳಿಯಬಹುದಾಗಿದೆ.

ಉಪಸಂಹಾರ

ಒಂದು ದೇಶವು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಅಭಿವೃದ್ಧಿ ಹೊಂದಬೇಕಾದರೆ ಆ ದೇಶದ ಶಿಕ್ಷಣ ಮಟ್ಟವು ಉತ್ತಮವಾಗಿದ್ದರೆ ಮಾತ್ರ ಸಾಧ್ಯ.ಶಿಕ್ಷಣ ಮಟ್ಟ ಉತ್ತಮವಾಗಬೇಕಾದರೆ ಶಿಕ್ಷಣ ಪಡೆದ ಜನರ ಸಂಖ್ಯೆಯೂ ಹೆಚ್ಚಾಗುತ್ತಾ ಸಾಗಬೇಕು.

ಪ್ರಸ್ತುತ ವಿಷಯ "ಉನ್ನತ ಶಿಕ್ಷಣದಲ್ಲಿ ಸಾಲ ಸೌಲಭ್ಯಗಳು ಉಡುಪಿ ತಾಲೂಕಿನ ಫಲಾನುಭವಿಗಳ ಒಂದು ಅಧ್ಯಯನ"ದಲ್ಲಿ ನಾವು ಪ್ರಮುಖವಾಗಿ ಅಧ್ಯಯನ ಮಾಡಿರುವಂತಹದ್ದು. ಜನರಿಗೆ ಶಿಕ್ಷಣ ಸಾಲ ಸೌಲಭ್ಯಗಳ ಬಗೆಗೆ ಅರಿವಿದೆಯೇ ಅಥವಾ ಇಲ್ಲವೇ ಹಾಗೂ ಉನ್ನತ ಶಿಕ್ಷಣ ಪಡೆಯಲು ಎಷ್ಟು ಜನರು ಉತ್ಸುಕರಾಗಿದ್ದಾರೆ ಹಾಗೂ ಯಾವ ವಿಷಯವನ್ನು ಆಯ್ಕೆ ಮಾಡಿಕೊಂಡಿದ್ದಾರೆ, ಅವರ ವಾರ್ಷಿಕ ಆದಾಯದ ಬಗೆಗೆ ತಿಳಿದುಕೊಳ್ಳುವಂತಹದ್ದು, ಬ್ಯಾಂಕು ಮತ್ತು ಗ್ರಾಹಕರ ನಡುವಿನ ಸಂಬಂಧ ಯಾವ ರೀತಿಯಲ್ಲಿದೆ, ಹಣದುಬ್ಬರದ ಬಗೆಗೆ ಮಾಹಿತಿದಾರರ ಅಭಿಪ್ರಾಯ ಹೀಗೆ ಹಲವಾರು ವಿಚಾರಗಳನ್ನು ಕುರಿತು ಅಧ್ಯಯನ ನಡೆಸಿ ಈ ಕೆಳಗಿನ ಪ್ರಧಾನ ಕಂಡುಕೊಳ್ಳುವಿಕೆಗಳನ್ನು ಗುರುತಿಸಲಾಗಿದೆ.

ಪ್ರಮುಖವಾಗಿ 21ರಿಂದ 25 ವರ್ಷದ ಒಳಗಿನವರು ತಮ್ಮ ಉನ್ನತ ಶಿಕ್ಷಣವನ್ನು ಮುಂದುವರಿಸುವ ಉದ್ದೇಶದಿಂದ ಶಿಕ್ಷಣ ಸಾಲವನ್ನು ಪಡೆಯುತ್ತಾರೆ.ಶಿಕ್ಷಣ ಸಾಲ ಪಡೆಯುವ ಹೆಚ್ಚಿನ ವಿದ್ಯಾರ್ಥಿಗಳು ಪುರುಷರಾಗಿದ್ದಾರೆ.ಹೆಚ್ಚಿನ ಜನರು ಬ್ಯಾಂಕ್‌ನ ಆಕರ್ಷಿಕ ಬಡ್ಡಿದರ ಮತ್ತು ತಮ್ಮ ಸ್ನೇಹಿತರ ಸಂಬಂಧಿಕರ ಶಿಫಾರಸ್ಸಿನ ಮೇಲೆ ಶಿಕ್ಷಣ ಸಾಲ ಸೌಲಭ್ಯ ಪಡೆಯಲು ಆಸಕ್ತಿ ತೋರುತ್ತಾರೆ. ಬ್ಯಾಂಕ್ ಸಾಲ ಪಡೆಯುವ ಹೆಚ್ಚಿನ ವಿದ್ಯಾರ್ಥಿಗಳು ಎಂ.ಬಿ.ಎ. ಪದವಿ ಶಿಕ್ಷಣ ಪಡೆಯುವವರಾಗಿದ್ದಾರೆ. ಬ್ಯಾಂಕು ಗ್ರಾಹಕ

ಸ್ನೇಹಿಯಾಗಿದ್ದು ಉತ್ತಮ ಸೇವೆ ನೀಡುತ್ತಿದೆ ಎಂಬ ಅಭಿಪ್ರಾಯವನ್ನು ಹೆಚ್ಚಿನ ಮಾಹಿತಿದಾರರು ನೀಡಿರುವುದು ಈ ಅಧ್ಯಯನದಿಂದ ತಿಳಿದುಬರುತ್ತದೆ.

ಉಡುಪಿ ತಾಲೂಕಿನ ಜನರು ಶಿಕ್ಷಣಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡುವ ಕಾರಣದಿಂದ ಬ್ಯಾಂಕುಗಳ ಶಿಕ್ಷಣ ಸಾಲ ಸೌಲಭ್ಯಗಳ ಬಗೆಗೆ ಅರಿವನ್ನು ಹೊಂದಿದ್ದಾರೆ.ಬ್ಯಾಂಕಿನ ಶಿಕ್ಷಣ ಸಾಲ ಯೋಜನೆಯ ಬಡ್ಡಿದರದ ಬಗೆಗೆ ನೋಡುವುದಾದರೆ ಕೆನರಾ ಬ್ಯಾಂಕ್‌ನಲ್ಲಿ ಹೆಚ್ಚಿನ ಬಡ್ಡಿ ಕಂಡುಬರುತ್ತಿದೆ.

ಬ್ಯಾಂಕಿನವರು ಶಿಕ್ಷಣ ಸಾಲ ಯೋಜನೆಗಳ ಬಗೆಗೆ ಗ್ರಾಮೀಣ ಮಟ್ಟದಲ್ಲಿ ಹೆಚ್ಚಿನ ಗಮನ ಹರಿಸಬೇಕಾಗಿ ಕಾಣುತ್ತಿದೆ.ಕಾರಣ ಗ್ರಾಮೀಣ ಮಟ್ಟಾದ ಜನರು ಆರ್ಥಿಕವಾಗಿ ಹಾಗೂ ಮೂಲ ಸೌಕರ್ಯಗಳಿಂದ ವಂಚಿತರಾಗಿರುತ್ತಾರೆ ಅಂತಹ ವಿದ್ಯಾರ್ಥಿಗಳಲ್ಲಿ ಉನ್ನತ ಶಿಕ್ಷಣ ಪಡೆಯುವ ಹಂಬಲವಿದ್ದರೂ ಪಡೆಯಲು ಆರ್ಥಿಕತೆಯ ಕೊರತೆ ಅವರನ್ನು ಕಾಡುತ್ತದೆ.ಆದುದರಿಂದ ಈ ವಿಚಾರದೆಡೆಗೆ ಬ್ಯಾಂಕಿನವರು ಯೋಚಿಸಬೇಕಾಗಿರುವ ಅಗತ್ಯತೆಯನ್ನು ಪ್ರಸ್ತುತ ಅಧ್ಯಾಯದಲ್ಲಿ ಕಂಡುಕೊಳ್ಳಲಾಗಿದೆ.

ಬ್ಯಾಂಕಿನ ಸವಲತ್ತುಗಳು ಪ್ರತಿಯೊಬ್ಬ ಗ್ರಾಹಕನಿಗೂ ಸುಲಭವಾಗಿ ತಿಳಿಯುವಂತೆ ಕಡಿಮೆ ಕಾರ್ಯವಿಧಾನ ಮತ್ತು ಕಡಿಮೆ ಸಮಯದಲ್ಲಿ ಗ್ರಾಹಕರ ಕೆಲಸ ಮಾಡಿ ಕೊಟ್ಟು ಗ್ರಾಹಕರ ವಿಶ್ವಾಸವನ್ನು ಬ್ಯಾಂಕಿನವರು ಉಳಿಸಿಕೊಳ್ಳ ಬೇಕಾಗಿರುವ ಅಂಶವನ್ನು ಅವಲೋಕಿಸಲಾಗಿದೆ.ಉಡುಪಿ ತಾಲೂಕಿನ ಹೆಚ್ಚಿನ ಎಲ್ಲಾ ಬ್ಯಾಂಕಿನ ಶಾಖೆಗಳು ಆಧುನೀಕರಣಗೊಂಡಿದ್ದು ಎಲ್ಲಾ ಬ್ಯಾಂಕುಗಳಲ್ಲಿ ಗ್ರಾಹಕರಿಗೆ ಉತ್ತಮ ಸೇವೆ ಲಭಿಸುತ್ತಲಿದೆ ಎಂಬುವುದು ಅಧ್ಯನದಿಂದ ದೃಢಪಟ್ಟಿದೆ.ಆದರೆ ಕೆಲವು ಮಾರ್ಪಾಟುಗಳನ್ನು ಕೂಡ ಬ್ಯಾಂಕಿನವರು ಮಾಡಬೇಕಾದ ಅವಶ್ಯಕತೆ ಇದೆ ಎಂಬುವುದನ್ನೂ ಈ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

ಪ್ರಸ್ತುತ ಅಧ್ಯಾಯದಲ್ಲಿ ಕೆನರಾ ಬ್ಯಾಂಕ್ ಮತ್ತು ಆ್ಯಕ್ಸಿಸ್ ಬ್ಯಾಂಕಿನ ಗ್ರಾಹಕರಿಂದ ಶಿಕ್ಷಣ ಸಾಲ ಯೋಜನೆಯ ಬಗೆಗೆ ಮಾಹಿತಿಯನ್ನು ಸಂಗ್ರಹಿಸಲಾಗಿದ್ದು ಈ ಬ್ಯಾಂಕುಗಳ ಬಗೆಗೆ ಜನರಲ್ಲಿ ಉತ್ತಮ ಭಾವನೆ ಇರುವುದನ್ನು ಅವಲೋಕಿಸಬಹುದು.ಆದರೆ ಕೆನರಾ ಬ್ಯಾಂಕು ಮತ್ತು ಆ್ಯಕ್ಸಿಸ್ ಬ್ಯಾಂಕ್ ಇನ್ನೂ ಹೆಚ್ಚು ತಂತ್ರಜ್ಞಾನ, ಆವಿಷ್ಕಾರಗಳನ್ನು ನಡೆಸಿ ಗ್ರಾಹಕರ ಸೇವೆಯನ್ನು ಉತ್ತಮಪಡಿಸುವ ಅಗತ್ಯತೆಯನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. ಹಾಗೆಯೇ ಶೈಕ್ಷಣಿಕ ಸಾಲ ಸೌಲಭ್ಯದಿಂದ ಅನೇಕ ಕುಟುಂಬಗಳು ಆರ್ಥಿಕವಾಗಿ, ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಿರುವುದನ್ನು ಈ ಅಧ್ಯಯನದಿಂದ ದೃಢೀಕರಿಸಲಾಗಿದೆ.

ಮುಂದಿನ ಅಧ್ಯಯನಕ್ಕಾಗಿ ಸಲಹೆಗಳು

ಈ ಮೇಲಿನ ಅಧ್ಯಯನಗಳ ಫಲಿತಗಳ ಆಧಾರದಲ್ಲಿ ಮುಂದಿನ ಅಧ್ಯಯನಕ್ಕಾಗಿ ಈ ಕೆಳಗಿನ ಸಲಹೆಗಳನ್ನು ನೀಡಲಾಗಿದೆ.

1. ಪ್ರಸ್ತುತ ಅಧ್ಯಯನ ವ್ಯಾಪ್ತಿಯು ಉಡುಪಿ ತಾಲೂಕಿಗೆ ಮಾತ್ರ ಸೀಮಿತವಾಗಿದ್ದು ಇದನ್ನು ಜಿಲ್ಲಾ ಮಟ್ಟಕ್ಕೆ ವಿಸ್ತರಿಸಬಹುದು.

2. ಈ ಅಧ್ಯಯನದಲ್ಲಿ ನಮೂನೆಯ ಗಾತ್ರ ಚಿಕ್ಕದಾಗಿದ್ದು ಮುಂದೆ ದೊಡ್ಡ ಗಾತ್ರದ ನಮೂನೆಯನ್ನು ಬಳಸಿಕೊಂಡು ಶಿಕ್ಷಣ ಸಾಲ ಸೌಲಭ್ಯಗಳು ಮತ್ತು ಗುಣಲಕ್ಷಣಗಳ ಬಗ್ಗೆ ವಿಶಾಲವಾಗಿ ಮತ್ತು ಆಳವಾಗಿ ರಾಜ್ಯ ಮಟ್ಟದಲ್ಲಿ ಅಧ್ಯಯನ ನಡೆಸಬಹುದು.

3. ರಾಷ್ಟ್ರೀಕೃತ ಬ್ಯಾಂಕ್ ಮತ್ತು ಖಾಸಗಿ ಬ್ಯಾಂಕ್‌ಗಳು ನೀಡುತ್ತಿರುವ ಶಿಕ್ಷಣ ಸಾಲ ಸೌಲಭ್ಯಗಳ ಕುರಿತು ತಾವು ನಡೆಸಿದ ಕಾರ್ಯ ಯೋಜನೆಗಳ ಒಂದು ಮೌಲ್ಯ ಮಾಪನ ಸಂಶೋಧನೆ ನಡೆಸಲು ಅವಕಾಶಗಳಿವೆ.

4. ಕರ್ನಾಟಕ ರಾಜ್ಯದಲ್ಲಿರುವ ಇತರೆ ಬ್ಯಾಂಕುಗಳ ಶಿಕ್ಷಣ ಸಾಲ ಸೌಲಭ್ಯಗಳ ಕುರಿತು ಅಧ್ಯಯನ ನಡೆಸಲು ಅವಕಾಶಗಳಿವೆ.

ಪರಾಮರ್ಶನ ಗ್ರಂಥಗಳು

ಪರಾಮರ್ಶನ ಗ್ರಂಥಗಳು

- ಕೆ.ಸಿ. ಶೇಖರ್, ಲಕ್ಷ್ಮೀ ಶೇಖರ್, 2005, "ಬ್ಯಾಂಕಿಂಗ್ ಥಿಯರಿ ಆ್ಯಂಡ್ ಪ್ರಾಕ್ಟೀಸ್", 19ನೇ ಎಡಿಷನ್, ವಿಕಾಸ್ ಪಬ್ಲಿಕೇಷನ್ ಹೌಸ್.
- ಪಿ.ಕೆ. ಶ್ರೀವಾಸ್ತವ, 2000, "ಬ್ಯಾಂಕಿಂಗ್ ಥಿಯರಿ ಆ್ಯಂಡ್ ಪ್ರಾಕ್ಟೀಸ್", 8ನೇ ಎಡಿಷನ್, ಹಿಮಾಲಯ ಪಬ್ಲಿಕೇಷನ್ ಹೌಸ್.
- ಕೆನರಾ ಬ್ಯಾಂಕ್‌ನ ಸುತ್ತೋಲೆ.
- www.abhinavjournal.com 27-5.2016, 4.45 p.m.
- www.canarabank.com
- http//:canaraeducationloan.in
- ವಿಜಯವಾಣಿ ದಿನಪತ್ರಿಕೆ
- www.ugc.ac.in
- Lt;http://www.ugc.ac.in/
- Lt;http://www.education.nic.in/
- Lt;http://www.aicte.org.in/

ಅನುಬಂಧಗಳು

ಉನ್ನತ ಶಿಕ್ಷಣದಲ್ಲಿ ಸಾಲ ಸೌಲಭ್ಯಗಳು, ಉಡುಪಿ ತಾಲೂಕಿನ ಫಲಾನುಭವಿಗಳ ಒಂದು ಅಧ್ಯಯನ
(ಕನ್ನಡ ವಿಶ್ವವಿದ್ಯಾಲಯ, ಹಂಪಿ)

ನನ್ನ ಎಂ.ಫಿಲ್ ಅಧ್ಯಯನಕ್ಕಾಗಿ ಸಿದ್ದಪಡಿಸಿದ ಈ ಪ್ರಶ್ನಾವಳಿಯಲ್ಲಿ ನೀಡಲಾದ ಪ್ರಶ್ನೆಗಳಿಗೆ ತಾವು ದಯವಿಟ್ಟು ಉತ್ತರಗಳನ್ನು ನೀಡಬೇಕಾಗಿ ಕೇಳಿಕೊಳ್ಳುತ್ತಿದ್ದೇನೆ. ನೀವು ನೀಡಲಿರುವ ಉತ್ತರಗಳನ್ನು ಅಧ್ಯಯನಕ್ಕಾಗಿ ಹೊರತು ಪಡಿಸಿ ಬೇರೆ ಯಾವುದೇ ಉದ್ದೇಶಕ್ಕೂ ಈ ಮಾಹಿತಿಗಳನ್ನು ಬಳಸುವುದಿಲ್ಲ.

ಹೆಸರು : ಮಹೇಶ ಪಿ.ಜಿ.
ಉಪನ್ಯಾಸಕರು/ಎಂ.ಫಿಲ್. ಸಂಶೋಧನಾ ವಿದ್ಯಾರ್ಥಿ
ಕ್ರಾಸ್‌ಲ್ಯಾಂಡ್ ಕಾಲೇಜು, ಬ್ರಹ್ಮಾವರ

ಪ್ರಶ್ನಾವಳಿ

೧. ಹೆಸರು ಮತ್ತು ವಿಳಾಸ :

೨. ಮೊಬೈಲ್ ಸಂಖ್ಯೆ:

೩. ವಯಸ್ಸು :
ಅ) ೧೫–೨೦ ಆ) ೨೦–೨೫ ಇ) ೨೫–೩೦
ಈ) ೩೦ ಮತ್ತು ಹೆಚ್ಚು

೪. ಲಿಂಗ :
ಅ) ಪುರುಷ ಆ) ಸ್ತ್ರೀ

೫. ಅಧ್ಯಯನ ವಿಷಯ:
ಅ. ಸಾಮಾನ್ಯ ಪದವಿ (ಬಿ.ಎ/ಬಿಕಾಂ/ಬಿಎಸ್‌ಇ)
ಆ. ಸಾಮಾನ್ಯ ಸ್ನಾತಕೊತ್ತರ (ಎಂಎ/ಎಂಕಾಂ/ಎಂಬಿಎ/ಎಂಎಸ್‌ಇ/ಎಂಎಸ್‌ಡಬ್ಲ್ಯೂ/ಎಂಫಿಲ್/ಇತ್ಯಾದಿ)
ಇ. ವೃತ್ತಿ ಪರ ಪದವಿ (ಮೆಡಿಕಲ್/ಇಂಜಿನಿಯರಿಂಗ್)
ಈ. ವೃತ್ತಿಪರ ಸ್ನಾತಕೊತ್ತರ (ಎಂಎಸ್/ಎಂಡಿ)
ಉ. ಡಾಕ್ಟರೇಟ್
ಊ. ನರ್ಸಿಂಗ್
ಋ. ಡಿಪ್ಲೋಮಾ

೬. ಸಾಲ ಪಡೆದ ಮೊತ್ತ

ಅ. ೨ ಲಕ್ಷ ಕ್ಕಿಂತ ಕಡಿಮೆ ಆ. ೨ ರಿಂದ ೫ ಲಕ್ಷ

ಇ. ೫ ರಿಂದ ೭ ಲಕ್ಷ ಈ. ೭ ಲಕ್ಷ ಕ್ಕಿಂತ ಹೆಚ್ಚು

೭. ಕುಟುಂಬದ ಒಟ್ಟು ಆದಾಯ

ಅ) ೫೦ ಸಾವಿರ ಕ್ಕಿಂತ ಕಡಿಮೆ ಆ) ೫೦ ಸಾವಿರ ರಿಂದ ೧ ಲಕ್ಷ

ಇ) ೧ ಲಕ್ಷ ದಿಂದ ೨ ಲಕ್ಷ ಈ) ೩ ಲಕ್ಷ ಕ್ಕಿಂತ ಹೆಚ್ಚು

೮. ತಾವು ಬ್ಯಾಂಕ್‌ನಿಂದ ಶಿಕ್ಷಣ ಸಾಲ ಪಡೆಯಲು ಪ್ರೇರಕ/ ಆಸಕ್ತಿಯನ್ನು ತಿಳಿಸಿರಿ

ಅ) ಸ್ಪರ್ಧಾತ್ಮಕ ಬಡ್ಡಿದರ ಆ) ಬ್ಯಾಂಕ್‌ಗಳ ಗ್ರಾಹಕ ಸ್ನೇಹಿ ನಡವಳಿಕೆಗಳಿಂದ

ಇ) ಬ್ಯಾಂಕ್ ಶಾಖೆ ಮನೆಯ ಸಮೀಪವಿರುವುದರಿಂದ

ಈ) ಗೆಳೆಯರ ಮತ್ತು ಸಂಬಂಧಿಕರ ಶಿಫಾರಸ್ಸಿನಿಂದ

೯. ಬ್ಯಾಂಕ್‌ನ ಬಡ್ಡಿದರ ಬಗ್ಗೆ ನಿಮ್ಮ ಅಭಿಪ್ರಾಯ

ಅ) ಅಧಿಕ ಬಡ್ಡಿ ಆ) ಸಾಮಾನ್ಯ ಇ)ಕಡಿಮೆ ಬಡ್ಡಿ

೧೦. ನೀವು ಈ ಬಡ್ಡಿದರದಿಂದ ಸಂತುಷ್ಟರಾಗಿದ್ದೀರಾ?

ಅ) ಹೌದು ಆ) ಇಲ್ಲ

೧೧. ನೀವು ಸಾಲ ಪಡೆಯುವಾಗ ಏನಾದರೂ ತೊಂದರೆ ಅನುಭವಿಸಿದ್ದೀರಾ?

ಅ) ಹೆಚ್ಚು ದಿನ ಕಾಯಬೇಕಾಯಿತು ಆ) ಅಧಿಕಾರಿಗಳ ಅಹಿತ ಮನೋಧರ್ಮ

ಇ) ಇತರೆ

೧೨. ಬ್ಯಾಂಕ್‌ನ ಸಿಬ್ಬಂಧಿಗಳು ನಿಮ್ಮ ತೊಂದರೆಗಳಿಗೆ ಸ್ಪಂದಿಸಿದ್ದಾರೆಯೇ?

ಅ) ಹೌದು ಆ) ಇಲ್ಲ

೧೩. ಬ್ಯಾಂಕ್‌ನವರು ತಮಗೆ ತಮ್ಮ ಸಾಲದ ಬಗ್ಗೆ ಆಗಾಗ ಪರಶೀಲನಾ ನಿಯತಕಾಲಿಕ ವರದಿಯನ್ನು ಕಳುಹಿಸುತ್ತಾರೆಯೇ?

ಅ) ಹೌದು ಆ) ಇಲ್ಲ

೧೪. ತಾವು ಸಾಲ ಮರುಪಾವತಿಸುವಲ್ಲಿ ಇತ್ತೀಚಿನ ಹಣದುಬ್ಬರದ ಭಾದೆ ತಮಗೂ ತಟ್ಟಿದೆಯೇ?

ಅ) ಹೌದು ಆ) ಇಲ್ಲ

೧೫. ತಾವು ಈ ಮೊದಲು ಈಗ ಪಡೆದ ಶಿಕ್ಷಣ ಸಾಲದ ಹೊರತಾಗಿ ಬೇರೆ ಶಿಕ್ಷಣ ಸಾಲವನ್ನೇನಾದರೂ ಪಡೆದಿರುವಿರೇ?

ಅ) ಹೌದು ಆ) ಇಲ್ಲ

೧೬. ಬ್ಯಾಂಕ್‌ಗಳ ಶಿಕ್ಷಣ ಸಾಲ ಯೋಜನೆಯ ಗುಣಮಟ್ಟ ಹೇಗಿದೆ?

ಅ) ಏನು ಸಾಲದು ಆ) ಸಾಮಾನ್ಯವಾಗಿದೆ

ಇ) ಉತ್ತಮ ಈ) ಅತ್ಯುತ್ತಮ

೧೭. ತಾವು ಬ್ಯಾಂಕ್‌ನಿಂದ ಸಾಲ ಪಡೆಯುವಾಗ ಬ್ಯಾಂಕ್‌ನವರು ತಮಗೆ ಸರಿಯಾದ ಮಾಹಿತಿಯನ್ನು ನೀಡಿರುತ್ತಾರೆಯೇ?

ಅ) ಹೌದು ಆ) ಇಲ್ಲ

೧೮. ಬ್ಯಾಂಕ್‌ನ ಸೇವೆಯಿಂದ ತಾವು ತೃಪ್ತಿಹೊಂದಿರುವಿರೇ?

ಅ) ಹೌದು ಆ) ಇಲ್ಲ

೧೯. ನೀವು ಬೇರೆಯವರಿಗೆ ಈ ಬ್ಯಾಂಕಿನ ಸಾಲ ಯೋಜನೆಗಳ ಬಗ್ಗೆ ತಿಳಿಸಲು ಇಚ್ಛಿಸುತ್ತೀರಾ?

ಅ) ಹೌದು ಆ) ಇಲ್ಲ

೨೦. ಸಾಲ ಮರುಪಾವತಿ ಅವಧಿಯ ಬಗ್ಗೆ ತಮ್ಮ ಅಭಿಪ್ರಾಯ

ಅ) ಹೆಚ್ಚು ಆ) ತುಂಬಾ ಕಡಿಮೆ

ಇ) ಬೇಕಾಗುವಷ್ಟು ಕಾಲಾವಕಾಶವಿದೆ

೨೧. ಶಿಕ್ಷಣ ಸಾಲ ಪಡೆದುದರಿಂದ ನಿಮಗೆ ಯಾವ ರೀತಿಯಾಗಿ ಅನುಕೂಲಗಳು ಆಗಿವೆ.

ಅ. ಸ್ವತಂತ್ರವಾಗಿ ಪದವಿ ಪಡೆಯಲು ಅನುಕೂವಾಯಿತು

ಆ. ಮುಂದಿನ ಶಿಕ್ಷಣಕ್ಕೆ ಸಹಾಯವಾಯಿತು.

ಇ. ಬೇಗನೆ ಉದ್ಯೋಗ ಪಡೆಯಲು ಅನುಕೂಲವಾಯಿತು

ಈ. ಮನೆಯ ಅಭಿವೃದ್ಧಿ ಆಯಿತು

ಉ. ಆದಾಯ ತೆರಿಗೆಗೆ ಸಹಕಾರಿಯಾಯಿತು

ಊ. ಮನೆಯಲ್ಲಿ ಇತರರಿಗೆ ಶಿಕ್ಷಣ ನೀಡಲು ಸಹಾಯವಾಯಿತು

೨೨. ಶಿಕ್ಷಣ ಸಾಲದ ಯೋಜನೆಯನ್ನು ಇನ್ನೂ ಉತ್ತಮಗೊಳಿಸಲು ನಿಮ್ಮ ಸಲಹೆಗಳನ್ನು ತಿಳಿಸಿರಿ.